ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 6 ಗುರುವಾರ 2023

ಸಂಪುಟ: 43 | ಸಂಚಿಕೆ: 346 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಷ್ಟ್ರಪತಿಗಳಿಂದ ಗಣ್ಯರಿಗೆ 'ಪದ್ಮ' ಪ್ರಶಸ್ತಿ ಪ್ರದಾನ






ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಡಿನ ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ(ಸಾಹಿತ್ಯ ಮತ್ತು ಶಿಕ್ಷಣ) ಹಾಗೂ ಇನ್ಫೋಸಿಸ್ ಫೌಂಡೇಶನ್‌ನ ಶ್ರೀಮತಿ ಸುಧಾಮೂರ್ತಿ (ಸಮಾಜ ಸೇವೆ) ಅವರಿಗೆ 'ಪದ್ಮಭೂಷಣ', ಕೊಡಗಿನ ಶ್ರೀಮತಿ ರಾಣಿ ಮಾಚಯ್ಯ(ಕಲೆ) ಹಾಗೂ ಡಾ.ಖಾದರ್ ವಲ್ಲಿ ದುಡೇಕುಲಾ(ವಿಜ್ಞಾನ ಮತ್ತು ಇಂಜಿನಿಯರಿಂಗ್) ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು. ಇವರನ್ನೊಳಗೊಂಡಂತೆ 53 ಗಣ್ಯರಿಗೆ ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಸಿಎಂ ಬಸವರಾಜ ಬೊಮ್ಮಾಯಿ ಜೊತೆಗೆ ಅವರು ಹೇಳಿದವರ ಪರ ನಾನು ಪ್ರಚಾರ ಮಾಡ್ತೇನೆ;

ಬಿಜೆಪಿಗೆ ನಟ ಸುದೀಪ್ ಪರೋಕ್ಷ ಬೆಂಬಲ

- ಯಾವುದೇ ಪಕ್ಷ ಸೇರಲ್ಲ; ಚುನಾವಣೆಗೂ ಸ್ಪರ್ಧಿಸಲ್ಲ
- ಸಂಕಷ್ಟದಲ್ಲಿ ಆದವರ ಪರ ನಿಲ್ಲುವುದು ನನ್ನ ಧರ್ಮ
- ಹಣಕ್ಕಾಗಿ ಈ ನಿರ್ಧಾರ ಮಾಡಿಲ್ಲ; ಹಣ ಗಳಿಸುವ ದಾರಿ ಗೊತ್ತಿದೆ
- ಬಿಜೆಪಿ ದಾರಿ ತಪ್ಪಿಸುತ್ತಿದೆ ಎಂಬ ಪ್ರಕಾಶ್‌ರಾಜ್ ಹೇಳಿಕೆಗೆ ಜಾಣ್ಮೆಯ ಪ್ರತಿಕ್ರಿಯೆ

ಬೆಂಗಳೂರು, ಏ.5(ಕೆಎಂಶಿ)–ಪ್ರಸಕ್ತ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಚಿತ್ರನಟ ಸುದೀಪ್ ಪರೋಕ್ಷವಾಗಿ ಬಿಜೆಪಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪಂಚತಾರಾ ಹೋಟೆಲ್‌ನಲ್ಲಿ ರಾಜ್ಯ ಬಿಜೆಪಿ ಘಟಕ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುದೀಪ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರು ಸೂಚಿಸುವ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡುವುದಾಗಿ ಘೋಷಣೆ ಮಾಡಿದರು. ಆದರೆ, ತಾವು ಬಿಜೆಪಿ ಸೇರಿದಂತೆ ಯಾವುದೇ ರಾಜಕೀಯ ಪಕ್ಷವನ್ನು ಸೇರುವುದಿಲ್ಲ. ಆ ಪಕ್ಷದ ಪರ ಪ್ರಚಾರ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದೀಪ್ ಅವರ ವೇದಿಕೆಯನ್ನು ಹಂಚಿಕೊಂಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ನನಗೆ ಸುದೀಪ್ ಪ್ರಚಾರ ಮಾಡಿದರೆ, ಬಿಜೆಪಿ ಪರ ಪ್ರಚಾರ ಮಾಡಿದಂತೆ ಎಂದು ಸ್ಪಷ್ಟಪಡಿಸಿದರು.

ಮನುಷ್ಯ ಮತ್ತು ಸಂಬಂಧಗಳನ್ನು ಇಟ್ಟುಕೊಂಡು ಸುದೀಪ್, ತಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಅವರನ್ನು ಎರಡು ಮೂರು ಬಾರಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಈ ತೀರ್ಮಾನ ಕೈಗೊಂಡಿದ್ದಾರೆ ಎಂದರು. ತಕ್ಷಣವೇ ಮಾತು ಮುಂದುವರಿಸಿದ ಸುದೀಪ್, ನಾನು ಯಾವುದೇ ರಾಜಕೀಯ ಪಕ್ಷಗಳ ಜತೆ ಸಂಪರ್ಕ ಹೊಂದಿಲ್ಲ. ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಾನು ಚಿತ್ರರಂಗ ಪ್ರವೇಶಿಸಿದ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದೆ. ಅಂತಹ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ನನ್ನ ಕೈಹಿಡಿದರು. ಹಾಗೆಯೇ ಸಂಕಷ್ಟದ ಸಂದರ್ಭದಲ್ಲಿ ಯಾರು ಯಾರು ಬೆರಳಿಡಿದಿದ್ದಾರೋ ಅಂಥವರ ಪರ ಪ್ರಚಾರ ಕೈಗೊಳ್ಳುತ್ತೇನೆ ಎಂದರು. ಮುಖ್ಯಮಂತ್ರಿ ಅವರನ್ನು ಆಗಿನಿಂದಲೂ ಪ್ರೀತಿಯಿಂದ ಮಾಮ ಎಂದು ಕರೆಯುತ್ತೇನೆ. ಅದೇ ಗೌರವವನ್ನು ಇಂದೂ ಇಟ್ಟುಕೊಂಡಿದ್ದೇನೆ. ಐಟಿ ದಾಳಿಗೆ ಹೆದರಿ ನಾನು ಬಿಜೆಪಿ ಸೇರಿದ್ದೇನೆ ಎಂಬುದು ಸುಳ್ಳು ಎಂದು ತಳ್ಳಿ ಹಾಕಿದರು.

ನಾನು ಯಾರಿಗೂ ಹೆದರಿ ತೀರ್ಮಾನ ತೆಗೆದುಕೊಳ್ಳುವ ವ್ಯಕ್ತಿಯಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಐಟಿ ದಾಳಿ ನಡೆದರೂ ಅಲ್ಲೇನೂ ಸಿಗಲಿಲ್ಲ ಎಂಬ ಕಾರಣಕ್ಕಾಗಿ ಆ ಎಪಿಸೋಡೇ ಮುಗಿದು ಹೋಗಿದೆ. ಈಗ ಅದನ್ನು ಕೆದಕುವ ಅಗತ್ಯವಿಲ್ಲ ಎಂದು ನಸುನಕ್ಕರು. ನಾನು ಹಣಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪರ ನಿಂತಿದ್ದೇನೆ ಎಂಬುದು ಕೂಡಾ ಸುಳ್ಳು, ನನಗೆ ಹಣ ಬೇಕೆಂದಿದ್ದರೆ ಇಲ್ಲಿ ಬರಬೇಕಿಲ್ಲ. ನನಗೆ ಕೆಪ್ಯಾಸಿಟಿ ಇದೆ. ಬೇರೆ ಕಡೆ ಹಣ ಮಾಡಬಲ್ಲೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾನು ಮಾಡಿದ ಸಿನಿಮಾಗಳಲ್ಲೇ ನನಗೆ ಅಪಾರ ಪ್ರಮಾಣದ ಹಣ ಬರಬೇಕು. ನೀವೇ ಯಾರಿಗಾದರೂ ಹೇಳಿ ಕೊಡಿಸಿ. ಇಪ್ಪತ್ತೇಳು ವರ್ಷಗಳಿಂದ ನನ್ನ ಅಭಿಮಾನಿ ಸಮೂಹ ಬೆಳೆದು ನಿಂತಿದೆ. ಆ ಅಭಿಮಾನಿಗಳಿಗೆ ನಾನು ಉತ್ತರ ಕೊಡಬೇಕು. ನನ್ನ ಈಗಿನ ತೀರ್ಮಾನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪರ ಇರುತ್ತದೆ. ಅವರು ಹೇಳಿದವರ ಪರ ಮಾತ್ರ ಇರುತ್ತದೆ ಎಂದರು.

ನಾನು ರಾಜ್ಯಾದ್ಯಂತ ತಿರುಗಿ ಪ್ರಚಾರ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ನನಗೆ ಸಿನಿಮಾ ರಂಗದಲ್ಲಿ ಬೇಕಾದಷ್ಟು ಕೆಲಸವಿದೆ. ಒಪ್ಪಿಕೊಂಡ ಚಿತ್ರಗಳನ್ನು ಮಾಡಿ ಮುಗಿಸಬೇಕಿದೆ. ಸುದೀಪ್ ಯಾವತ್ತೂ ದಾರಿ ತಪ್ಪಿದವರಲ್ಲ, ಬಿಜೆಪಿ ಅವರ ಹಾದಿ ತಪ್ಪಿಸುತ್ತದೆ ಎಂದು ನಟ ಪ್ರಕಾಶ್ ರಾಜ್ ಅವರು ಮಾಡಿದ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿದ ಅವರು, ಪ್ರಕಾಶ್ ರಾಜ್ ಅವರು ಅತ್ಯುತ್ತಮ ಕಲಾವಿದರು.ಅವರ ಜತೆ ನಾನು ಚಿತ್ರಗಳನ್ನು ಮಾಡಿದ್ದೇನೆ.ಹೊಸ ಚಿತ್ರಗಳನ್ನು ಮಾಡಲು ಉತ್ಸುಕನಾಗಿದ್ದೇನೆ ಎಂದು ಹೇಳಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ವಿರುದ್ಧ ನಲವತ್ತು ಪರ್ಸೆಂಟ್ ಕಮಿಷನ್ನಿನ ಆರೋಪವಿದೆ. ಈಗ ನೀವು ಅವರ ಪರವಾಗಿ ನಿಂತರೆ ಅಂತಹ

● 9ನೇ ಪುಟಕ್ಕೆ



"ಇದು ಹತಾಶ ಬಿಜೆಪಿಯಿಂದ ಹರಡಿದ ಸುಳ್ಳು ಸುದ್ದಿ ಎಂದು ನಾನು ಬಲವಾಗಿ ನಂಬುತ್ತೇನೆ. ಕಿಚ್ಚ ಸುದೀಪ್ ಹೆಚ್ಚು ಸಂವೇದನಾಶೀಲ ನಾಗರಿಕರಾಗಿದ್ದು, ಇದಕ್ಕೆ ಬಲಿಯಾಗುವುದಿಲ್ಲ ಎಂದೇ ನಾನು ಭಾವಿಸುತ್ತೇನೆ. ಕರ್ನಾಟಕದಲ್ಲಿ ಸೋಲುವ ಭಯದಿಂದ ಭ್ರಷ್ಟ ಬಿಜೆಪಿ ಹರಡುತ್ತಿರುವ ಸುಳ್ಳು ಸುದ್ದಿ ಇದಾಗಿರಲಿ. ನಮ್ಮ ಕಿಚ್ಚ ತಮ್ಮನ್ನು ತಾವು ಮಾರಿಕೊಳ್ಳುವವರಲ್ಲ'

– ಹಿರಿಯ ನಟ ಪ್ರಕಾಶ್ ರಾಜ್ ಟ್ವೀಟ್

ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ಫಲಕ, ಹೋರ್ಡಿಂಗ್ಸ್, ಬಂಟಿಂಗ್ಸ್, ಫ್ಲೆಕ್ಸ್, ಭಿತ್ತಿಪತ್ರ, ಕಟೌಟ್, ಗೋಡೆಬರಹ

ಸಂಪೂರ್ಣ ನಿಷೇಧ

ಮೈಸೂರು, ಏ.5– ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಘೋಷಣೆಯಾಗಿದ್ದು, ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣಾ ಆಯೋಗದ ನಿರ್ದೇಶನದಂತೆ ಹಾಗೂ The Karnataka Open Places (Prevention Of Disfigurement) Act, 1981 ಮತ್ತು ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಪ್ರಕರಣ 135ರ ಪ್ರಕಾರ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಚುನಾವಣೆಗೆ ಸಂಬಂಧಿಸಿದ ಅಥವಾ ಇನ್ನಿತರೇ ಯಾವುದೇ ರೀತಿ ಜಾಹೀರಾತು ಫಲಕ ಹೋರ್ಡಿಂಗ್ಸ್, ಬಂಟಿಂಗ್ಸ್, ಫ್ಲೆಕ್ಸ್, ಭಿತ್ರಿಪತ್ರ, ಕಟೌಟ್, ಬ್ಯಾನರ್, ಗೋಡೆಬರಹ ಇವುಗಳನ್ನು ಹಾಕುವುದು ಮತ್ತು ಅಂಟಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮೈಸೂರು ಮಹಾನಗರ ಪಾಲಿಕೆಯಿಂದ ಆದೇಶ ಹೊರಡಿಸಲಾಗಿದೆ. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಈಗಾಗಲೇ ಅನುಮತಿ ಪಡೆದಿರುವ ಅಧಿಕೃತ ಸ್ಥಳಗಳನ್ನು ಹೊರತುಪಡಿಸಿ, ಉಳಿದ ಯಾವುದೇ ಸ್ಥಳದಲ್ಲಿ ಚುನಾವಣೆಗೆ ಸಂಬಂಧಿಸಿದ ಅಥವಾ ಇನ್ನಿತರೇ ಯಾವುದೇ ರೀತಿ ಜಾಹೀರಾತು ಫಲಕ, ಹೋರ್ಡಿಂಗ್ಸ್, ಬಂಟಿಂಗ್ಸ್, ಫ್ಲೆಕ್ಸ್, ಭಿತ್ತಿಪತ್ರ, ಕಟೌಟ್, ಗೋಡೆ ಬರಹ,

● 9ನೇ ಪುಟಕ್ಕೆ

ಬಂಡೀಪುರಕ್ಕೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ ಇಂದಿನಿಂದ ಸಫಾರಿ, ಹೋಂ ಸ್ಟೇ, ರೆಸಾರ್ಟ್ ಬಂದ್

ಚಾಮರಾಜನಗರ: ಪ್ರಧಾನಿ ನರೇಂದ್ರ ಮೋದಿ ಇದೇ ಏ.9ರಂದು ಬಂಡೀಪುರ ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡುತ್ತಿದ್ದು, ಭದ್ರತೆ ದೃಷ್ಟಿಯಿಂದ ನಾಳೆಯಿಂದಲೇ ಬಂಡೀಪುರದಲ್ಲಿ ಸಫಾರಿ, ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳನ್ನು ಬಂದ್ ಮಾಡಲಾಗುತ್ತಿದೆ. ಪ್ರಧಾನಿ ಏ.9ರಂದು ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಸಫಾರಿ ನಡೆಸಲಿದ್ದಾರೆ. ಹೀಗಾಗಿ ಗುರುವಾರದಿಂದ ಬಂಡೀಪುರ ಉದ್ಯಾನವನಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ಅಲ್ಲದೆ ಬಂಡೀಪುರ ವ್ಯಾಪ್ತಿಯ ಎಲ್ಲ ಹೋಂ ಸ್ಟೇಗಳು, ರೆಸಾರ್ಟ್‌ಗಳನ್ನು ಬಂದ್ ಮಾಡಲಾಗುತ್ತಿದೆ. ಈ ಸಂಬಂಧ ಸುತ್ತೋಲೆ ಹೊರಡಿಸಿದ ಚಾಮರಾಜನಗರ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ರಸ್ತೆ ನಿರ್ವಹಣೆ, ಪೂರ್ವ ಸಿದ್ಧತೆ ಹಾಗೂ ಭದ್ರತೆ ದೃಷ್ಟಿಯಿಂದ ಸಾರ್ವಜನಿಕರಿಗೆ ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ. ಪ್ರಧಾನಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ, ಬಂಡೀಪುರವನ್ನು ತಲುಪುವ ಮಾರ್ಗದ ದುರಸ್ತಿ ಕಾರ್ಯ ನಡೆದಿದೆ. ಅಲ್ಲದೆ ಮೇಲುಕಾಮನಹಳ್ಳಿಯಲ್ಲಿಯೂ (ಸಫಾರಿ ಪಾಯಿಂಟ್) ರಸ್ತೆಗಳನ್ನು ದುರಸ್ತಿ ಮಾಡಿಸಿ, ಸಫಾರಿಗೆ ಮತ್ತಷ್ಟು ಅನುಕೂಲ ಕಲ್ಪಿಸುವಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಯು ನಿರತರಾಗಿದ್ದಾರೆ.



ವರುಣಾದಲ್ಲಿ ಸಿದ್ದರಾಮಯ್ಯ ಗೆಲುವು ಸುಲಭವಲ್ಲ

ಸಂಸದ ಶ್ರೀನಿವಾಸ್ ಪ್ರಸಾದ್ ಲೆಕ್ಕಾಚಾರ

ಮೈಸೂರು, ಏ.5(ಜಿಎ)–ಸಿದ್ದರಾಮಯ್ಯ ವರುಣಾದಲ್ಲಿ ಗೆಲ್ಲುವುದು ಸುಲಭವಲ್ಲ. ಹೀಗಾಗಿ ಕೋಲಾರದಿಂದಲೂ ಟಿಕೆಟ್ ಕೇಳುತ್ತಿದ್ದಾರೆ ಎಂದು ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ತಿಳಿಸಿದರು. ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯಗೆ ಸೋಲಿನ ಭೀತಿ ಕಾಡುತ್ತಿದೆ. ಹೀಗಾಗಿ ವರುಣಾದಲ್ಲೂ ಸ್ಪರ್ಧೆಗೆ ಮುಂದಾಗಿದ್ದಾರೆ. ವರುಣಾಗೆ ಕೇವಲ ನಾಮಪತ್ರ ಸಲ್ಲಿಸಲು ಮಾತ್ರ ಬರುತ್ತೇನೆ. ಚುನಾವಣೆ ಪ್ರಚಾರಕ್ಕೆ ಬರುವುದಿಲ್ಲ ಎಂದು ಧಿಮಾಕಿನಿಂದ ಹೇಳುತ್ತಿದ್ದಾರೆ. ಇಂತಹ ಧಿಮಾಕಿನ ಮಾತಿನಿಂದಲೇ ಸಿದ್ದರಾಮಯ್ಯಗೆ ಈ ಹಿಂದೆ ಸೋಲಾಗಿತ್ತು. ಸಿದ್ದರಾಮಯ್ಯ ಈಗ ವರುಣಾದಲ್ಲಿ ಗೆಲ್ಲುವುದು ಅಷ್ಟು ಸುಲಭವಲ್ಲ. ಹೀಗಾಗಿ ವರುಣದಲ್ಲಿ ಗೆಲ್ಲುವ ವಿಶ್ವಾಸ ಇಲ್ಲದ ಕಾರಣ ಕೋಲಾರದಿಂದಲೂ ಟಿಕೆಟ್ ಕೇಳುತ್ತಿದ್ದಾರೆ. ಸಿದ್ದರಾಮಯ್ಯ ಪಲಾಯನವಾದಿ ಎಂದು ವಾಗ್ದಾಳಿ ನಡೆಸಿದರು. ಈ ವೇಳೆ ಕಿಚ್ಚ ಸುದೀಪ್ ಬಿಜೆಪಿ ಬೆಂಬಲ ಕುರಿತು ಮಾತನಾಡಿ, ಸುದೀಪ್ ಹಾಗೂ ಸಂಸದೆ ಸುಮಲತಾ ಅವರು ಬಿಜೆಪಿಗೆ ಬೆಂಬಲ ನೀಡಿರುವುದರಿಂದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಲಿದೆ. ಮಾಜಿ ಸಚಿವ ಎಲ್.ಆರ್.ಶಿವರಾಮೇಗೌಡ ಸೇರಿದಂತೆ ಹಲವು ಮುಖಂಡರು ಬಿಜೆಪಿಗೆ ಸೇರಿರುವುದು ಒಳ್ಳೆಯ ಬೆಳವಣಿಗೆ. ಹಳೇ ಮೈಸೂರು ಭಾಗದಲ್ಲಿ ಈ ಬಾರಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಪ್ರಯತ್ನ ಮಾಡಿದ್ದು ಫಲ ನೀಡಲಿದೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಲಿದೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ರಾಜ್ಯದಲ್ಲೂ ಬಿಜೆಪಿ ಅಧಿಕಾರ ಉಳಿಸಿಕೊಳ್ಳಲಿದೆ ಎಂದು ತಿಳಿಸಿದರು.



ಚಾಮುಂಡಿಬೆಟ್ಟದಲ್ಲಿರುವ 'ಸದ್ಗುರು ಪಾಯಿಂಟ್'ನ ಹಾದಿಗೆ ಇಂಟರ್‌ಲಾಕ್ ಟೈಲ್ಸ್ ಹಾಕುವ

ಅನಧಿಕೃತ ಕಾಮಗಾರಿಗೆ ಅರಣ್ಯ ಇಲಾಖೆ ತಡೆ

ಖಾಸಗಿ ಸಂಸ್ಥೆಯಿಂದ ಅನಧಿಕೃತ ಕಾಮಗಾರಿ: ಚಾಮುಂಡಿಬೆಟ್ಟದ ಬಗ್ಗೆ ಕಳಕಳಿವುಳ್ಳವರು ದೂರು ನೀಡುವವರೆಗೂ ಅರಣ್ಯ ಇಲಾಖೆಗೆ ಇದರ ಬಗ್ಗೆ ಅರಿವೇ ಇಲ್ಲ

ಮೈಸೂರು, ಏ. 5(ಎಂಟಿವೈ)–ಚಾಮುಂಡಿಬೆಟ್ಟಕ್ಕೆ ಅಪಾಯ ತಂದೊಡ್ಡುವ ಕಾಮಗಾರಿಗಳನ್ನು ನಡೆಸಲು ಪದೇ ಪದೆ ಪ್ರಯತ್ನ ನಡೆಯುತ್ತಿದ್ದು, ಪರಿಸರವಾದಿಗಳು ಹಾಗೂ ಚಾಮುಂಡಿಬೆಟ್ಟ ಉಳಿಸಿ ಸಮಿತಿಯವರು ಹೋರಾಟ ಹಾಗೂ ಜಾಗೃತಿ ಮೂಲಕ ಚಾಮುಂಡಿಬೆಟ್ಟ ಕಾಂಕ್ರಿಟ್ ಕಾಡಾಗುವುದನ್ನು ತಪ್ಪಿಸುವ ಪ್ರಯತ್ನವನ್ನು ಸತತವಾಗಿ ಮಾಡುತ್ತಿದ್ದಾರೆ.

ಈವರೆವಿಗೂ ಸರ್ಕಾರದಿಂದ ಚಾಮುಂಡಿಬೆಟ್ಟದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುವ ಪ್ರಯತ್ನ ನಡೆಯುತ್ತಿತ್ತು. ಆದರೆ, ಇದೀಗ ಅನಾಮಿಕರು ಸಂರಕ್ಷಿತ ಅರಣ್ಯ ಪ್ರದೇಶವೂ ಆದ ಚಾಮುಂಡಿಬೆಟ್ಟದ ನಂದಿ ರಸ್ತೆಯಲ್ಲಿ ಬಂಡೆಯೊಂದರ ಬಳಿಗೆ ಇಂಟರ್‌ಲಾಕ್ ಬಳಸಿ ಸುಸಜ್ಜಿತ ಪಾದಚಾರಿ ಮಾರ್ಗವನ್ನೇ ನಿರ್ಮಿಸಿದ್ದಾರೆ. ಪರಿಸರವಾದಿಗಳ ಮಾಹಿತಿ ಮೇರೆಗೆ ಇಂದು ಸ್ಥಳಕ್ಕೆ ಭೇಟಿ ನೀಡಿದ ಅರಣ್ಯಾಧಿಕಾರಿಗಳು ಇಂಟರ್‌ಲಾಕ್ ಮತ್ತು ನಿರ್ಮಿತ ಪಾದಚಾರಿ ಮಾರ್ಗದ ಅಂಚಿಗೆ ಅಳವಡಿಸಿದ್ದ ಸಿಮೆಂಟ್ ಬ್ಲಾಕ್‌ಗಳನ್ನು ತೆರವುಗೊಳಿಸಿದ್ದಲ್ಲದೇ, ಸ್ಥಳೀಯನೇ ಆದ ಗುತ್ತಿಗೆದಾರ ದಿನೇಶ್ ಎಂಬಾತನ ವಿರುದ್ಧ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಂದಿ ರಸ್ತೆಯಲ್ಲಿ ಅರಣ್ಯದೊಳಗೆ ಕೆಲವು ಮೀಟರ್‌ಗಳ ಅಂತರದಲ್ಲಿರುವ ಬಂಡೆಯೊಂದರ ಬಳಿ ಈಶಾ ಫೌಂಡೇಷನ್ ಸಂಸ್ಥಾಪಕರಾದ ಜಗ್ಗಿ ವಾಸುದೇವ ಅವರಿಗೆ ಜ್ಞಾನೋದಯವಾಗಿದೆ ಎಂದು ಹೇಳಿಕೊಂಡು ಸದರಿ ಬಂಡೆವರೆಗೂ ಸುಮಾರು 10ರಿಂದ 12 ಮೀಟರ್ ದೂರ ಪಾದಚಾರಿ ಮಾರ್ಗ ನಿರ್ಮಿಸಲಾಗಿತ್ತು. ಈ ಬಂಡೆಗೆ ರಸ್ತೆಯಿಂದ ಸುಮಾರು 500 ಮೀಟರ್ ಅಂತರವಿರಬಹುದು ಎಂದು ಹೇಳಲಾಗಿದ್ದು, ಈ ಬಂಡೆಯನ್ನು 'ಸದ್ಗುರು ಪಾಯಿಂಟ್' ಎಂದು ಕೆಲವರು ಕರೆಯುತ್ತಿದ್ದಾರೆ. ಈ ಹಿಂದೆ ಈ ಸ್ಥಳದಲ್ಲಿ 'ಸದ್ಗುರು ಪಾಯಿಂಟ್' ಎಂಬ ಫಲಕವನ್ನು ಅಳವಡಿಸಲಾಗಿತ್ತು. ಆದರೆ, ಅನಧಿಕೃತವಾಗಿ ಅಳವಡಿಸಿದ್ದ ಫಲಕವನ್ನು ತೆರವುಗೊಳಿಸಲಾಗಿತ್ತು. ಆದರೆ, ಅನಾಮಿಕ ವ್ಯಕ್ತಿಗಳಂತೂ ಈ ಬಂಡೆಯನ್ನು 'ಸದ್ಗುರು ಪಾಯಿಂಟ್' ಎಂಬ ಹೆಸರಿನಲ್ಲಿ ಪ್ರವಾಸಿ ತಾಣ ಮಾಡುವ ಉದ್ದೇಶದಿಂದ ಸುಸಜ್ಜಿತವಾದ ಪಾದಚಾರಿ ಮಾರ್ಗ ನಿರ್ಮಿಸಲು ಮುಂದಾಗಿದ್ದಾರೆ. ಇಂದು ಅರಣ್ಯ ಇಲಾಖೆ ಅಧಿಕಾರಿಗಳು 10–12 ಮೀಟರ್ ಉದ್ದದ ಇಂಟರ್‌ಲಾಕ್ ಪಾದಚಾರಿ

● 9ನೇ ಪುಟಕ್ಕೆ



"ಚಾಮುಂಡಿಬೆಟ್ಟದಲ್ಲಿ ಕಾನೂನುಬಾಹಿರವಾಗಿ ಇಂಟರ್‌ಲಾಕ್ ಪಾದಚಾರಿ ಮಾರ್ಗ ನಿರ್ಮಿಸಲು ಕಾರಣಕರ್ತರಾದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪರಿಸರ ಬಳಗ, ಚಾಮುಂಡಿಬೆಟ್ಟ ಉಳಿಸಿ ಸಮಿತಿ ಆಗ್ರಹಿಸಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸಮಿತಿ, ಚಾಮುಂಡಿಬೆಟ್ಟದ ಮೇಲೆ ಒಂದು ಕಡೆ ಸದ್ಗುರು ಜಗ್ಗಿ ವಾಸುದೇವ್ ಅವರಿಗೆ ಜ್ಞಾನೋದಯವಾದ ಜಾಗ ಎಂದು ಗುರುತಿಸಿರುವ ಸ್ಥಳವಿದ್ದು ಅಲ್ಲಿಗೆ ಹೋಗುವ ರಸ್ತೆಗೆ ಇಂಟರ್‌ಲಾಕ್ ಸಿಮೆಂಟ್ ಇಟ್ಟಿಗೆಗಳನ್ನು ಹಾಕುವ ಕೆಲಸವನ್ನು ದಿನೇಶ್ ಎಂಬ ಗುತ್ತಿಗೆದಾರರು ಮಾಡುತ್ತಿರುವ ವಿಷಯ ಪರಿಸರ ಬಳಗ ಮತ್ತು ಚಾಮುಂಡಿಬೆಟ್ಟ ಉಳಿಸಿ ಸಮಿತಿ ಬಳಗಕ್ಕೆ ಬಂದ ಹಿನ್ನೆಲೆಯಲ್ಲಿ ಕಾನೂನುಬಾಹಿರವಾದ ಈ ಕೆಲಸವನ್ನು ತಕ್ಷಣ ನಿಲ್ಲಿಸುವಂತೆ ಬಳಗ ಮತ್ತು ಸಮಿತಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಮಾಡಿತ್ತು. ಇದಕ್ಕೆ ಸ್ಪಂದಿಸಿರುವ ಅಧಿಕಾರಿಗಳು ಕೆಲಸ ನಿಲ್ಲಿಸುವುದರ ಜೊತೆಗೆ ಗುತ್ತಿಗೆದಾರನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಈ ಗುತ್ತಿಗೆದಾರನಿಗೆ ಕಾನೂನುಬಾಹಿರವಾದ ಈ ಕೆಲಸ ವಹಿಸಿದವರ ಮೇಲೂ ಸೂಕ್ತ ಕಾನೂನು ಕ್ರಮ ಕೈಗೊಂಡು ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು ಎಂದು ಅರಣ್ಯಾಧಿಕಾರಿಗಳಿಗೆ ಮನವಿ ಮಾಡಲಾಗಿದೆ.

ಮೈಸೂರು ಮಿತ್ರ ಗುರುವಾರ 6 ಏಪ್ರಿಲ್ 2023

ಮೈಸೂರು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರ ಕೊಠಡಿಯಲ್ಲಿ ಬೆಂಕಿ ಅವಘಡ



- ಹಲವು ವಸ್ತುಗಳು ಅಗ್ನಿಗಾಹುತಿ
- 'ಬೆಂಕಿ' ಬಗ್ಗೆ ಸಿಬ್ಬಂದಿ ಅನುಮಾನ

ಮೈಸೂರು, ಏ. 5– ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕೊಠಡಿಯಲ್ಲಿ ಬೆಂಕಿ ಕಾಣಿಸಿಕೊಂಡು ಅಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಭಸ್ಮವಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಏಪ್ರಿಲ್ 2ರಂದು ಬೆಳಗ್ಗೆ 7 ಗಂಟೆ ಸುಮಾರಿನಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಶ್ರೀಕಂಠ (49) ಎಂಬುವರು ನೋಡಿದಾಗ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕೊಠಡಿಯಿಂದ ಹೊಗೆ ಬರುತ್ತಿರುವುದು ಕಂಡುಬಂದಿದೆ. ನಂತರ ಅವರು ಮತ್ತೋರ್ವ ಸಿಬ್ಬಂದಿ ಮಲ್ಲಿಕಾರ್ಜುನ್ ಅವರಿಗೆ ವಿಷಯ ತಿಳಿಸಿ, ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ನ್ಯಾಯಾಧೀಶರ ಕೊಠಡಿಯ ಕಿಟಕಿ ಗಾಜು ಒಡೆದು ನಂತರ ಒಳ ಪ್ರವೇಶಿಸಿ ನೋಡಿದಾಗ ಕೊಠಡಿಯಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಹೋಗಿರುವುದು ಕಂಡುಬಂದಿದೆ. ಈ ಬೆಂಕಿ ಅನಾಹುತ ಸಂಭವಿಸಿರುವ ಬಗ್ಗೆ ಅನುಮಾನವಿದೆ ಎಂದು ನ್ಯಾಯಾಲಯದ ಸಿಬ್ಬಂದಿ ಶ್ರೀಕಂಠ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಲಾಭದ ಆಸೆ ತೋರಿಸಿ ದಂಪತಿಗೆ 10 ಲಕ್ಷ ವಂಚನೆ: ಮಹಿಳೆ ವಿರುದ್ಧ ಕೇಸ್

ಮೈಸೂರು, ಏ. 5– ತನ್ನ ಬಳಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡುವುದಾಗಿ ನಂಬಿಸಿ ಮಹಿಳೆಯೋರ್ವಳು ದಂಪತಿಗೆ 10 ಲಕ್ಷ ರೂ. ವಂಚಿಸಿರುವ ಬಗ್ಗೆ ಉದಯಗಿರಿ ಠಾಣೆ ಪೊಲೀಸರು ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ರಾಜೀವ್‌ನಗರ ನಿವಾಸಿ ಮಹಮದ್ ಅಕ್ರಮುಲ್ಲಾ(43) ಹಾಗೂ ಅವರ ಪತ್ನಿ ವಂಚನೆಗೊಳಗಾದವರಾಗಿದ್ದು, ಗೋಕುಲಂ ನಿವಾಸಿ ಬಿ. ಯಶಸ್ವಿನಿ(30) ಆರೋಪಕ್ಕೆ ಗುರಿಯಾಗಿರುವವರು. ತಾವು ಮನೆ ಮಾರಾಟ ಮಾಡಿದ ವಿಷಯ ತಿಳಿದು ಯಶಸ್ವಿನಿಯವರು ತಮ್ಮನ್ನು ಭೇಟಿ ಮಾಡಿ ತಾನು ನಜರ್‌ಬಾದ್‌ನಲ್ಲಿರುವ ಪಬ್ಲಿಕ್ ವೆಲ್‌ಫೇರ್ ಎಜುಕೇಷನ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಮಾಲೀಕರಾಗಿದ್ದು, ತಮ್ಮ ಇಲಾಖೆಯಿಂದ ಹಲವಾರು ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ ಎಂದು ತಿಳಿಸಿದ್ದಲ್ಲದೇ ತಮ್ಮ ಬಳಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ ಎಂದು ನಂಬಿಸಿ 2016ರ ಮೇ 4ರಂದು 10 ಲಕ್ಷ ರೂ. ಪಡೆದಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

10 ಲಕ್ಷ ರೂ.ಗಳಿಗೆ ಪ್ರತಿ ತಿಂಗಳು 25 ಸಾವಿರ ಹಣ ನೀಡುವುದಾಗಿ ಬ್ಯಾಂಕ್ ಚೆಕ್‌ಗಳನ್ನು ಯಶಸ್ವಿನಿ ನೀಡಿದ್ದರು. ಆದರೆ, ಆ ಚೆಕ್‌ಗಳು ಹಣ ಇಲ್ಲದ ಕಾರಣ ಬ್ಯಾಂಕ್‌ನಲ್ಲಿ ಬೌನ್ಸ್ ಆಗಿವೆ. ಅನಂತರವೂ ಆಕೆ ಬೇರೆ ಚೆಕ್ ಕೊಟ್ಟಿದ್ದು, ಬ್ಯಾಂಕ್‌ನವರು ಸಹಿ ವ್ಯತ್ಯಾಸವಿದೆ ಎಂದು ಹಿಂತಿರುಗಿಸಿದ್ದಾರೆ. ಈಕೆ ಯಾವುದೇ ಸಂಸ್ಥೆಯನ್ನೂ ಹೊಂದಿಲ್ಲ ಎಂಬುದು ತಮಗೆ ಆ ನಂತರ ತಿಳಿದುಬಂದಿದೆ. ಈ ಮಹಿಳೆ ಹಲವರಿಗೆ ವಂಚನೆ ಮಾಡಿರುವ ಬಗ್ಗೆ ಮೈಸೂರು ನಗರ ಸಿಸಿಬಿ ಮತ್ತು ನಜರ್‌ಬಾದ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿ ಜಾಮೀನಿನ ಮೇಲೆ ಹೊರ ಬಂದಿದ್ದಾಳೆ ಎಂಬುದು ಆ ನಂತರ ನಮಗೆ ತಿಳಿದಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಗಿರವಿ ಇಟ್ಟ ಚಿನ್ನಾಭರಣ ಖರೀದಿ ನೆಪದಲ್ಲಿ ಗೋಲ್ಡ್ ಕಂಪನಿ ಫೀಲ್ಡ್ ಆಫೀಸರ್ ಸುಲಿಗೆ

ಹುಲ್ಲಹಳ್ಳಿ, ಏ. 5– ಗಿರವಿ ಇಟ್ಟಿರುವ ಚಿನ್ನಾಭರಣ ಖರೀದಿಸುವಂತೆ ಕಂಪನಿಯೊಂದರ ಫೀಲ್ಡ್ ಆಫೀಸರನ್ನು ಕರೆಸಿಕೊಂಡು ಅವರಿಂದ 98 ಸಾವಿರ ರೂ. ಸುಲಿಗೆ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಎಸ್‌ಡಿಜೆ ಗೋಲ್ಡ್ ಕಂಪನಿಯಲ್ಲಿ ಫೀಲ್ಡ್ ಆಫೀಸರ್ ಆಗಿರುವ ಮೈಸೂರಿನ ಕುವೆಂಪುನಗರ ನಿವಾಸಿ ದೇವರಾಜು(57) ಹಣ ಕಳೆದುಕೊಂಡವರಾಗಿದ್ದು, ಏಪ್ರಿಲ್ 3ರಂದು ಬೆಳಗ್ಗೆ ಗೋಲ್ಡ್ ಕಂಪನಿಯಿಂದ ಇವರಿಗೆ ಕರೆ ಮಾಡಿ ಹುಲ್ಲಹಳ್ಳಿ ಗ್ರಾಮದ ಗೋವಿಂದೇಗೌಡ ಎಂಬುವರು ಸೇಟು ಬಳಿ 24 ಗ್ರಾಂ ಚಿನ್ನ ಗಿರವಿ ಇಟ್ಟಿದ್ದಾರೆ. ಅವರನ್ನು ಭೇಟಿ ಮಾಡಿ ಚಿನ್ನವನ್ನು ಬಿಡಿಸಿಕೊಂಡು ಉಳಿಕೆ ಹಣ ಅವರಿಗೆ ಕೊಟ್ಟು ಚಿನ್ನದ ಸಮೇತ ಗೋವಿಂದೇಗೌಡರನ್ನು ಕಚೇರಿಗೆ ಕರೆತರುವಂತೆ ತಿಳಿಸಲಾಗಿದೆ. ಅದರಂತೆ ದೇವರಾಜು ಅವರು ಅಂದು ಮಧ್ಯಾಹ್ನ ಹುಲ್ಲಹಳ್ಳಿ ಬಸ್ ನಿಲ್ದಾಣ ಬಳಿ ತೆರಳಿ ಕಂಪನಿಯಿಂದ ನೀಡಿದ್ದ 6362416581 ಸಂಖ್ಯೆಯ ಮೊಬೈಲ್‌ಗೆ ಕರೆ ಮಾಡಿದಾಗ ಬಂದ ವ್ಯಕ್ತಿ ತನ್ನನ್ನು ಗೋವಿಂದೇಗೌಡ ಎಂದು ಪರಿಚಯಿಸಿಕೊಂಡು, ಪಕ್ಕದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ತಾನು ಕೆಲಸ ಮಾಡುತ್ತಿರುವುದಾಗಿಯೂ ಗಿರವಿ ಚೀಟಿಯನ್ನು ಫ್ಯಾಕ್ಟರಿಯಲ್ಲಿ ಇಟ್ಟಿದ್ದು ಅದನ್ನು ತೆಗೆದುಕೊಂಡು ಬರೋಣ ಎಂದು ದೇವರಾಜು ಅವರ ದ್ವಿಚಕ್ರ ವಾಹನದಲ್ಲೇ ಕರೆದೊಯ್ದಿದ್ದಾನೆ. ಸ್ವಲ್ಪ ದೂರ ಹೋದ ನಂತರ ಸದರಿ ವ್ಯಕ್ತಿ ಬೈಕ್ ನಿಲ್ಲಿಸುವಂತೆ ಹೇಳಿದ್ದು, ಬೈಕ್ ನಿಲ್ಲುತ್ತಿದ್ದಂತೆಯೇ ಮತ್ತಿಬ್ಬರು ಅಲ್ಲಿಗೆ ಬಂದು ದೇವರಾಜು ಅವರ ಕತ್ತಿಗೆ ಮಚ್ಚನ್ನು ಇಟ್ಟು ಹೆದರಿಸಿ ಅವರ ಬಳಿ ಇದ್ದ 98,400 ರೂ. ಹಾಗೂ ದ್ವಿಚಕ್ರ ವಾಹನದ ಕೀಯನ್ನು ಕಿತ್ತುಕೊಂಡು ಬೇರೊಂದು ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮುಂಡಿಬೆಟ್ಟದಲ್ಲಿ ಮಾರುತಿ ವ್ಯಾನ್ ಕಳವು

ಮೈಸೂರು,ಏ.5–ಚಾಮುಂಡಿಬೆಟ್ಟದ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದ ಮಾರುತಿ ಓಮ್ನಿ ಕಳುವಾಗಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಟಿ.ಕೆ. ಲೇಔಟ್ ನಿವಾಸಿ ಹೆಚ್.ಎಸ್. ಸಿದ್ದರಾಮು(60) ಅವರು ಏಪ್ರಿಲ್ 2ರಂದು ಬೆಳಗ್ಗೆ 8.56ರಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ ಪಾರ್ಕಿಂಗ್ ಸ್ಥಳದಲ್ಲಿ ತಮ್ಮ ಓಮ್ನಿ ವ್ಯಾನ್ ಅನ್ನು (ಕೆಎ 01–ಎನ್ 4209) ನಿಲ್ಲಿಸಿ, ದೇವರ ದರ್ಶನ ಮುಗಿಸಿಕೊಂಡು ಮಧ್ಯಾಹ್ನ 12.10ರಲ್ಲಿ ಹಿಂತಿರುಗಿದಾಗ ಅವರ ವ್ಯಾನ್ ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಕೆ.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಶನಿಮಹಾಶಾಂತಿ

ಮೈಸೂರು,ಏ.5–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಏ.6ರಂದು ಹುಣ್ಣಿಮೆ ಪ್ರಯುಕ್ತ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಗುರುವು ಮುಂದೆ ಮೇಷ ರಾಶಿಗೆ ಪ್ರವೇಶವಾಗುವುದರಿಂದ ಮೀನ, ಮೇಷ, ಕನ್ಯಾ, ವೃಶ್ಚಿಕ ರಾಶಿಯವರಿಗೆ ಗುರು ಮಹಾ ಶಾಂತಿ, ಉತ್ತಮ ಆರೋಗ್ಯಕ್ಕೆ ಮಹಾ ಮೃತ್ಯುಂಜಯ ಹೋಮ, ಶ್ರೀ ಸತ್ಯನಾರಾಯಣ ಪೂಜೆ, ಬಾಧಾ ನಿವಾರಕ ಮಹಾ ಸುದರ್ಶನ ಹೋಮ ಏರ್ಪಡಿಸಲಾಗಿದೆ. ಬೆಳಗ್ಗೆ 10.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ. ಆಸಕ್ತರು ಜಾತಕ ವಿಮರ್ಶಕ ಮೈ ಕುಮಾರ್ ಅವರನ್ನು ಮೊಸಂ. 9845183392 9845183399 ಮೂಲಕ ಸಂಪರ್ಕಿಸಬಹುದು.

ಏ.9ರಿಂದ ಉಚಿತ ಬೇಸಿಗೆ ಶಿಬಿರ

ಮೈಸೂರು,ಏ.5–ಮೈಸೂರಿನ ಜ್ಞಾನಸಮುದ್ರ ಸೇವಾ ಟ್ರಸ್ಟ್ ವತಿಯಿಂದ ಏ.9ರಿಂದ ಮೇ 5ರವರೆಗೆ 6 ವರ್ಷದಿಂದ 14 ವರ್ಷದ ಮಕ್ಕಳಿಗಾಗಿ ಉಚಿತ ಬೇಸಿಗೆ ಶಿಬಿರವನ್ನು ಚಾಮುಂಡಿವನ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದೆ. ಶಿಬಿರದಲ್ಲಿ ಮಕ್ಕಳಿಗೆ ಯೋಗ, ಚಿತ್ರಕಲೆ, ಕರಕುಶಲ ಹಾಗೂ ನೃತ್ಯ ಕಲೆಯನ್ನು ಹೇಳಿಕೊಡಲಾಗುವುದು. ಮಾಹಿತಿಗೆ ಮೊ. 9916393414, 98454 88969 ಸಂಪರ್ಕಿಸಬಹುದು.

ನಿಧನ



ಕರುಣಯನ ಮುದ್ದಯ್ಯ

ಮೈಸೂರು,ಏ.5–ಮೈಸೂರಿನ ಬನ್ನಿಮಂಟಪ ಸಿ ಲೇಔಟ್ ನಿವಾಸಿ, ಮಾಜಿ ಸೈನಿಕರು ಹಾಗೂ ಎಸ್‌ಬಿಐ ನಿವೃತ್ತ ನೌಕರರಾದ ಕರುಣಯನ ಮುದ್ದಯ್ಯ (72) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಕೆ.ಆರ್.ಆಸ್ಪತ್ರೆ ನಿವೃತ್ತ ಶುಶ್ರೂಷಕರಾದ ಶ್ರೀಮತಿ ಕಾಮಿನಿ ಮುದ್ದಯ್ಯ, ಪುತ್ರಿಯರಾದ ಶ್ರೀಮತಿ ಕಾವ್ಯಶ್ರೀ, ಶ್ರೀಮತಿ ಭಾಗ್ಯಶ್ರೀ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರದಂದು ಮೃತರ ಹುಟ್ಟೂರಾದ ಕೊಡಗು ಜಿಲ್ಲೆಯ ಕುಂಬಳದಾಳು ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೀತಿ ಸಂಹಿತೆ ಉಲ್ಲಂಘಿಸಿದರೆ ಕಠಿಣ ಕ್ರಮ

ಮೈಸೂರು ಜಿಲ್ಲಾ ಚುನಾವಣಾಧಿಕಾರಿ, ಡಿಸಿ ಡಾ.ರಾಜೇಂದ್ರ ಎಚ್ಚರಿಕೆ

ಮೈಸೂರು, ಏ.5–ಚುನಾವಣಾ ಸಂದರ್ಭದಲ್ಲಿ ಅಧಿಕಾರಿಗಳ ಕರ್ತವ್ಯ ಲೋಪ ಅಥವಾ ನೀತಿ ಸಂಹಿತೆಯನ್ನು ಉಲ್ಲಂಘಿಸುವಂತಹ ವಿಚಾರಗಳು ಕಂಡು ಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಎಚ್ಚರಿಸಿದರು

ಕೆ.ಆರ್.ನಗರ ತಾಲೂಕಿನ ಚುನಾವಣಾ ಸಂಬಂಧಿತ ಅಧಿಕಾರಿಗಳ ಸ್ಥಿರ ಕಣ್ಗಾವಲು ತಂಡ(SST) ಹಾಗೂ ಕ್ಷಿಪ್ರ ಕ್ರಿಯಾ ತಂಡ (FST)ಗಳಿಗೆ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಚುನಾವಣಾ ನೀತಿ ಸಂಹಿತೆಯು ಜಾರಿಯಾಗಿರುವುದರಿಂದ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ತಪಾಸಣೆ ಸಂದರ್ಭದಲ್ಲಿ ಯಾವುದೇ ರೀತಿಯ ಅನುಮಾನಾಸ್ಪದ ಅಂಶಗಳು ಕಂಡು ಬಂದಲ್ಲಿ ತಕ್ಷಣ ಸ್ಥಳದಲ್ಲಿಯೇ ಕ್ರಮವನ್ನು ಕೈಗೊಳ್ಳಬೇಕು. ಜಿಲ್ಲೆಯಾದ್ಯಂತ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ದಾಖಲೆಯಿಲ್ಲದ 50 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಸಾಗಿಸುವಂತಿಲ್ಲ. ಚುನಾವಣಾ ಅಕ್ರಮಗಳು ಕಂಡು ಬಂದರೆ ಸಿ.ವಿಜಿಲ್ ಆ್ಯಪ್ ಮೂಲಕ ಸಾರ್ವಜನಿಕರು ದೂರುಗಳನ್ನು ಸಲ್ಲಿಸಬಹುದಾಗಿದೆ. ವೋಟರ್ ಹೆಲ್ಪ್‌ಲೈನ್ ಆಪ್ 1950 ಹಾಗೂ 0821–2305656 ಗೆ ಕರೆಮಾಡಿ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಅವಶ್ಯಕ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದರು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ.ಗಾಯತ್ರಿ ಮಾತನಾಡಿ, ವಿಧಾನಸಭೆ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಫ್ಲೈಯಿಂಗ್ ಸ್ಕ್ವಾಡ್ ಹಾಗೂ ಸ್ಟಾಟಿಸ್ಟಿಕ್ ಸರ್ವೇಲೆನ್ಸ್ ತಂಡದ ಸದಸ್ಯರು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾದರಿ ನೀತಿ ಸಂಹಿತೆ ಸಮಿತಿಯ ವತಿಯಿಂದ ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೆಕ್ಟರ್ ಆಫೀಸರ್‌ಗಳು ಬೂತ್ ಲೆವೆಲ್ ಆಫೀಸರ್‌ಗಳೊಟ್ಟಿಗೆ ಸಂಪರ್ಕದಲ್ಲಿದ್ದು ಏನಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಪರಿಹರಿಸಬೇಕು ಎಂದು ತಿಳಿಸಿದರು.

ಪ್ರಾಚ್ಯ ವಸ್ತು ಸಂಗ್ರಹಾಲಯದ ಆಯುಕ್ತರಾದ ದೇವರಾಜ್ ಮಾತನಾಡಿ, ಚುನಾವಣೆ ಕರ್ತವ್ಯದಲ್ಲಿ ಯಾವುದೇ ಲೋಪಗಳು ಆಗಬಾರದು. ನಾವು ಮಾಡುವ ಕೆಲಸದಲ್ಲಿ ಅರಿವು ಇಲ್ಲದೆ ಇದ್ದಾಗ ಲೋಪಗಳು ಉಂಟಾಗುತ್ತವೆ. ಆದ್ದರಿಂದ ಈ ತರಬೇತಿ ನೀಡಲಾಗುತ್ತಿದೆ. ಈ ಹಿಂದೆ ಅಸಂಖ್ಯಾತ ಬ್ಯಾನರ್‌ಗಳು, ಮೈಕ್‌ಗಳಲ್ಲಿ ಪ್ರಚಾರ ಹೆಚ್ಚಾಗಿ ಇರುತ್ತಿತ್ತು, ಆದರೆ ಈಗ ಎಲ್ಲವೂ ನಿಯಮಬದ್ಧವಾಗಿ ಅನುಮತಿ ಪಡೆದುಕೊಂಡು ಮಾಡಬೇಕು. ಎಫ್‌ಎಸ್‌ಟಿ ತಂಡದವರಿಗೆ ತಮ್ಮ ವ್ಯಾಪ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಕೆ.ಆರ್.ನಗರ ಕ್ಷೇತ್ರದ ಚುನಾವಣಾಧಿಕಾರಿ ಸುಪ್ರೀಯ ಬನಾಗರ್, ಕಬಿನಿ ಪ್ರಾಜೆಕ್ಟ್, ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಕೆ ಸತೀಶ್, ಸಹಾಯಕ ಯೋಜನಾಧಿಕಾರಿ ಸುಬ್ರಹ್ಮಣ್ಯ ಶರ್ಮ, ತಾಲೂಕು ಮಟ್ಟದ ಸಿಬ್ಬಂದಿ ಉಪಸ್ಥಿತರಿದ್ದರು.

ಕೃಷ್ಣರಾಜನಗರ ಚೆಕ್‌ಪೋಸ್ಟ್ ಪರಿಶೀಲಿಸಿದ ಡಿಸಿ

ಮೈಸೂರು,ಏ.5–ವಿಧಾನಸಭೆ ಚುನಾವಣೆ–2023ಗೆ ಮಾದರಿ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿ ಡಾ ಕೆ.ವಿ.ರಾಜೇಂದ್ರ, ಕೃಷ್ಣರಾಜನಗರದ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ, ಪರಿಶೀಲಿಸಿದರು. ಈ ಸಂದರ್ಭದಲ್ಲಿ ಚೆಕ್‌ಪೋಸ್ಟ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಸಿಬ್ಬಂದಿಗೆ ನೀಡಲಾದ ಮೂಲಭೂತ ಸೌಕರ್ಯಗಳ ಕುರಿತು ವಿಚಾರಿಸಿದರು. ಅವರ ಕಾರ್ಯವೈಖರಿ ಪರಿಶೀಲಿಸಿದರು. ನಂತರ ಕೃಷ್ಣರಾಜನಗರದ ಪದವಿ ಕಾಲೇಜು ಸ್ಟ್ರಾಂಗ್ ರೂಮ್‌ಗೆ ಭೇಟಿ ನೀಡಿ, ಅಲ್ಲಿನ ಮೂಲಭೂತ ಸೌಕರ್ಯ, ಸಿದ್ಧತೆಗಳ ಪರಿಶೀಲನೆ ನಡೆಸಿ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಕೆ.ಆರ್.ನಗರ ತಹಶೀಲ್ದಾರ್ ಸಂತೋಷ ಹಾಗೂ ತಾಲೂಕು ಕಚೇರಿ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಮತದಾನ ಜಾಗೃತಿ ಕಾರ್ಯಕ್ರಮ



ಮೈಸೂರು, ಏ.5– ಸ್ವೀಪ್ ಕಾರ್ಯಕ್ರಮದ ಅಡಿಯಲ್ಲಿ ಮತದಾನ ಜಾಗೃತಿ ಕಾರ್ಯಕ್ರಮವನ್ನು ಏ.6ರಂದು (ನಾಳೆ) ಬೆಳಿಗ್ಗೆ 9.30ಕ್ಕೆ ಅರಮನೆಯಲ್ಲಿರುವ ವರಹಾ ದ್ವಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಚುನಾವಣಾ ರಾಯಭಾರಿ, ಮಾಜಿ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ, ಪೊಲೀಸ್ ಆಯುಕ್ತರು, ಜಿಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಮಹಾನಗರ ಪಾಲಿಕೆ ಆಯುಕ್ತರು ಉಪಸ್ಥಿತರಿರುವರು. ವಿವಿಧ ಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ಇಂದು ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮಾನ್ ಜಯಂತಿ



ಮೈಸೂರು, ಏ. 5– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮಾನ್ ಜಯಂತಿ ಅಂಗವಾಗಿ ನಾಳೆ (ಏಪ್ರಿಲ್ 6) ಬೆಳಗ್ಗೆ 6.30ಕ್ಕೆ ಸ್ವಾಮಿಗಳಿಗೆ ವಿಶೇಷ ಅಲಂಕಾರ ಹಾಗೂ ವಿವಿಧ ಬಗೆಯ ನೈವೇದ್ಯ ಮತ್ತು ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ. ಬೆಳಗ್ಗೆ 10.30ಕ್ಕೆ ಆಂಜನೇಯ ಉತ್ಸವ ಮೂರ್ತಿಯನ್ನು ದೇವಾಲಯದ ಆವರಣದಲ್ಲಿ ಪ್ರದಕ್ಷಿಣೆ ತದನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಎಸ್.ಕೃಷ್ಣಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಣಸೂರು, ತಿ.ನರಸೀಪುರ ತಾಲೂಕು ಸರ್ಕಾರಿ ಶಾಲೆಗಳಲ್ಲಿ ಅಸ್ಪೃಶ್ಯತೆ ಆಚರಣೆ ಆರೋಪ

ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಸುಮೊಟೊ ಪ್ರಕರಣ ದಾಖಲಿಸಲು ದಸಂಸ ಒತ್ತಾಯ



ಮೈಸೂರು,ಏ.5(ಪಿಎಂ)– ಹುಣಸೂರು ಮತ್ತು ತಿ.ನರಸೀಪುರ ತಾಲೂಕುಗಳ ಎರಡು ಸರ್ಕಾರಿ ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಮಕ್ಕಳ ವಿಚಾರದಲ್ಲಿ ಅಸ್ಪೃಶ್ಯತೆ ಆಚರಣೆ ನಡೆದಿದೆ ಎಂದು ಆರೋಪಿಸಿರುವ ದಲಿತ ಸಂಘರ್ಷ ಸಮಿತಿ(ದಸಂಸ), ಈ ಸಂಬಂಧ ಎಸ್‌ಪಿಯವರು ವಾರದೊಳಗೆ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಖುದ್ದಾಗಿ ಸುಮೊಟೊ (ಸ್ವಯಂಪ್ರೇರಿತ) ಪ್ರಕರಣ ದಾಖಲಿಸಲು ಕ್ರಮ ವಹಿಸಬೇಕು. ಇಲ್ಲವಾದರೆ ಎಸ್‌ಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆ ಸಂಚಾಲಕ ಚೋರನಹಳ್ಳಿ ಶಿವಣ್ಣ, ಹುಣಸೂರು ತಾಲೂಕಿನ ಬೀಜಗನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 7ನೇ ತರಗತಿ ವಿದ್ಯಾರ್ಥಿಯೊಬ್ಬನಿಂದ ನಾಯಿ ಮೂತ್ರ ವಿಸರ್ಜನೆ ಮಾಡಿದ್ದ ಮೇಲ್ವರ್ಗದ ವಿದ್ಯಾರ್ಥಿಯ ಶಾಲಾ ಬ್ಯಾಗ್ ಅನ್ನು ಶಾಲೆಯ ಸಹಶಿಕ್ಷಕ ರಾಮಕೃಷ್ಣೇಗೌಡ ಬಲವಂತವಾಗಿ ಸ್ವಚ್ಛ ಮಾಡಿಸಿದ್ದಾರೆ ಎಂದು ಆರೋಪಿಸಿದರು.

ಫೆ.7ರಂದು ಈ ಘಟನೆ ನಡೆದಿದ್ದು, ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಮೇಲಾಧಿಕಾರಿಗಳಿಗೆ ವರದಿ ಮಾಡಿದ್ದಾರೆ. ನಂತರ ಇಲಾಖೆ ಜಂಟಿ ನಿರ್ದೇಶಕರು ಕ್ರಮಕ್ಕಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಪತ್ರ ಬರೆದಿದ್ದರು. ಅಲ್ಲದೆ, ಹುಣಸೂರು ಬಿಇಓ, ವಾಸ್ತವತೆ ವರದಿಯೊಡನೆ ಸಹ ಶಿಕ್ಷಕ ರಾಮಕೃಷ್ಣೇಗೌಡರನ್ನು ಅಮಾನತಿಗೆ ಶಿಫಾರಸ್ಸು ಮಾಡಿ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಪತ್ರ ಬರೆದಿದ್ದರು. ನಂತರ ಬಿಇಓ ಅವರು ರಾಮಕೃಷ್ಣೇಗೌಡರ ಆಮಿಷಕ್ಕೊಳಗಾಗಿಯೋ ಏನೋ ಘಟನೆ ಸಂಬಂಧ ವಿದ್ಯಾರ್ಥಿ ಪೋಷಕರು ನೀಡಿದ್ದ ಪೊಲೀಸ್ ದೂರನ್ನು ಹಿಂಪಡೆದಿದ್ದಾರೆಂದು ಉಪ ನಿರ್ದೇಶಕರಿಗೆ ಮತ್ತೊಂದು ಪತ್ರ ಬರೆದು ಗೊಂದಲ ಸೃಷ್ಟಿಸಿದ್ದಾರೆ ಎಂದು ಹೇಳಿದರು.

ಈ ಪತ್ರವನ್ನೇ ನೆಪ ಮಾಡಿಕೊಂಡ ಉಪನಿರ್ದೇಶಕರು ಘಟನೆ ನಡೆದ ಒಂದೂವರೆ ತಿಂಗಳ ನಂತರ ಒಲ್ಲದ ಮನಸ್ಸಿನಿಂದ ರಾಮಕೃಷ್ಣೇಗೌಡರನ್ನು ಅಮಾನತು ಮಾಡಿದ್ದಾರೆ. ಆದರೆ ಅವರ ವಿರುದ್ಧ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಮತ್ತೊಂದು ಪ್ರಕರಣದಲ್ಲಿ ತಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಕೊಡಗಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವ ಶೌಚಾಲಯಗಳನ್ನು ಹಲವು ವರ್ಷಗಳಿಂದ ಅದೇ ಶಾಲೆಯ ಪರಿಶಿಷ್ಟ ಜಾತಿಗೆ ಸೇರಿದ ಹಲವು ಮಕ್ಕಳಿಂದ ಸ್ವಚ್ಛಗೊಳಿಸುವ ಕೆಲಸ ಮಾಡಿಸುವುದಲ್ಲದೆ, ಪರಿಶಿಷ್ಟ ಜಾತಿಗೆ ಸೇರಿದ ಈ ಮಕ್ಕಳು ಮಾತ್ರ ಶೌಚಾಲಯಗಳನ್ನು ಬಳಸದಂತೆ ನಿರ್ಬಂಧಿಸಲಾಗಿದೆ. ಮಾ.18ರಂದು ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಕುಟುಂಬಗಳ ಪರಿಶೀಲನೆ ವೇಳೆ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದರು.

ಜಿಲ್ಲೆಯಲ್ಲಿನ ಇತರೆ ಶಾಲಾ ಕಾಲೇಜುಗಳಲ್ಲಿ ಪರಿಶೀಲನೆ ನಡೆಸಿ, ಇಂತಹ ಪ್ರಕರಣಗಳು ಕಂಡಬಂದರೆ ಶಿಕ್ಷಣ ಇಲಾಖಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಕಠಿಣ ಕಾನೂನು ಜರುಗಿಸಬೇಕು ಎಂದು ಆಗ್ರಹಿಸಿದರು. ದಸಂಸ ಮುಖಂಡರಾದ ಕೆ.ವಿ.ದೇವೇಂದ್ರ, ಕಿರಂಗೂರು ಸ್ವಾಮಿ, ನಟರಾಜು, ದೇವರಾಜು, ಪ್ರಶಾಂತ್ ಸುದ್ದಿಗೋಷ್ಠಿಯಲ್ಲಿದ್ದರು.




ಶಾರದಾದೇವಿನಗರದಲ್ಲಿ ನಡೆದ ಸಮಾರಂಭದಲ್ಲಿ ಜೆಡಿಎಸ್ ಮುಖಂಡ ಸಿ.ಶೇಖರ್ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಅವರ ಸಹೋದರ ಸಿ.ಕುಮಾರ್ ಅವರೊಂದಿಗೆ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಪ್ರತಿಮಾ ಶೇಖರ್, ಮಧು, ನವೀನ್‌ಕುಮಾರ್, ಪುಟ್ಟಸ್ವಾಮಿ, ಕುಮಾರ್, ಗಂಗಾಧರ್, ಚೇತನ್, ಚೆಲುವರಾಜು, ಚೇತನ್ ಬಾಬು, ಯೋಗೇಶ್, ರಾಕೇಶ್, ನಾಗಣ್ಣ, ಮಲ್ಲಿಕ್, ಶಿವಣ್ಣ, ವಿರೂಪಾಕ್ಷ, ಚರಣ್, ಸುಂದರ್‌ರಾಜ್, ಅಯ್ಯಣ್ಣ, ಅನಿಲ್, ಚಂದನ್‌ಗೌಡ, ಮಹಿಳಾ ಮುಖಂಡರು ಉಪಸ್ಥಿತರಿದ್ದರು. ಶೇಖರ್ ಅವರನ್ನು ಶಾಸಕ ಜಿ.ಟಿ.ದೇವೇಗೌಡರು ಸಹ ಅಭಿನಂದಿಸಿದ್ದಾರೆ.

ಚಾತುರ್ಮಾಸ್ಯ ವ್ರತ: ನಾಳೆ ಪೂರ್ವಭಾವಿ ಸಭೆ



ಮೈಸೂರು,ಏ.5–ಪೇಜಾವರ ಅಧೋಕ್ಷಜ ಸಂಸ್ಥಾನದ 108 ಶ್ರೀ ವಿಶ್ವಪ್ರಸನ್ನ ತೀರ್ಥರು ಜುಲೈ 3ರಿಂದ ಸೆ.28ರವರೆಗೆ ಒಟ್ಟು 90 ದಿನಗಳ ಕಾಲ ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ವ್ರತ ಹಮ್ಮಿಕೊಂಡಿದ್ದಾರೆ. ಇದರ ಅಂಗವಾಗಿ ಚಾತುರ್ಮಾಸ್ಯದ ಸಮಯದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಶ್ರೀರಾಮಧಾಮ, ವಿಠ್ಠಲಧಾಮ, ಶ್ರೀ ಕೃಷ್ಣಧಾಮ, ಶ್ರೀ ಕೃಷ್ಣ ಮಿತ್ರ ಮಂಡಳಿ, ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀಮದುತ್ತರಾಧಿಮಠ ಧನ್ವಂತರಿ ದೇವಸ್ಥಾನ, ವೆಂಕಟಾಚಲಧಾಮ, ತೊಣಚಿಕೊಪ್ಪಲು ರಾಯರ ಮಠ, ಸುಬ್ರಾಯನಕೆರೆ ರಾಯರ ಮಠ, ಕೃಷ್ಣಮೂರ್ತಿಪುರಂ ರಾಯರ ಮಠ, ಜಯಲಕ್ಷ್ಮಿಪುರಂ ರಾಯರ ಮಠ, ಸುಬ್ರಾಯದಾಸರ ಶ್ರೀನಿವಾಸ ದೇವರ ಗುಡಿ, ವ್ಯಾಸತೀರ್ಥ ವಿದ್ಯಾಪೀಠ, ವ್ಯಾಸರಾಜ ಮಠ ಇನ್ನಿತರೆ ಧಾರ್ಮಿಕ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಚಾತುರ್ಮಾಸ್ಯ ಕಾರ್ಯಕ್ರಮ ನಡೆಯಬೇಕಾಗಿರುವುದರಿಂದ ಅದರ ಪೂರ್ವಭಾವಿಯಾಗಿ ಏ.7ರಂದು ಸಂಜೆ 5.30ಕ್ಕೆ ಶ್ರೀಕೃಷ್ಣಧಾಮದಲ್ಲಿ ಸಭೆ ಕರೆಯಲಾಗಿದೆ. ಚಾತುರ್ಮಾಸ್ಯ ಕೈಗೊಳ್ಳಲಿರುವ ಶ್ರೀ ವಿಶ್ವಪ್ರಸನ್ನ ತೀರ್ಥರು ಭಾಗವಹಿಸಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀಗಳವರ ಚಾತುರ್ಮಾಸ್ಯ ಕಾರ್ಯಕ್ರಮ ಯಶಸ್ವಿಗೆ ಸಹಕರಿಸುವ ಮೂಲಕ ಶ್ರೀ ರಾಮ ವಿಠ್ಠಲದೇವರ ಕೃಪೆಗೆ ಪಾತ್ರರಾಗಬೇಕಾಗಿ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.4.2023 ಗುರುವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ:ಹುಣ್ಣಿಮೆ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಕೆ.ಎಲ್. ಪ್ರಸನ್ನಾಕ್ಷಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಸಿ. ವಿಶ್ವನಾಥ್, ಜಯಂತಿ ವಿ. ಭಟ್, ವ್ಯಾಖ್ಯಾನ–ಡಾ. ಎನ್.ಎಸ್. ತಾರಾನಾಥ್, 7.15 ಭಾವಗೀತೆ–ಸಿ. ಅಶ್ವಥ್, ಯಶವಂತ್ ಹಳಿಬಂಡಿ. ಜನ್ನಿ ಮತ್ತು ಸಂಗಡಿಗರು, 8.30 ಗೆಲುವಿನ ಗುಟ್ಟು, ಪ್ರಹಸನ–ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.00 ಚಾರುಮತಿ ರಾಮಚಂದ್ರನ್–ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 1.00 ರಂಗಗೀತೆಗಳು–ಭಾಮಾ ಪರಿಣಯ ನಾಟಕದ ಹಾಡುಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ–ಮೈಸೂರು ಜಿ. ಗುರುರಾಜ್ ಮತ್ತು ತಂಡ, 4.30 ತುಂಬಾ ವರ್ಷಗಳ ನಂತರ ಭೇಟಿಯಾದ 4 ಗೆಳೆಯರೊಂದಿಗೆ ಆತ್ಮೀಯ ಮಾತುಕತೆ ಇವರೊಂದಿಗೆ ಭಾಗವಹಿಸಿದ್ದಾರೆ ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್ ವಾಣಿ–ಸಮಗ್ರ ಕೃಷಿ ಹಾಗೂ ಲಾಭದಾಯಕ ತರಕಾರಿಗಳ ಬೇಸಾಯದಲ್ಲಿ ತೊಡಗಿರುವ ಹೆಚ್.ಎನ್. ಶಿವಕುಮಾರ್ ಅವರೊಂದಿಗೆ ಸಂದರ್ಶನ, 8.15 ಯುವವಾಣಿ, 9.30 ಕನ್ನಡ ಭಾರತಿ

■ **ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** ವಿಶ್ವ ರಂಗಭೂಮಿ ದಿನಾಚರಣೆ ಮತ್ತು ಪ್ರದರ್ಶನ ಕಲೆಗಳು: ಶಿಕ್ಷಣ ಮತ್ತು ಪ್ರಯೋಗ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 10.30ಕ್ಕೆ ಗೋಷ್ಠಿ–1, ಉಪಸ್ಥಿತರು: ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಉಷಾ ದಾತಾರ್, ಬೆಂಗಳೂರು ಉತ್ತರ ವಿವಿ ಕುಲಸಚಿವ ಡಾ.ಡಾಮನಿಕ್, ಆಕಾಶವಾಣಿ ಕಲಾವಿದರಾದ ವಿದ್ವಾನ್ ಬಳ್ಳಾರಿ ರಾಘವೇಂದ್ರ, ಸಹಾಯಕ ಪ್ರಾಧ್ಯಾಪಕ ಡಾ.ಚಂದನ್, ಡಾ. ಪಂಚಾಕ್ಷರಿ ಗವಾಯಿ ಸಂಗೀತ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ಮೃತ್ಯುಂಜಯ ಶೆಟ್ಟರ್, ಮಧ್ಯಾಹ್ನ 2.30ಕ್ಕೆ ಗೋಷ್ಠಿ–2, ಉಪನ್ಯಾಸಕರು, ಡಿ.ಲಿಟ್ ಮತ್ತು ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನೆ, ಸಮಾರೋಪ ಸಮಾರಂಭ, ಅಧ್ಯಕ್ಷತೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ. ಬೆಟ್ಟಕೋಟೆ, ಸಮಾರೋಪ ಭಾಷಣ: ನಿವೃತ್ತ ಪ್ರಾಧ್ಯಾಪಕ ಡಾ.ಎಚ್.ಎಸ್.ಶಿವಪ್ರಕಾಶ್, ಉಪಸ್ಥಿತರು: ಸಂಗೀತ ವಿವಿ ಕುಲಸಚಿವ ಪ್ರೊ.ಟಿ.ಎಸ್.ದೇವರಾಜ, ಸ್ಥಳ: ಕೆಎಸ್‌ಜಿಎಚ್ ವಿಶ್ವವಿದ್ಯಾಲಯ ಆವರಣ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸಿ :** ಖ್ಯಾತ ಶಿಕ್ಷಣ ತಜ್ಞರಾದ ಡಾ.ಗುರುರಾಜ ಕರ್ಜಗಿಯವರೊಂದಿಗೆ "ಶಿಕ್ಷಣದಲ್ಲಿ ಪೋಷಕರ ಪಾತ್ರ" ಸಂವಾದ ಕಾರ್ಯಕ್ರಮ, ಸ್ಥಳ:ಮಾಂಗಲ್ಯ ಸಂಗಮ ಭವನ, ದಟ್ಟಗಳ್ಳಿ 3ನೇ ಹಂತ, ಕನಕದಾಸನಗರ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.


■ **ತನುಮನ ಸಂಸ್ಥೆ:** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕಜವರಪ್ಪ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ಸಾಹಿತಿ ಡಾ.ಅಮ್ಮಸಂದ್ರ ಸುರೇಶ್, ವಿಶೇಷ ತಹಸೀಲ್ದಾರ್ ಆರ್.ಶಿವಕುಮಾರ್, ವಲಯಾಧಿಕಾರಿ ಮೋಹನ್‌ಕುಮಾರ್, ವಕೀಲ ಎಲ್. ಚಂದ್ರಶೇಖರ್, ಡಾ.ಎಸ್.ನಂಜುಂಡಸ್ವಾಮಿ, ಸಿ.ಸಿದ್ದರಾಜು, ಜೆ.ರವಿ, ಎಸ್.ಕೆ.ರಾಜುಗೌಡ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 5.30ಕ್ಕೆ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–253, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪಂಡಿತ್ ಎಂ. ವೆಂಕಟೇಶ್‌ಕುಮಾರ್ ಅವರಿಂದ ಗಾಯನ, ಪಂಡಿತ್ ವೀರಭದ್ರಯ್ಯ ಹಿರೇಮಠ–ಹಾರ್ಮೋನಿಯಂ, ಪಂಡಿತ್ ಕೇಶವ ಜೋಷಿ–ತಬಲ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



■ **ಶ್ರೀ ರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗ ಸಂಸ್ಥೆ ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ಶ್ರೀಹರಿ ಭಟ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಅಮೋಘ್ ನಡದೂರ್–ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ.

■ **ಶ್ರೀ ಕಾಶೀಮಠದ ಶ್ರೀರಾಮ ಮಂದಿರ :** ರಾಮನವಮಿ ವಿಶೇಷ ಕಾರ್ಯಕ್ರಮ, ಹನುಮ ಜಯಂತಿ ಪ್ರಯುಕ್ತ ಬೆಳಗ್ಗೆ 8ಕ್ಕೆ ಅಭಿಷೇಕ, ಬೆಳಗ್ಗೆ 11ಕ್ಕೆ ಜಿಎಸ್‌ಬಿ ಮಹಿಳಾ ಭಜನಾ ಮಂಡಳಿ ಅವರಿಂದ ಭಜನೆ ಕಾರ್ಯಕ್ರಮ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿನಿಯೋಗ, ಸಂಜೆ 6.15ರಿಂದ ಶಾರದಾದೇವಿ ಮಹಿಳಾ ಸಮಾಜದವರಿಂದ ಭಜನೆ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ, ಶಿವರಾಮ ಪೇಟೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ವಿದುಷಿ ನಂದಿನಿ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಮತ್ತೂರು ಶ್ರೀನಿಧಿ–ಪಿಟೀಲು, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ವಿದ್ವಾನ್ ರಾಮಾನುಜಂ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ಕ್ಕೆ.

■ **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಮಹಾಲಕ್ಷ್ಮೀ ಸಮೇತ ಶ್ರೀ ಸತ್ಯನಾರಾಯಣ ಹೋಮ, ಸಂಜೆ 6.30 ರಿಂದ ವಿದ್ವಾನ್ ಸಿ.ಎ. ಶ್ರೀಧರ್ ಚಂದ್ರ ಮತ್ತು ವಿದ್ವಾನ್ ಸಿ.ಎಸ್. ಕೇಶವಚಂದ್ರ ಅವರಿಂದ ಗಾಯನ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ವಿದ್ವಾನ್ ಡಾ. ವಿದ್ಯಾಭೂಷಣ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಸುಮಂತ್ ಮಂಜುನಾಥ್–ವಯೋಲಿನ್, ವಿದ್ವಾನ್ ಹೆಚ್ ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಘುನಂದನರಾವ್–ಘಟಂ, ತಬಲದಲ್ಲಿ ವಿದ್ವಾನ್ ಎಂ. ನಾಗರಾಜ್–ತಬಲ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.

ಜಿಲ್ಲಾಡಳಿತದಿಂದ ಬಾಬೂಜಿ ಜನ್ಮ ದಿನಾಚರಣೆ



ಮೈಸೂರು, ಏ.5– ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 116ನೇ ಜನ್ಮದಿನದ ಪ್ರಯುಕ್ತ ರೈಲ್ವೆ ನಿಲ್ದಾಣದ ಬಾಬು ಜಗಜೀವನ್ ರಾಂ ವೃತ್ತದಲ್ಲಿ ಬಾಬು ಜಗಜೀವನ್ ರಾಮ್ ಪ್ರತಿಮೆಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾಲಾರ್ಪಣೆ ಹಾಗೂ ಪುಷ್ಪಾರ್ಚನೆ ನೆರವೇರಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅವರನ್ನು ಒಳಗೊಂಡಂತೆ ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಡಾ.ಬಾಬು ಜಗಜೀವನರಾಮ್ ಹೋರಾಟ ರಾಷ್ಟ್ರ ನಿರ್ಮಾಣಕ್ಕೆ ಬಹು ದೊಡ್ಡ ಕೊಡುಗೆ

ಕೆಪಿಎಸ್‌ಸಿ ಸದಸ್ಯೆ ಡಾ. ಶಾಂತ ಹೊಸಮನಿ ಅಭಿಮತ



ಕರಾಮುವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಬಾಬೂಜಿ 116ನೇ ಜಯಂತಿ ಸಮಾರಂಭದಲ್ಲಿ ಕೆಪಿಎಸ್‌ಸಿ ಸದಸ್ಯೆ ಡಾ.ಶಾಂತ ಹೊಸಮನಿ, ಬಾಬೂಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಏ.5(ಎಂಟಿವೈ)– ದೀನ ದಲಿತರ ಪ್ರೇರಣಾ ಶಕ್ತಿಯಾಗಿರುವ ಮಾಜಿ ಉಪ ಪ್ರಧಾನಿ, ಹಸಿರುಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಮ್ ಅವರು ನಡೆಸಿದ ಹೋರಾಟ ರಾಷ್ಟ್ರ ನಿರ್ಮಾಣಕ್ಕೆ ದೊಡ್ಡ ಕೊಡುಗೆಯಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯೆ ಡಾ.ಶಾಂತ ಹೊಸಮನಿ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಿಂದ ಕಾವೇರಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಬಾಬೂಜಿ 116ನೇ ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬಾಬೂಜಿ ಅವರಿಗೆ ಸಮಾಜಕ್ಕೆ ಮಾರಕವಾಗಿರುವ ಅಸ್ಪೃಶ್ಯತೆ ಹೋಗಲಾಡಿಸಲು ಹೋರಾಟ ಮಾಡಬೇಕೆಂಬ ಕೆಚ್ಚೆದೆ ಬಾಲ್ಯದಲ್ಲಿಯೇ ಇತ್ತು. ಶಾಲೆಯಲ್ಲಿ ಪ್ರತ್ಯೇಕವಾಗಿ ಕುಡಿಯುವ ನೀರಿನ ಮಡಕೆ ಇಟ್ಟಿದ್ದನ್ನು ಧಿಕ್ಕರಿಸಿದರು. ಸ್ವಾತಂತ್ರ್ಯ ಹೋರಾಟದ ರಾಷ್ಟ್ರ ನಿರ್ಮಾಣದಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ. ಮಹನೀಯರು, ಜನನಾಯಕರ ಜಯಂತಿ ಕಾರ್ಯಕ್ರಮದಲ್ಲಿ ಭಾಷಣ ಆಲಿಸಿ ಮನೆಗೆ ಹೋಗದೆ, ಮಹನೀಯರ ತತ್ವ, ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಜೀವನ ಉಜ್ವಲವಾಗುತ್ತದೆ ಎಂದು ತಿಳಿಸಿದರು.

ಶಾಂತಿಗಾಗಿ ರಾಜಯೋಗ: ಎಂಬಿಬಿಎಸ್, ಎಂಡಿ ಪದವಿ ಪಡೆದಾಗಲೂ ನಾನು ಪೂರ್ಣ ಪದವಿ ಪಡೆದೇ ಅನ್ನಿಸಿರಲಿಲ್ಲ. ರಾಜಯೋಗ ಕಲಿತ ಮೇಲೆ ಪೂರ್ಣತೆ ಬಂದಿತು. ಶಾಂತಿ ಇಲ್ಲದಿದ್ದರೆ ಏಕಾಗ್ರತೆ ಬರುವುದಿಲ್ಲ. ಏಕಾಗ್ರತೆಗಾಗಿ ರಾಜಯೋಗ ಧ್ಯಾನ ಮಾಡಬೇಕು. ಮಹಾತ್ಮ ಗಾಂಧೀಜಿ ಅನವಶ್ಯಕವಾದುದು ಕೇಳಬೇಡ, ಅನವಶ್ಯಕವಾಗಿ ಮಾತಾಡಬೇಡ ಎಂದಿದ್ದಾರೆ. ರಾಜಯೋಗ ಧ್ಯಾನದಲ್ಲಿ ಸಿಕ್ಕಿದ್ದೆಲ್ಲವನ್ನೂ ಆಲೋಚನೆ ಮಾಡಬೇಡಿ ಎಂಬುದನ್ನು ಕಲಿಸುತ್ತದೆ. ಎಂತಹ ಪರಿಸ್ಥಿತಿಯಲ್ಲೂ ಶಾಂತಿ, ಸಮಾಧಾನದಿಂದ ಇರುವುದನ್ನು ರಾಜಯೋಗ ಕಲಿಸುತ್ತದೆ ಎಂದರು.

ಪ್ರತ್ಯೇಕತೆ ವಿರೋಧಿಸಿದ್ದರು: ಮೈಸೂರು ವಿವಿಯ ಇತಿಹಾಸ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸದಾಶಿವ ಮಾತನಾಡಿ, ಬಾಬು ಜಗಜೀವನ್‌ರಾಮ್, ಪ್ರತ್ಯೇಕತಾ ಮನೋಭಾವ ವಿರೋಧಿಸುವವರಾಗಿದ್ದರು. ಜಾತಿ ಅಸಮಾನತೆಯನ್ನು ನಿವಾರಿಸುವ ಪ್ರಯತ್ನ ಮಾಡಿದರು. ಬಾಬೂಜಿ ಅವರ ತಂದೆ ಶೋಭಿರಾಮ್ ಅವರು ಶಿವನಾರಾಯಣೀ ಪಂಥದ ಗುರುವಾಗಿದ್ದರು. ಜಾತ್ಯಾತೀತ ನಿಲುವಿನ ಈ ಪಂಥಕ್ಕೆ ಎಲ್ಲರೂ ಜಾತಿ ಮೀರಿ ನಡೆದುಕೊಳ್ಳುತ್ತಿದ್ದರು. ಮದ್ಯಪಾನ ಸೇರಿ ಕೆಟ್ಟ ಹವ್ಯಾಸಗಳಿಂದ ವರ್ಜಿಸುವಂತೆ ಜಾಗೃತಿ ಮೂಡಿಸುತ್ತಿದ್ದರು. ಬಾಬೂಜಿ ತನ್ನ 10ನೇ ವಯಸ್ಸಿಗೆ ಜಾತಿ ನಿರ್ಬಂಧಗಳನ್ನು ಮೀರುವ ಪ್ರಯತ್ನ ಮಾಡಿದರು. ದಲಿತರು ಚಪ್ಪಲಿ ಧರಿಸಿ ನಡೆಯುವುದು, ಗಾಡಿಯಲ್ಲಿ ಪ್ರಯಾಣಿಸುವುದು ಅಪರಾಧವಾಗಿತ್ತು. ಇದನ್ನು ವಿರೋಧಿಸಿದರು. ಉತ್ತಮ ವಿದ್ಯಾರ್ಥಿಯಾಗಿ ವೈಯಕ್ತಿಕ ನಿರ್ಣಯಗಳಿಂದ ದೇಶದ ರಾಜಕಾರಣದ ಮೇಲೂ ಪ್ರಭಾವ ಬೀರಿದರು ಎಂದು ಅಭಿಪ್ರಾಯಪಟ್ಟರು.

ಬಾಬೂಜಿ ಅವರ ಅಧ್ಯಯನಕ್ಕೆ ಪೂರಕವಾದ ಯಾವುದೇ ದಾಖಲೆ ಇರಲಿಲ್ಲ. ಅವರ ಪತ್ನಿ ಇಂದ್ರಾಣಿ ಅವರು ಸಂಗ್ರಹಿಸಿದ್ದ ದಾಖಲೆಗಳ ಆಧಾರದ ಮೇಲೆ ಬಾಲ್ಯದಿಂದ ಹಿಡಿದು ಉಪ ಪ್ರಧಾನಿವರೆಗಿನ ಜೀವನಯಾನವನ್ನು ದಾಖಲಿಸಿದರು. ತದನಂತರ ಬಾಬೂಜಿ ಅವರ ತಾಯಿಯಿಂದ ಮೀರಾಕುಮಾರಿ ಅವರು ಕುಟುಂಬದ ಹಿನ್ನೆಲೆ ಮತ್ತು ಬಾಲ್ಯ ಜೀವನವನ್ನು ಬರೆದಿದ್ದಾರೆ. ಹಿಂದಿ ಭಾಷೆಯಲ್ಲಿದ್ದ ನಾಲ್ಕು ಸಂಪುಟಗಳನ್ನು ಮೈಸೂರು ವಿವಿ ಬಾಬೂಜಿ ಅಧ್ಯಯನ ಕೇಂದ್ರ ಕನ್ನಡಕ್ಕೆ ಅನುವಾದಿಸಿದೆ. ಎಲ್ಲರೂ ಓದಬೇಕಾದ ಕೃತಿಗಳಿವು ಎಂದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಪ್ರೊ.ಎಂ.ರಾಮನಾಥಂ, ಪ್ರೊ.ಕೆ.ಬಿ.ಪ್ರವೀಣ, ಡಾ.ಪವಿತ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಡಾ.ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದ ಡಾ.ಆರ್.ಶರಣಮ್ಮ ಪ್ರಸ್ತಾವಿಕ ನುಡಿಗಳನ್ನಾಡಿದರು. ಅಮ್ಮ ರಾಮಚಂದ್ರ ತಂಡದ ಸದಸ್ಯರು ನಾಡಗೀತೆ ಹಾಡಿದರು. ಶಿಕ್ಷಣಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ಜಾನಕಿ ನಿರೂಪಿಸಿದರು.

ಬಾಬು ಜಗಜೀವನರಾಂ ಆದರ್ಶ ಜೀವನ ಸದಾ ಅನುಕರಣೀಯ

ಮೈಸೂರು ವಿವಿ ಕುಲಸಚಿವೆ ಶೈಲಜಾ ಅಭಿಮತ



ಮೈಸೂರು,ಏ.5(ಎಂಟಿವೈ)– ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಾವು ಅವರಿಗೆ ಗೌರವ ಸಮರ್ಪಿಸಿದಂತಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ವಿ.ಆರ್.ಶೈಲಜಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಡಾ.ಬಾಬು ಜಗಜೀವನರಾಮ್ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲರೂ ಡಾ.ಬಾಬು ಜಗಜೀವನರಾಮ್ ಅವರ ಆದರ್ಶವನ್ನು ನಮ್ಮ ನಡೆ, ನುಡಿಯಲ್ಲಿ ಅನುಸರಿಸುವ ಅಗತ್ಯವಿದೆ. ಆಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ಇಂದು ಎಲ್ಲೆಡೆ ಸಾಮಾಜಿಕ ನ್ಯಾಯ, ಸಬಲೀಕರಣದ ಬಗ್ಗೆ ಮಾತನಾಡುತ್ತೇವೆ. ಆದರೆ ಕಷ್ಟಕರ ಸನ್ನಿವೇಶ ಇದ್ದ ಸಂದರ್ಭದಲ್ಲೇ ಡಾ.ಬಾಬು ಜಗಜೀವನ ರಾಮ್ ನಾಯಕರಾಗಿ ಹೊರಹೊಮ್ಮಿದರು. ಸಮಾಜದಲ್ಲಿ ಹಲವು ಬದಲಾವಣೆ ತಂದರು. ಈ ಹಿಂದೆ ಭಾರತ ಗೋಧಿ ನುಚ್ಚು ಪಡೆಯುವುದಕ್ಕಾಗಿ ಅಮೆರಿಕದ ಮುಂದೆ ಕೈಯೊಡ್ಡಬೇಕಾದ ದುಸ್ಥಿತಿ ಇತ್ತು. ಇದನ್ನು ಗಮನಿಸಿದ ಬಾಬು ಜಗಜೀವನ ರಾಮ್ ಅವರ ಹಸಿರುಕ್ರಾಂತಿಯಿಂದಾಗಿ ಆಹಾರ ಪದಾರ್ಥಗಳ ಉತ್ಪಾದನೆ ಪ್ರಮಾಣ ಹೆಚ್ಚಾಯಿತು. ಇಂದು ದೇಶದಲ್ಲಿ ಅಪೌಷ್ಟಿಕತೆ ಸಮಸ್ಯೆ ಇದೆ. ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಕಡಿಮೆ. ಇದಕ್ಕೆ ಪ್ರಮುಖ ಕಾರಣ ಬಾಬು ಜಗಜೀವನ ರಾಮ್ ಎನ್ನುವುದನ್ನು ಮನಗಾಣಬೇಕು ಎಂದರು.

ಡಾ.ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ವಿಸ್ತರಣೆ ಕೇಂದ್ರದ ನಿರ್ದೇಶಕ ಪ್ರೊ. ಆರ್. ತಿಮ್ಮರಾಯಪ್ಪ ಮಾತನಾಡಿ, ಕೇಂದ್ರದ ವತಿಯಿಂದ 15 ಕೃತಿಗಳನ್ನು ಹೊರತಂದಿದ್ದೇವೆ. 5 ಪುಸ್ತಕಗಳು ಪ್ರಕಟಣೆ ಹಂತದಲ್ಲಿ ಇದೆ. ಬಾಬು ಜಗಜೀವನ ರಾಮ್ ಪತ್ನಿ ಇಂದ್ರಾಣಿ ಅವರು ಬಾಬೂಜಿ ಕುರಿತು ರಚಿಸಿರುವ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದೇವೆ. ಸಾಕಷ್ಟು ಜನರಿಗೆ ಬಾಬು ಜಗಜೀವನ ರಾಮ್ ಅವರು ಕೈಗೊಂಡ ಹಸಿರು ಕ್ರಾಂತಿಯ ಕುರಿತು ಮಾತ್ರ ತಿಳಿದಿದೆ. ಆದರೆ, ಅವರು ಕಾರ್ಮಿಕ ಸಚಿವರಾಗಿ ಕಾರ್ಮಿಕರ ಅನುಕೂಲಕೋಸ್ಕರ ಹಲವಾರು ಕಾಯ್ದೆಗಳನ್ನು ರೂಪಿಸಿದರು. ಅಲ್ಲದೆ ಅವರು ನೀಡಿದ ಸಲಹೆಗಳನ್ನು ವಿಶ್ವದ ನಾನಾ ದೇಶಗಳು ಸ್ವೀಕಾರ ಮಾಡಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಬಾಬು ಜಗಜೀವನರಾಮ್ ಅಧ್ಯಯನ ಹಾಗೂ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ವಿಷಯ ತಜ್ಞ ಎನ್.ಸಿ.ಮುನಿಯಪ್ಪ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ವಿಶೇಷ ಘಟಕದ ವಿಶೇಷ ಅಧಿಕಾರಿ ಪ್ರೊ. ಎಸ್.ಮಹದೇವಮೂರ್ತಿ ಹಾಗೂ ಇತರರು ಪಾಲ್ಗೊಂಡಿದ್ದರು.



ಡಾ.ಬಾಬು ಜಗ ಜೀವನ ರಾಂ ಜಯಂತಿ ಅಂಗವಾಗಿ ಬುಧವಾರ ನಗರಪಾಲಿಕೆ ಮಾಜಿ ಸದಸ್ಯ ಆರ್.ಶಿವಣ್ಣ ನೇತೃತ್ವದಲ್ಲಿ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಮುಖಂಡರಾದ ಎಂ.ಮಹದೇವಪ್ಪ, ರಂಗಸ್ವಾಮಿ, ವೆಂಕಟೇಶ, ಮಧುಸೂದನ್, ಸಿದ್ದರಾಜು ಇತರರಿದ್ದರು.



ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವತಿಯಿಂದ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಅವರ 116ನೇ ಜಯಂತಿ ಅಂಗವಾಗಿ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು. ಓಬಿಸಿ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ಚಂದ್ರ ವಿಶ್ವಕರ್ಮ, ರಾಮಪ್ಪ, ರಮೇಶ್, ಕಾಂಗ್ರೆಸ್ ಮುಖಂಡರಾದ ವಿಶ್ವನಾಥ್, ದಿವಾಕರ್, ಮಹೇಂದ್ರ ಕಾಗಿನೆಲೆ, ರವಿನಂದನ್, ರವಿ ಕುಂಬಾರ್, ರಾಜಪ್ಪ, ಜಿ.ವೆಂಕಟೇಶ್ ಗಾಣಿಗ, ರಾಜು ರೆಡ್ಡಿ, ಸತೀಶ್, ಮಹೇಶ್, ಮಹಾದೇವ ಇನ್ನಿತರರಿದ್ದರು.



ಡಾ.ಬಾಬುಜಗಜೀವನರಾಮ್ ರವರ 116ನೇ ಜನ್ಮದಿನಾಚರಣೆಯ ಅಂಗವಾಗಿ ಅವರ ಪ್ರತಿಮೆಗೆ ಸಮಾಜಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಎನ್.ಮುನಿರಾಜು, ಅಲ್ಪಸಂಖ್ಯಾತರ ಇಲಾಖೆ ಜಿಲ್ಲಾ ಅಧಿಕಾರಿ ಕೃಷ್ಣಮೂರ್ತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಸಿದ್ದಲಿಂಗು, ಪ್ರಸಾದ್, ರಮೇಶ್, ಶಿವಪ್ಪ, ಈಶ್ವರ್ ಇದ್ದಾರೆ.

ಮಾರ್ಷಲ್ ಆರ್ಟ್ಸ್ ಬಗ್ಗೆ ಉಚಿತ ತರಬೇತಿ

ಮೈಸೂರು,ಏ.5–ಶಾಲಾ ಮಕ್ಕಳಿಗೆ ಆತ್ಮರಕ್ಷಣಾ ಕಲೆಯೊಂದಿಗೆ ಮಾರ್ಷಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಲು ಏ.30ರವರೆಗೆ ಉಚಿತ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಏ.7ರಿಂದ 30ರವರೆಗೆ ಪ್ರತಿದಿನ ಬೆಳಗ್ಗೆ 6:30ರಿಂದ 7:30ರವರೆಗೆ ನುರಿತ ಪಟುಗಳಿಂದ ತರಬೇತಿ ನೀಡಲಾಗುತ್ತದೆ. ಶಿಬಿರವು ಗೌರಿಶಂಕರ ಶಾಲೆ ಆವರಣ, ಶ್ರೀರಾಮಪುರದ ವಿವೇಕಾವಿದ್ಯಾಲಯ, ವಿವೇಕಾನಂದನಗರದ ಆರ್ಯನ್ ಕಿಡ್ಸ್, ಬೋಗಾದಿಯ ಪ್ರಗತಿ ವಿದ್ಯಾಕೇಂದ್ರ, ಬೋಗಾದಿ ರಿಂಗ್ ರಸ್ತೆಯಲ್ಲಿರುವ ಪ್ರಗತಿ ಎಲೈಟ್ ಪಬ್ಲಿಕ್ ಸ್ಕೂಲ್, ಜಲಪುರಿ ಸರ್ಕಾರಿ ಶಾಲೆ, ಚಾಮುಂಡಿಬೆಟ್ಟದ ತಪ್ಪಲಿನ ಹೊಸ ಹುಂಡಿಯಲ್ಲಿ ನಡೆಯಲಿದೆ. ಮಾಹಿತಿಗಾಗಿ 9480911311 ಸಂಪರ್ಕಿಸಬಹುದಾಗಿದೆ ಎಂದು ದ್ರೋಣಚಾರ್ಯ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ಎನ್.ದಯಾನಂದ್ ತಿಳಿಸಿದ್ದಾರೆ.

ಕಾಂಗ್ರೆಸ್ ಗೆಲುವಿನ ಭ್ರಮೆಯಿಂದ ಹೊರಬರಬೇಕು

ಡಾ.ಬಾಬು ಜಗಜೀವನರಾಂ ಜಯಂತಿಯಲ್ಲಿ ರಂಗಕರ್ಮಿ ಬಸವಲಿಂಗಯ್ಯ ಸಲಹೆ



ಮೈಸೂರು ರೈಲ್ವೆ ನಿಲ್ದಾಣದ ಬಳಿ ಇರುವ ಕಾಂಗ್ರೆಸ್ ಭವನದಲ್ಲಿ ಬುಧವಾರ ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಾಬೂಜಿ ಅವರ ಭಾವಚಿತ್ರಕ್ಕೆ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಡಾ.ಡಿ.ತಿಮ್ಮಯ್ಯ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್, ಮುಖಂಡ ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಏ.5(ಜಿಎ)–ಕಾಂಗ್ರೆಸ್ ಪಕ್ಷವು ಚುನಾವಣೆಯನ್ನು ಗೆದ್ದೇ ಬಿಡುತ್ತೇವೆ ಎಂಬ ಭ್ರಮೆಯಿಂದ ಹೊರಬಂದು ಕೆಲಸ ಮಾಡಬೇಕು. ಯಾಕೆಂದರೆ, ಬಿಜೆಪಿ ಬಿಹಾರ, ಉತ್ತರ ಪ್ರದೇಶದಿಂದ ಕಾರ್ಯಕರ್ತರನ್ನು ಕರೆತಂದು ಅಪಪ್ರಚಾರ ಪ್ರಾರಂಭಿಸಲಿದೆ. ಈ ಬಗ್ಗೆ ಎಚ್ಚರವಾಗಿರಬೇಕಿದೆ ಎಂದು ರಾಷ್ಟ್ರೀಯ ರಂಗಶಾಲೆಯ ನಿಕಟಪೂರ್ವ ನಿರ್ದೇಶಕ ಬಸವಲಿಂಗಯ್ಯ ಸಲಹೆ ನೀಡಿದರು.

ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಆಯೋಜಿಸಿದ್ದ ಡಾ.ಬಾಬು ಜಗಜೀವನರಾಂ ಜಯಂತಿಯಲ್ಲಿ ಮಾತನಾಡಿದ ಅವರು, ನಾನು ಯಾವುದೇ ಪಕ್ಷದ ಕಾರ್ಯಕರ್ತನಲ್ಲ. ಆದರೆ, ಕಡ್ಡಾಯವಾಗಿ ಮತದಾನ ಮಾಡುತ್ತೇನೆ. ಅದು ನನ್ನ ಹಕ್ಕು. ಇಲ್ಲಿಗೆ ಬಂದಿರುವುದಕ್ಕೆ ಡಾ.ಬಾಬು ಜಗಜೀವನರಾಂ ಅವರು ಮುಖ್ಯ ಕಾರಣವಾಗಿದೆ. ಇಂದು ಎಲ್ಲರೂ ಭಾರತವನ್ನು ವಿಶ್ವಗುರು ಎಂದು ಹೇಳುತ್ತಿದ್ದಾರೆ. ಆದರೆ, ಭಾರತವು ಬುದ್ಧ, ಮಹಾವೀರ, ಗಾಂಧೀಜಿ ಕಾಲದಲ್ಲೇ ವಿಶ್ವಗುರುವಾಗಿತ್ತು. ಅವರ ತತ್ವಗಳನ್ನು ಜಗತ್ತೇ ಒಪ್ಪಿಕೊಂಡಿತ್ತು ಎಂದರು.

ಜಗಜೀವನರಾಂ ತಾವು ಬದುಕಿದ 78 ವರ್ಷಗಳಲ್ಲಿ ಅರ್ಧ ಶತಮಾನವನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್‌ನ ಜೊತೆಗೆ ಕಳೆದಿದ್ದರು. ಪಕ್ಷದ ಅನೇಕ ಜವಾಬ್ದಾರಿಗಳನ್ನು ನಿಭಾಯಿಸುವ ಅವಕಾಶ ಬಂದರೂ, ಜಾತಿ ವ್ಯವಸ್ಥೆಯ ಕಾರಣದಿಂದ ಪ್ರಧಾನಿಯಾಗುವ ಅವಕಾಶ ತಪ್ಪಿದ್ದು ವಿಷಾದನೀಯ. ಮುಂದೆ ಉಪಪ್ರಧಾನಿಯಾದಾಗಲೂ ಅನೇಕ ಅವಮಾನಗಳನ್ನು ಕಂಡರು. ಹೀಗಾಗಿಯೇ ಅವರು ಸದಾ ದಮನಿತರ ಧ್ವನಿಯಾಗಿ ಕೆಲಸ ಮಾಡಿದರು ಎಂದರು.

ಕಾಲೇಜು ರಜೆಗಳು ಆರಂಭವಾಗಿದ್ದು, ವಿದ್ಯಾರ್ಥಿಗಳನ್ನು ಈಗಾಗಲೇ ರಾಜಕೀಯ ಪಕ್ಷಗಳು ಬುಕ್ ಮಾಡಿಕೊಂಡಿರುತ್ತವೆ. 18 ವರ್ಷ ಮೇಲ್ಪಟ್ಟವರಿಗೆ ಮತದಾನದ ಹಕ್ಕು ಇರುವುದರಿಂದ ಹದಿಹರೆಯದ ಯುವಕರು ಪಕ್ಷಗಳು ನೀಡುವ ಹಣದಾಸೆಗೆ ಕೆಲಸ ಮಾಡುತ್ತಿದ್ದಾರೆ. ಇದು ಭವಿಷ್ಯದಲ್ಲಿ ಆತಂಕಕ್ಕೆ ಕಾರಣವಾಗುತ್ತದೆ. ಆದ್ದರಿಂದ ಮತದಾನದ ವಯೋಮಿತಿಯನ್ನು 21 ವರ್ಷ ಮೇಲ್ಪಟ್ಟವರಿಗೆ ನೀಡುವುದು ಉತ್ತಮ ಎಂದು ಅವರು ತಿಳಿಸಿದರು.

ಬಿಜೆಪಿಯು ಅನೇಕ ಮಹನೀಯರ ಚರಿತ್ರೆಯನ್ನು ತಮಗೆ ಬೇಕಾದಂತೆ ತಿರುಚಿದೆ. ಕಾಂಗ್ರೆಸ್‌ನ ಪಟೇಲರನ್ನು ಹೈಜಾಕ್ ಮಾಡಿದ್ದಾರೆ. ಆದರೆ, ಜಗಜೀವನ್ ರಾಂ ಅವರನ್ನು ಹೈಜಾಕ್ ಮಾಡದಿರುವುದು ಅದೃಷ್ಟ. ಬಿಜೆಪಿಯು ರಾಹುಲ್ ಗಾಂಧಿ ಅವರಿಗೆ ಪಪ್ಪು ಎಂದು ಹೆಸರು ಬರಲು ಸಾವಿರಾರು ಕೋಟಿ ರೂ. ಖರ್ಚು ಮಾಡಿದೆ ಎಂದು ಆರೋಪಿಸಿದರು.

ಸಂವಿಧಾನವು ಎಲ್ಲಾ ಧರ್ಮಗಳನ್ನು ಸಮಾನವಾಗಿ ಒಪ್ಪಿಕೊಂಡಿರುವಾಗ ಧರ್ಮದ ಆಧಾರದಲ್ಲಿ ರಾಜಕೀಯ ಮಾಡುವುದು ಎಷ್ಟು ಸರಿ ಎಂಬುದರ ವಿಮರ್ಶೆ ಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವ ಆತಂಕದಲ್ಲಿರುವಾಗ ಕಲಾವಿದರು ಸುಮ್ಮನಿರಲಾರದೆ ಆಡಳಿತ ಪಕ್ಷವನ್ನು ಪ್ರಶ್ನಿಸಿದರೆ ನಮ್ಮನ್ನು ಹರ್ಬನ್ ನಕ್ಸಲ್, ತುಕುಡೇ ಗ್ಯಾಂಗ್ ಎಂಬ ಪಟ್ಟ ಕಟ್ಟಲಾಗುತ್ತಿದೆ ಎಂದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಬಾಬು ಜಗಜೀವನ ರಾಂ ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕರು. ಹಸಿರುಕ್ರಾಂತಿಯಂತಹ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಶಾಸಕ ಡಾ.ಡಿ.ತಿಮ್ಮಯ್ಯ, ಮುಖಂಡರಾದ ಶಿವಣ್ಣ, ಮುನಿಯಪ್ಪ, ಸುಧಾ ಮಹದೇವ, ಮಂಜುಳಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾರಿಗೆ ಬಸ್ಸಿನಲ್ಲಿ ಸಾಗಿಸುತ್ತಿದ್ದ 11.79 ಲಕ್ಷ ರೂ. ನಗದು ವಶ

ರಮ್ಮನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ಸಂಜೆ ಹಣ ಪತ್ತೆ

ಮೈಸೂರು, ಏ. 5(ಆರ್‌ಕೆ)– ಕೆಎಸ್ ಆರ್‌ಟಿಸಿ ಬಸ್ಸಿನಲ್ಲಿ ಸಾಗಿಸುತ್ತಿದ್ದ 11.79 ಲಕ್ಷ ರೂ. ನಗದನ್ನು ಮೈಸೂರಿನ ಹೊರವಲಯದ ರಮ್ಮನಹಳ್ಳಿ ಬಳಿಯ ಚೆಕ್ ಪೋಸ್ಟ್‌ನಲ್ಲಿ ಮಂಗಳವಾರ ಸಂಜೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಮಹದೇವಪುರದಿಂದ ಮೈಸೂರಿಗೆ ಬರುತ್ತಿದ್ದ ಸಾರಿಗೆ ಬಸ್ ಅನ್ನು ರಮ್ಮನಹಳ್ಳಿ ಬಳಿಯ ಚೆಕ್‌ಪೋಸ್ಟ್‌ನಲ್ಲಿ ನಿಲ್ಲಿಸಿ ತಪಾಸಣೆ ಮಾಡಿದ ಸ್ಟ್ಯಾಟಿಕ್ ಸರ್ವೆಲನ್ಸ್ ಮತ್ತು ಫ್ಲೈಯಿಂಗ್ ಸ್ಕ್ವಾಡ್ ತಂಡದ ಅಧಿಕಾರಿಗಳಿಗೆ ವ್ಯಕ್ತಿಯೋರ್ವ ಕೊಂಡೊಯ್ಯುತ್ತಿದ್ದ 11.79 ಲಕ್ಷ ರೂ. ನಗದು ಪತ್ತೆಯಾಯಿತು.

ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಒಬ್ಬ ವ್ಯಕ್ತಿ 50 ಸಾವಿರ ರೂ.ಗಿಂತ ಹೆಚ್ಚಿಗೆ ಹಣವನ್ನು ಕೊಂಡೊಯ್ಯುವಂತಿಲ್ಲ ಎಂಬ ಮಾಹಿತಿ ನೀಡಿದ್ದರೂ, ಅಧಿಕ ಪ್ರಮಾಣದ ಹಣ ಸಾಗಿಸುತ್ತಿದ್ದರಿಂದ ಮಹಜರು ನಡೆಸಿದ ಅಧಿಕಾರಿಗಳು ಎನ್‌ಸಿಆರ್ ಮಾಡಿ ಹಣವನ್ನು ವಶಪಡಿಸಿಕೊಂಡು ಜಿಲ್ಲಾ ಖಜಾನೆಯಲ್ಲಿರಿಸಲಾಗಿದೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ ಕಮಲಾಬಾಯಿ ತಿಳಿಸಿದ್ದಾರೆ.

ಡಿಸ್ಟ್ರಿಕ್ಟ್ ಕ್ಯಾಶ್ ಸೀಜರ್ ರಿಡ್ರೆಸಲ್ ಕಮಿಟಿ ಸದಸ್ಯರು ಈ ಸಂಬಂಧ ವಿಚಾರಣೆ ನಡೆಸಿ ಹಣ ಎಲ್ಲಿಂದ, ಎಲ್ಲಿಗೆ ಯಾವ ಉದ್ದೇಶಕ್ಕೆ ಕೊಂಡೊಯ್ಯಲಾಗುತ್ತಿತ್ತು. ಪೂರಕ ದಾಖಲೆ ಇದೆಯೇ ಎಂಬುದನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವರು ಎಂದ ಅವರು, 11.79 ಲಕ್ಷ ರೂ.ಗಳಾಗಿರುವುದರಿಂದ ಈ ವಿಷಯವನ್ನು ಆದಾಯ ತೆರಿಗೆ ಇಲಾಖೆಗೂ ತಿಳಿಸಲಾಗಿದ್ದು, ಅವರೂ ಸಹ ಪ್ರತ್ಯೇಕವಾಗಿ ವಿಚಾರಣೆ ನಡೆಸುವರು ಎಂದರು.

ಸದ್ಯಕ್ಕೆ ಆ ಹಣ ಅಕ್ರಮವೋ, ದಾಖಲೆಗಳನ್ನು ಹೊಂದಿರುವ ಅಧಿಕೃತವೋ ಎಂಬುದು ತಿಳಿದಿಲ್ಲ. ವಿಚಾರಣೆ ನಡೆಸುವ ಅಧಿಕಾರಿಗಳು ನಿರ್ಧರಿಸುತ್ತಾರೆ. ಅಲ್ಲಿವರೆಗೆ ಹಣ ಕೊಂಡೊಯ್ಯುತ್ತಿದ್ದ ವ್ಯಕ್ತಿಯ ಮಾಹಿತಿ ನೀಡಲಾಗುವುದಿಲ್ಲ ಎಂದರು.

ಈವರೆಗೆ ಜಿಲ್ಲೆಯಲ್ಲಿ 29,79,500 ರೂ. ನಗದನ್ನು ಆದಾಯ ತೆರಿಗೆ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಸ್ಟ್ಯಾಟಿಕ್ ಸರ್ವಲನ್ಸ್ ಟೀಂನಿಂದ 71,81,855 ರೂ. ಹಾಗೂ ಫ್ಲೈಯಿಂಗ್ ಸ್ಕ್ವಾಡ್‌ನಿಂದ 11,36,630 ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ. 137 ಗ್ರಾಂ ಚಿನ್ನ, 19,69,647 ರೂ. ಮೌಲ್ಯದ ಆಹಾರ ಕಿಟ್‌ಗಳು, 26,320 ರೂ. ಮೌಲ್ಯದ ಕಿಚನ್ ಐಟಂಗಳನ್ನು ವಶಪಡಿಸಿಕೊಂಡು, 1,52,57,800 ರೂ. ಮೌಲ್ಯದ 59, 868.21 ಲೀಟರ್ ಮದ್ಯ ನಾಶಪಡಿಸಲಾಗಿದೆಯಲ್ಲದೆ 25,000 ರೂ. ಬೆಲೆಬಾಳುವ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದ್ವಿದಳ ಧಾನ್ಯಗಳ ಬೆಳೆಗೆ ಪ್ರೋತ್ಸಾಹ

ಮೈಸೂರು, ಏ.5– 2023–24ರ ನವ ಮುಂಗಾರು ಹಂಗಾಮಿನಲ್ಲಿ ದ್ವಿದಳ ಧಾನ್ಯ, ಎಣ್ಣೆ ಕಾಳು ಹಾಗೂ ಹತ್ತಿ ಬೀಜಗಳ ಅವಶ್ಯಕತೆ ಇದ್ದು, ಸದರಿ ಬಿತ್ತನೆ ಬೀಜಗಳನ್ನು ಜಿಲ್ಲೆಯ ಪರಿಕರ ಮಾರಾಟಗಾರರಿಂದ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ತಾಲೂಕಿನಲ್ಲಿ ಇರುವ ಚಿಲ್ಲರ ಬಿತ್ತನೆ ಬೀಜ ಮಾರಾಟಗಾರರ ಬಳಿ ಬಿತ್ತನೆ ಬೀಜಗಳು ಲಭ್ಯವಿದ್ದು, ಎಲ್ಲಾ ರೈತರಿಗೂ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ರೈತರು ಹತ್ತಿ ಬಿತ್ತನೆ ಬೀಜಗಳ ಬದಲಿಗೆ ಪರ್ಯಾಯ ದ್ವಿದಳ ಧಾನ್ಯಗಳಾದ ಹೆಸರು, ಉದ್ದು, ಅಲಸಂದೆ ಹಾಗೂ ಎಣ್ಣೆಕಾಳು ಬೆಳೆಗಳಾದ ಸೂರ್ಯಕಾಂತಿ, ನೆಲಗಡಲೆ ಮತ್ತು ಎಳ್ಳು ಹಾಗೂ ಸಿರಿಧಾನ್ಯಗಳಾದ ನವಣೆ, ಸಾಮೆ ಮತ್ತು ಹಾರಕ ಬೆಳೆಗಳನ್ನು ಬೆಳೆಯುವಂತೆ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಡಾ.ಚಂದ್ರಶೇಖರ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ:8277933162 ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ನಿರ್ದೇಶಕರನ್ನು ಸಂಪರ್ಕಿಸಿ.

ಹುಟ್ಟುಹಬ್ಬದ ಶುಭಾಶಯ.....







ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಅವರನ್ನು ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಅಭಿನಂದಿಸಿ, ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಹಿನಕಲ್ ಮಂಜು, ಪ್ರಧಾನ ಕಾರ್ಯದರ್ಶಿ ಧನಗಳ್ಳಿ ಪ್ರವೀಣ್, ಬಿಳಿಕೆರೆ ಸ್ವಾಮಿ, ಹೂಟಗಳ್ಳಿ ನವೀನ್, ಕೆಪಿಸಿಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಗೌತಮ್ ಬಾಲಾಜಿ, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ವಿನೋದ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ್, ಮುಖಂಡರಾದ ಬಸವರಾಜು, ಮಹೇಶ್, ಶೇಖರ್ ಇತರರಿದ್ದರು. (ಮಧ್ಯ ಚಿತ್ರ) ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ನರೇಂದ್ರ ಅವರಿಗೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅವರು ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ತಾಪಂ ಮಾಜಿ ಸದಸ್ಯರಾದ ಹುಯಿಲಾಳು ಮಹದೇವು, ಶೃತಿ ಮಂಜು, ಗ್ರಾಪಂ ಸದಸ್ಯರಾದ ಸೀಗಳ್ಳಿ ಕುಮಾರ್, ಮಾಲೇಗೌಡ, ಶ್ರೀಧರ್, ಮಮತ ಶಿವಕುಮಾರ್, ಸಿದ್ದನಾಯ್ಕ, ನಾಗವಾಲ ಮಹೇಶ್, ನಾಗವಾಲ ಶಿವು ಇನ್ನಿತರರಿದ್ದರು. (ಬಲಚಿತ್ರ) ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ನರೇಂದ್ರ ಅವರ ಹುಟ್ಟುಹಬ್ಬವನ್ನು ಅವರ ನಿವಾಸದಲ್ಲಿ ಆಚರಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭ ಕೋರಿದರು. ಮಂಜುನಾಥ್ ಪ್ರಸಾದ್, ಸುನಿಲ್ ಇನ್ನಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಆಕೆ : ನಮ್ಮ ಮನೆಯಲ್ಲಿ ಇರುವೆಗಳ ಕಾಟ. ಯಾವ ಸಾಮಾನನ್ನೂ ಇಡಲು ಬಿಡುವುದಿಲ್ಲ. ಸಕ್ಕರೆ ಡಬ್ಬದಲ್ಲಂತೂ ಅವುಗಳದೇ ಹಾವಳಿ.

ಈಕೆ : (ಉಚಿತ ಸಲಹೆಯಾಗಿ) ಸಕ್ಕರೆ ಡಬ್ಬದ ಮೇಲೆ ಮೆಣಸಿನಪುಡಿ ಎಂಬ ಪಟ್ಟಿ ಅಂಟಿಸಿದರೆ ಇರುವೆಗಳಿಗೆ ಬುದ್ಧಿ ಕಲಿಸಬಹುದು!

ಮೈಸೂರು ಮಿತ್ರ

ಗುರುವಾರ, 6 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮಹತ್ವಾಕಾಂಕ್ಷಿಯಾಗಿರು. ಆದರೆ ಅದಕ್ಕೆ ಯಾವ ಎಲ್ಲೆಯೂ ಇಲ್ಲದಂತೆ ನೋಡಿಕೋ – ಸರ್. ಸಿ.ವಿ.ರಾಮನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾಗಿ ಕಲ್ಲು ತಿರುಗುವಾಗ ರಾಜ್ಯವೆಲ್ಲಾ ನೆಂಟರು

ನಿಮ್ಮ ಪತ್ರಗಳು

ಕತ್ತೆಗೊಂದು ಕಾಲ

ಮಾನ್ಯರೆ,

ಕತ್ತೆಯ ಹಾಲು ಆರೋಗ್ಯಕ್ಕೆ ತುಂಬಾ ಸಹಕಾರಿ. ಅದರಿಂದ ದೇಹದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂಬುದು ಹಳೆಯ ನ್ಯೂಸ್. ಆದರೆ ಕತ್ತೆಯ ಹಾಲಿನಿಂದ ತಯಾರಿಸುವ ಸಾಬೂನು ಬಳಸಿ ಮಹಿಳೆಯರು ಹೆಚ್ಚು ಸುಂದರವಾಗ ಬಹುದೆಂಬುದು ಲೇಟೆಸ್ಟ್ ನ್ಯೂಸ್.

ಇತ್ತೀಚೆಗೆ, ಉತ್ತರ ಪ್ರದೇಶದ ಸುಲ್ತಾನ್‌ಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಮಾಜಿ ಕೇಂದ್ರ ಸಚಿವೆ ಹಾಗೂ ಹಾಲಿ ಸಂಸದೆ, ಶ್ರೀಮತಿ ಮೇನಕಾ ಗಾಂಧಿಯವರು ಕತ್ತೆಯ ಹಾಲು ಮಹಿಳೆಯರ ಸೌಂದರ್ಯ ಹೆಚ್ಚಿಸುತ್ತದೆ. ಈಜಿಪ್ಟ್‌ನ ಪ್ರಸಿದ್ಧ ರಾಣಿ ಕ್ಲಿಯೋಪಾತ್ರ ಕೂಡ ಕತ್ತೆಯ ಹಾಲಿನಿಂದ ಸ್ನಾನ ಮಾಡುವ ಮೂಲಕ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡಿದ್ದರು. ಕತ್ತೆಯ ಹಾಲಿನಿಂದ ತಯಾರಿಸಿದ ಸಾಬೂನಿಗೆ ದೆಹಲಿಯಲ್ಲಿ 500 ರೂ. ಬೆಲೆ ಇದೆ ಎಂದು ಹೇಳಿ ಕತ್ತೆಯ ಹಾಲಿನಿಂದ ಸಾಬೂನನ್ನು ತಯಾರಿಸುವಂತೆ ಕರೆ ಕೊಟ್ಟಿದ್ದಾರೆ. ಮೇನಕಾ ಗಾಂಧಿಯವರ ಪ್ರಾಣಿಗಳ ಮೇಲಿನ ಪ್ರೀತಿ ಹಾಗೂ ಪರಿಸರ ಬಗೆಗಿನ ಕಾಳಜಿ ಎಲ್ಲರಿಗೂ ಗೊತ್ತಿರುವಂತಹುದು. ಕತ್ತೆ ಹಾಲಿಗೂ ಕೂಡ ಈಗ ಸಕ್ಕತ್ ಡಿಮ್ಯಾಂಡ್ ಬರಬಹುದು. ಅತ್ತಗೊಂದು ಕಾಲ, ಸೊಸೆಗೊಂದು ಕಾಲ ಅನ್ನುವ ಹಾಗೆ ಈಗ ಕತ್ತೆಗೋ ಒಂದು ಕಾಲ. ಅಲ್ಲವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮೈಸೂರಿನ ಸೌಂದರ್ಯ ಕಾಪಾಡಿ

ಮಾನ್ಯರೆ,

ಮೈಸೂರು ನಗರ ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕರು ಹಾಗೂ ಖಾಸಗಿ ವ್ಯಕ್ತಿಗಳು ಎಲ್ಲೆಂದರಲ್ಲಿ ಕಟ್ಟಡ ತ್ಯಾಜ್ಯವನ್ನು ಸುರಿದು ಸೌಂದರ್ಯ ಹಾಳು ಮಾಡುವುದು ಕರ್ನಾಟಕ ಪೌರ ನಿಗಮಗಳ ಕಾಯ್ದೆ ಪ್ರಕರಣ 256ಕ್ಕೆ ವಿರುದ್ಧವಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣದಿಂದ, ದುರಸ್ತಿಯಿಂದ ಮತ್ತು ಕೆಡವುವಿಕೆಯಿಂದ ಉತ್ಪತ್ತಿಯಾಗುವ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡುವುದಕ್ಕಾಗಿ ಮೈಸೂರು ನಗರದಲ್ಲಿರುವ ಸಿ.ಎ 05, ಹಂಚ್ಯಾ–ಸಾತಗಳ್ಳಿ 'ಎ' ವಲಯದಲ್ಲಿ ಖಾಲಿ ಪ್ರದೇಶವನ್ನು ಗುರುತಿಸಲಾಗಿದೆ.

ಸಾರ್ವಜನಿಕರು ಹಾಗೂ ಖಾಸಗಿ ವ್ಯಕ್ತಿಗಳು ಸೂಚಿಸಿರುವ ಸ್ಥಳದಲ್ಲಿಯೇ ಕಡ್ಡಾಯವಾಗಿ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡತಕ್ಕದ್ದು. ಮುಂದಿನ ದಿನಗಳಲ್ಲಿ ನಗರ ಪ್ರದೇಶದ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ವಿಲೇವಾರಿ ಮಾಡಿದ್ದಲ್ಲಿ ಸಂಬಂಧಪಟ್ಟ ಕಟ್ಟಡದ ಮಾಲೀಕರು ಹಾಗೂ ವಾಹನದ ಮಾಲೀಕರಿಬ್ಬರಿಗೂ ಭಾರೀ ಮಟ್ಟದ ದಂಡವನ್ನು ವಿಧಿಸುವುದರ ಜೊತೆಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಸೂಚನೆ ನೀಡಿದ್ದರೂ ಗಮನಹರಿಸುತ್ತಿಲ್ಲ. ಸಾರ್ವಜನಿಕರು ನಿಯಮಗಳ ಪಾಲಿಸಿ ಸಹಕರಿಸುವುದರೊಂದಿಗೆ ಮೈಸೂರಿನ ಸೌಂದರ್ಯ ಕಾಪಾಡಬೇಕಾಗಿದೆ.

– ಮೈಸೂರಿನ ಪ್ರಜೆ

ದಕ್ಷ ಪ್ರಾಮಾಣಿಕ ಅಧಿಕಾರಿಗಳ ಸಂಖ್ಯೆ ಹೆಚ್ಚಲಿ

ಮಾನ್ಯರೆ,

ಇತ್ತೀಚೆಗೆ ಯಾದವಗಿರಿಯಲ್ಲಿ ವೃದ್ಧೆಯೊಬ್ಬರ ಚಿನ್ನದ ಸರವನ್ನು ಸರಗಳ್ಳನೊಬ್ಬ ಕಿತ್ತುಕೊಂಡು ಹೋದ ಪ್ರಕರಣದ ಸುದ್ದಿಯನ್ನು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಓದಿದೆವು. ಸರಗಳ್ಳತನದ ಜಾಡನ್ನು ಹಿಡಿದ ವಿ.ವಿ. ಪುರಂ ಠಾಣೆಯ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಅವರು ಕೆಲವೇ ಗಂಟೆಗಳಲ್ಲಿ ಸರಗಳ್ಳನನ್ನು ಪತ್ತೆ ಮಾಡಿ ಹಿಡಿದು ವೃದ್ಧೆಗೆ ಸರ ಹಿಂದಿರುಗಿಸಿರುವ ಘಟನೆ ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ. ಮೋಹನ್ ಕುಮಾರ್ ಅವರು ಈ ಹಿಂದೆ ಹಿರಿಯ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆಯ ಪ್ರಕರಣದಲ್ಲೂ ಅಪರಾಧಿಗಳನ್ನು ಪತ್ತೆ ಹಚ್ಚಿದ್ದರು. ಇಂತಹ ಅಪರೂಪದ ದಕ್ಷ ಪ್ರಾಮಾಣಿಕ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಲಿ. ಮೋಹನ್ ಕುಮಾರ್ ಅವರಿಗೆ ಧನ್ಯವಾದಗಳು.

–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.

ದೇಶದಲ್ಲಿ ಮಹಿಳಾ ಸಬಲೀಕರಣಕ್ಕೆ ಕೈಜೋಡಿಸಿ

ಮಾನ್ಯರೆ,

"ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಈ ವಾಕ್ಯವು ಚಿಕ್ಕದಿರಬಹುದು, ಆದರೆ ಇದರ ಅರ್ಥ ಬಹುದೊಡ್ಡದಾಗಿದೆ ಎಂದು ಅರ್ಥ ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಅಕ್ಕ – ತಂಗಿಯರಾಗಿ, ವಿವಿಧ ರೀತಿಯಲ್ಲಿ ಪ್ರತಿಯೊಬ್ಬರ ಪಾಲಿನಲ್ಲೂ ಸಹಕಾರಿಯಾಗುತ್ತ ಬೇರೆಯವರನ್ನು ಅವಲಂಬಿಸಿ ಬದುಕು ನಡೆಸುತ್ತಾಳೆ. ಜೀವನವಿಡಿ ಇನ್ನೊಬ್ಬರ ಬದುಕಿನ ಬೆಳಕಾಗಿ ಸೂರ್ಯನಂತೆ ಉದಯಿಸಿರುತ್ತಾಳೆ. ಹೆಣ್ಣು ಜಗತ್ತಿನ ಕಣ್ಣು ಎಂಬಂತೆ ಇರುವ ಮಹಿಳೆಯು ಇನ್ನೊಬ್ಬರಿಗಾಗಿ ಸರ್ವತೋಮುಖವಾಗಿ ಬದಲಾಗುತ್ತಿರುತ್ತಾಳೆ. ಆದ್ದರಿಂದ ಮಹಿಳಾ ಸಬಲೀಕರಣಕ್ಕೆ ಕಾರಣವಾಗಿರುತ್ತಾಳೆ.

ಸಮಸ್ತ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಶಿಕ್ಷಣ ಹಾಗೂ ಇತರೆ ಕ್ಷೇತ್ರಗಳಲ್ಲಿ ಜಾತಿ, ಧರ್ಮ, ಲಿಂಗ ತಾರತಮ್ಯ ಎಂಬ ವಿಷಯಗಳ ಹಿಡಿತದಿಂದ ಮುಕ್ತಗೊಳಿಸಿ ಮಹಿಳಾ ಸಬಲೀಕರಣ ಸಾಧಿಸಲು ಮನ್ನುಗ್ಗಬೇಕು. ಮಹಿಳೆಯರು ಹಲವಾರು ಕಾರಣಗಳಿಂದ ಅನೇಕ ಅವಕಾಶಗಳಿಂದ ವಂಚಿತಕ್ಕೆ ಒಳಗಾಗುತ್ತಾಳೆ. ಇಂದಿನ ಸಮಾಜದಲ್ಲಿ ಎಷ್ಟೆ ವಿದ್ಯಾಭ್ಯಾಸ ಮಾಡಿ ವಿದ್ಯಾವಂತರಾಗಿದ್ದರೂ ಸಹ, ಸಮಾಜದಲ್ಲಿ ಪುರುಷರು ಮತ್ತು ಮಹಿಳೆಯರ ಮೇಲು–ಕೀಳಿನ ಭಾವನೆಯನ್ನು ಹೋಗಲಾಡಿಸಲು ನಾವು ವಿಫಲವಾಗುತ್ತಿರುವುದು ನಮ್ಮೆಲ್ಲರ ನಷ್ಟವಾಗಿದೆ. ಸಮಾಜದಲ್ಲಿ ಇಬ್ಬರು ಸಹ ಸಮಾನರು ಎಂಬುದನ್ನು ಅರಿತು ಬಾಳಿದರೆ ಮಾತ್ರ ಬದುಕಿನಲ್ಲಿ ಗೆಲುವಾಗುತ್ತದೆ.

ಅದರಲ್ಲೂ ಮುಖ್ಯವಾಗಿ ಜನವರಿ 24ರ ಹೆಣ್ಣು ಮಗುವಿನ ದಿನದಂದು ಮತ್ತು ಮಾರ್ಚ್ 08ರ ಮಹಿಳಾ ದಿನದಂದು ಹಾಗೂ ಇತರ ದಿನಗಳಂದು ಅನೇಕ ಮಹಿಳೆಯರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದೇಶದಾದ್ಯಂತ ಹೆಣ್ಣಿನ ಪ್ರಾಮುಖ್ಯತೆ, ಹೆಣ್ಣು ಭ್ರೂಣ ಹತ್ಯೆಯ ಅಪರಾಧ, ಹೆಣ್ಣು ಮಕ್ಕಳನ್ನು ಕಳ್ಳ ಸಾಗಣೆ, ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲೆ ನಿರಂತರವಾಗಿ ಆಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಇತ್ಯಾದಿ ಮಾಹಿತಿಗಳ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಡಾ.ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಹೇಳಿರುವಂತೆ ಪುರುಷರಷ್ಟೆ – ಮಹಿಳೆಯರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿರುವುದನ್ನು ಅರಿತು ದೇಶದ ಉನ್ನತ ಹುದ್ದೆಗಳಿಂದ ಹಿಡಿದು ಇಂದು ಸಮಾಜದ ಎಲ್ಲಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಮುಂದಾಗಿರುವ ಹೆಣ್ಣು ಮಕ್ಕಳು ಹಾಗೂ ಮಹಿಳೆಯರಿಗೆ ರಕ್ಷಣೆ ಕೊಟ್ಟು ಅವರ ಮೇಲೆ ಆಗುತ್ತಿರುವ ದೌರ್ಜನ್ಯಗಳಿಂದ ಮುಕ್ತಗೊಳಿಸಲು ನಾವೆಲ್ಲರೂ ಶ್ರಮಿಸಬೇಕು.

–ನಾಗೇಶ್, ಮಾನಸಗಂಗೋತ್ರಿ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮತದಾನದಲ್ಲಿ ಸರಿಸಮನಾದರು ಸಮಾನ ರಾಜಕೀಯ ಪ್ರಾತಿನಿಧ್ಯವಿಲ್ಲ

ಇದು ಮಹಿಳೆಯರ ದೌರ್ಭಾಗ್ಯವಲ್ಲದೆ ಮತ್ತೇನು...?

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯವನ್ನು ನೀಡಿ ಅವರೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಒಳಗೊಳ್ಳಬೇಕೆಂಬ ಚಳವಳಿಗೆ ಕರೆಯನ್ನು ನೀಡಿದ್ದೇ ಅಲ್ಲದೆ ಅದನ್ನು ಪ್ರಥಮ ಬಾರಿಗೆ ಅನುಷ್ಠಾನಕ್ಕೆ ತಂದ ರಾಜ್ಯ ನಮ್ಮದು. 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳು 1993ರಲ್ಲಿ ಅನುಷ್ಠಾನಕ್ಕೆ ಬರುವ ಮುನ್ನವೇ, ಎಂದರೆ 1987ರಲ್ಲಿಯೇ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಶೇ.25 ಮೀಸಲಾತಿಯನ್ನು ನೀಡಿದ ರಾಜ್ಯ ನಮ್ಮದು. ಈಗೇನೋ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಇರುವುದರಿಂದ ಅವರಿಗೆ ಟಿಕೆಟ್ಟು ನೀಡುವುದು ಒಂದು ಸಂವಿಧಾನಾತ್ಮಕ ಬದ್ಧತೆ. ಆದರೆ ರಾಜ್ಯ ರಾಜಕಾರಣಕ್ಕೆ ಇದು ಅನ್ವಯಿಸುವುದಿಲ್ಲವಾಗಿ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಕನಿಷ್ಠ ಇಷ್ಟು ಕ್ಷೇತ್ರಗಳಲ್ಲಾದರೂ ಸ್ಪರ್ಧಿಸುವ ಅವಕಾಶವನ್ನು ನೀಡಬೇಕೆಂಬ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲವೇಕೆ?

ಬರುವ ಮೇ ತಿಂಗಳ 10ರಂದು ರಾಜ್ಯ ವಿಧಾನಸಭೆಗೆ 16ನೇ ಬಾರಿ ಚುನಾವಣೆ ನಡೆಯಲಿದೆ. 1952 ರಲ್ಲಿ ಮೊದಲ ಚುನಾವಣೆ ನಡೆದಿದ್ದು, ಇಲ್ಲಿಯವರೆಗೂ 15 ಬಾರಿ ವಿಧಾನಸಭಾ ಚುನಾವಣೆಗಳು ನಡೆದಿವೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ ನಡೆಯಲಿದ್ದು, ಇವುಗಳಲ್ಲಿ 36 ಕ್ಷೇತ್ರಗಳು ಪರಿಶಿಷ್ಟ ಜಾತಿ ಮತ್ತು 15 ಪರಿಶಿಷ್ಟ ಬುಡಕಟ್ಟು ಮೀಸಲು ಕ್ಷೇತ್ರಗಳು. ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ ರಾಜ್ಯದ ಒಟ್ಟು ಮತದಾರರ ಸಂಖ್ಯೆ 5.2 ಕೋಟಿಯಷ್ಟಿದ್ದು, ಇದರಲ್ಲಿ ಪುರುಷರ ಪ್ರಮಾಣ ಶೇ.50.31 ಮತ್ತು ಮಹಿಳೆಯರ ಪ್ರಮಾಣ ಶೇ.49.69. ಅಂದರೆ ಮಹಿಳೆಯರು ಮತ್ತು ಪುರುಷರು ಹೆಚ್ಚು–ಕಡಿಮೆ ಸಮ ಪ್ರಮಾಣದಲ್ಲಿ ಇದ್ದಾರೆ. ರಾಜ್ಯದ ಜನಸಂಖ್ಯೆಯಲ್ಲಿ, ಮತದಾರರ ಸಂಖ್ಯೆಯಲ್ಲಿ ಕ್ರಮೇಣ ಪುರುಷರು ಮತ್ತು ಸ್ತ್ರೀಯರ ಸಂಖ್ಯೆಯಲ್ಲಿರುವ ಅಂತರ ಕಡಿಮೆಯಾಗುತ್ತಿದೆ. ಆದರೆ ರಾಜ್ಯ ರಾಜಕಾರಣದಲ್ಲಿ ಮಾತ್ರ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುತ್ತಿಲ್ಲ.

ಕರ್ನಾಟಕದ ವಿಧಾನಸಭೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಒಂದು ಚಿತ್ರಣವನ್ನು ಪಡೆಯಬೇಕಾದರೆ ಇದುವರೆಗೂ ನಡೆದಿರುವ ಚುನಾವಣೆಗಳಲ್ಲಿ ಗೆದ್ದು ವಿಧಾನಸಭೆಯ ಸದಸ್ಯತ್ವವನ್ನು ಪಡೆದಿರುವ ಮಹಿಳೆಯರ ಸಂಖ್ಯೆಯತ್ತ ಗಮನ ಹರಿಸಬೇಕು. ಲಭ್ಯ ಮಾಹಿತಿಯ ಅನ್ವಯ 1957, 1962 ಮತ್ತು 1989ರ ವಿಧಾನಸಭೆಗಳನ್ನು ಹೊರತುಪಡಿಸಿದರೆ ಮಹಿಳೆಯರ ಸಂಖ್ಯೆ ಹತ್ತನ್ನು ಎಂದೂ ಮೀರಿಲ್ಲ. ಹಾಗೆ ನೋಡಿದರೆ 1957 ರಿಂದ 2018ರವರೆಗೆ ನಡೆದಿರುವ 14 ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಒಟ್ಟು ಮಹಿಳೆಯರ ಸಂಖ್ಯೆಯೇ 1,124. ಇವರಲ್ಲಿ ಶೇ.75 ರಷ್ಟು ಠೇವಣಿಯನ್ನು ಕಳೆದುಕೊಂಡರು ಎಂದು ತಿಳಿಸಿರುವ ಮಾಧ್ಯಮ ವರದಿಯೊಂದು, ಗೆದ್ದು ಬಂದವರ ಸಂಖ್ಯೆಯನ್ನು ಚುನಾವಣಾವಾರು ನೀಡಿದೆ. ಅದರ ಪ್ರಕಾರ ಆರಿಸಿ ಬಂದ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಹೀಗಿದೆ: 1957–13, 1962–18, 1967–5, 1972–6, 1978–8, 1983–1, 1985–8, 1989–10, 1994–7, 1999–6, 2004–6, 2008–3, 2013–6 ಮತ್ತು 2018ರಲ್ಲಿ 9. ಎಂಥಾ ನಿರಾಶಾದಾಯಕ ಚಿತ್ರಣವಿದು.

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯವನ್ನು ನೀಡಿ ಅವರೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಒಳಗೊಳ್ಳಬೇಕೆಂಬ ಚಳವಳಿಗೆ ಕರೆಯನ್ನು ನೀಡಿದ್ದೇ ಅಲ್ಲದೆ ಅದನ್ನು ಪ್ರಥಮ ಬಾರಿಗೆ ಅನುಷ್ಠಾನಕ್ಕೆ ತಂದ ರಾಜ್ಯ ನಮ್ಮದು. 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳು 1993 ರಲ್ಲಿ ಅನುಷ್ಠಾನಕ್ಕೆ ಬರುವ ಮುನ್ನವೇ, ಎಂದರೆ 1987ರಲ್ಲಿಯೇ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಶೇಕಡಾ 25 ಮೀಸಲಾತಿಯನ್ನು ನೀಡಿದ ರಾಜ್ಯ ನಮ್ಮದು. ಈಗೇನೋ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಇರುವುದರಿಂದ ಅವರಿಗೆ ಟಿಕೆಟ್ಟು ನೀಡುವುದು ಒಂದು ಸಂವಿಧಾನಾತ್ಮಕ ಬದ್ಧತೆ. ಆದರೆ ರಾಜ್ಯ ರಾಜಕಾರಣಕ್ಕೆ ಇದು ಅನ್ವಯಿಸುವುದಿಲ್ಲವಾಗಿ ರಾಜಕೀಯ ಪಕ್ಷಗಳು ಮಹಿಳೆಯರಿಗೆ ಕನಿಷ್ಠ ಇಷ್ಟು ಕ್ಷೇತ್ರಗಳಲ್ಲಾದರೂ ಸ್ಪರ್ಧಿಸುವ ಅವಕಾಶವನ್ನು ನೀಡಬೇಕೆಂಬ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿಲ್ಲವೇಕೆ?

ಮಹಿಳೆಯರನ್ನು ಮತದಾರರನ್ನಾಗಿ, ಪ್ರಚಾರಕನ್ನಾಗಿ ಗುರುತಿಸುವ ರಾಜಕೀಯ ವ್ಯವಸ್ಥೆ ಅವರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ನಾಯಕತ್ವದ ಸ್ಥಾನಗಳನ್ನು ನೀಡಲು ಸಿದ್ಧವಿಲ್ಲವೇಕೆ? ನಮ್ಮ ದೇಶವನ್ನಾಳಿದ ರಾಣಿಯರು, ವಸಾಹತುಶಾಹಿ ಶಕ್ತಿಗಳನ್ನು ಗೋಚರ–ಅಗೋಚರ ಸ್ವಾತಂತ್ರ್ಯ ಯೋಧರಾಗಿ ಎದುರಿಸಿದ ಹಾಗೂ ಶತಮಾನಗಳಿಂದ ಸಂಸಾರಗಳನ್ನು–ಸಮುದಾಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ ಬಂದಿರುವ ಮಹಿಳೆಯರ ತ್ಯಾಗ–ಬಲಿದಾನಗಳನ್ನೂ ವೈಭವೀಕರಿಸುವ ಸಂಸ್ಥೆಗಳು ರಾಜ್ಯ–ರಾಷ್ಟ್ರ ರಾಜಕಾರಣದಲ್ಲಿ ಭಾಗವಹಿಸಲು ಅವರಿಗೆ ಅವಕಾಶಗಳನ್ನು ನಿರಾಕರಿಸುತ್ತಲೇ ಬಂದಿರುವುದೇತಕ್ಕೆ? ಅಧಿಕಾರದ ಮರುಹಂಚಿಕೆಯನ್ನು ಪುರುಷ ಪ್ರಧಾನ ಅಧಿಕಾರ ವ್ಯವಸ್ಥೆ ಒಪ್ಪಿಕೊಳ್ಳಲಾಗದಿರುವುದೇ ಇದಕ್ಕೆ ಮೂಲ ಕಾರಣ.

ವಿಶ್ವದ ಅನೇಕ ದೇಶಗಳಿಗೆ ಹೋಲಿಸಿದಾಗ ಮಹಿಳೆಯರಿಗೆ ಮತದಾನದ ಹಕ್ಕನ್ನು ಭಾರತ ನೀಡಿ ಹಲವು ದಶಕಗಳೇ ಸಂದಿವೆ. ಆದರೆ ಅವರಿಗೆ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಶೇ.33ರಷ್ಟು ಮೀಸಲಾತಿಯನ್ನು ನೀಡುವ ವಿಚಾರ ಬಂದಾಗ ಮಾತ್ರ ಇಂದಿಗೂ ಸಂಸತ್ತಿನಲ್ಲಿ ಅದಕ್ಕೆ ಸಾರ್ವತ್ರಿಕ ಸ್ವೀಕೃತಿ ಇಲ್ಲ. ಅದನ್ನು ಬೆಂಬಲಿಸುವವರಿಗಿಂತ ವಿರೋಧಿಸುವವರೇ ಹೆಚ್ಚು. ಈ ವಿರೋಧ ಮಾತ್ರ ಪಕ್ಷಾತೀತವಾಗಿ ವ್ಯಕ್ತವಾಗುತ್ತಿರುವುದನ್ನು ನೋಡಿದರೆ ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನು ನೀಡುವ ವಿಧೇಯಕಕ್ಕೆ ತಡೆಯೊಡ್ಡುವುದಕ್ಕೆ ಮಾತ್ರ ವಿವಿಧ ಪಕ್ಷಗಳ ನಡುವೆ ಒಮ್ಮತವಿದ್ದ ಹಾಗೆ ಕಾಣುತ್ತಿದೆ. ಪ್ರತಿ ಬಾರಿಯೂ ಇದು ಚರ್ಚೆಗೆ ಬಂದಾಗ ಕೆಲ ಸದಸ್ಯರು ಅದನ್ನು ವಿರೋಧಿಸುವುದಕ್ಕೆ ಬಳಸುವ ಭಾಷೆ, ವ್ಯಕ್ತಪಡಿಸುವ ಭಾವನೆಗಳು ಹಾಗೂ ಅವರ ನಡವಳಿಕೆ ಮಹಿಳಾ ಹಕ್ಕುಗಳ ಹೋರಾಟಕ್ಕೆ ದೊಡ್ಡ ಸವಾಲಾಗಿ ನಿಂತಿದೆ.



ಮಹಿಳೆಯರಿಗೆ ಮೀಸಲಾತಿ ಏಕೆ ಬೇಕು, ಅವರು ಸಾಮಾನ್ಯ ಕ್ಷೇತ್ರಗಳಲ್ಲೇ ಚುನಾವಣೆಗಳಲ್ಲಿ ಸ್ಪರ್ಧಿಸಬಹುದಲ್ಲ ಎಂಬ ಮಾತು ಆಗಾಗ್ಗೆ ಕೇಳಿ ಬರುತ್ತಲೇ ಇರುತ್ತದೆ. ಆದರೆ ಹೊರ ನೋಟಕ್ಕೆ 'ಮುಕ್ತ' ಎಂದು ಗೋಚರವಾಗುವ ಬಹುತೇಕ ಅವಕಾಶಗಳು ವಾಸ್ತವದಲ್ಲಿ ಮಹಿಳೆಯರ ಪಾಲಿಗೆ ಮುಚ್ಚಿರುತ್ತವೆ. ಹಣಬಲ, ತೋಳ್ಬಲ, ಪಕ್ಷಗಳ ಬೆಂಬಲದಿಂದ ವಂಚಿತರಾಗಿರುವ ಮಹಿಳೆಯರು ಮುಖ್ಯವಾಹಿನಿ ರಾಜಕಾರಣದಲ್ಲಿ ಪ್ರವೇಶ ಪಡೆಯಲು ಹೇಗೆ ತಾನೇ ಸಾಧ್ಯ ಎನ್ನುವುದು ಈಗಾಗಲೇ ಬಹು ಚರ್ಚಿತವಾಗಿರುವ ವಿಚಾರ. ಇಂದಿಗೂ ಚುನಾವಣೆಗಳಲ್ಲಿ ಸ್ಪರ್ಧಿಸುವ ಬಹುತೇಕ ಮಹಿಳೆಯರು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸುತ್ತಾರೆಯೇ ಹೊರತು ಪಕ್ಷದಿಂದ ಪ್ರಾಯೋಜಿತ ಅಭ್ಯರ್ಥಿಗಳಾಗಿಯಲ್ಲ. ಅವರನ್ನು ಪಕ್ಷಗಳು ಸಾಮಾನ್ಯವಾಗಿ ಗುರುತಿಸುವುದು 'ಸೋಲುವ ಅಭ್ಯರ್ಥಿಗಳಾಗಿ'. ಪ್ರಬಲ ರಾಜಕೀಯ ಹಿನ್ನೆಲೆಯಿಂದ ಬಂದಂಥವರು, ಅಧಿಕಾರಾರೂಢ ಪುರುಷ ಬಂಧು ಸ್ಥಾನವನ್ನು ತ್ಯಜಿಸಬೇಕಾದಾಗ ಅಥವಾ ಮರಣ ಹೊಂದಿದಾಗ ಆ ಸ್ಥಾನವನ್ನು ತುಂಬಲು ಆರಿಸಲ್ಪಟ್ಟವರು–ಇವರನ್ನು ಹೊರತುಪಡಿಸಿದರೆ ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದ ಮಹಿಳೆಯರು ರಾಜಕೀಯ ಅಧಿಕಾರವನ್ನು ಪಡೆದಿರುವ ನಿದರ್ಶನಗಳು ಬಹು ಕಡಿಮೆ. ರಾಜ್ಯ ರಾಜಕೀಯದಲ್ಲಿ ಪ್ರವೇಶ ಪಡೆದ ಬಹುತೇಕ ಮಹಿಳೆಯರು ಒಂದು ಬಾರಿ ಮಾತ್ರ ಅವಕಾಶವನ್ನು ಪಡೆದಿರುವವರೇ ಹೊರತು ಬಹು ಬಾರಿ ಅವರಿಗೆ ಸ್ಪರ್ಧೆಗೆ ಅವಕಾಶಗಳು ದೊರೆತಿರುವಂಥ ನಿದರ್ಶನಗಳು ತೀರಾ ಬೆರಳೆಣಿಕೆಯಷ್ಟು. ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಇರುವುದರಿಂದ ರಾಜಕೀಯ ಪ್ರವೇಶ ಪಡೆದಿರುವ ಶೇ.90ರಷ್ಟು ಮಹಿಳೆಯರು ಕೂಡ ರಾಜಕೀಯ ಮೇಲ್ಮುಖ ಚಲನೆಯ ಹಂಬಲವನ್ನೂ ಹೊಂದಿಲ್ಲ, ಅವರಿಗೆ ಪುರುಷ ಪ್ರಧಾನ ರಾಜಕಾರಣ ಅಂತ ಅವಕಾಶಗಳನ್ನೂ ನೀಡುವುದೂ ಇಲ್ಲ.

ಕರ್ನಾಟಕದ ರಾಜ್ಯ ರಾಜಕಾರಣದಲ್ಲಿ ಕಂಡು ಬರುವ ಪರಿಸ್ಥಿತಿಯೇ ಬಹುತೇಕ ಎಲ್ಲ ರಾಜ್ಯಗಳಲ್ಲೂ ರಾಷ್ಟ್ರ ರಾಜಕಾರಣದಲ್ಲೂ ಕಂಡು ಬರುವುದು. ಹಾಗಾದರೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಿಧಾನಸಭೆಗಳಲ್ಲಿ, ಸಂಸತ್ತಿನಲ್ಲಿ ಪ್ರವೇಶ ಪಡೆಯಬೇಕಾದರೆ ಏನು ಮಾಡಬೇಕು? ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸುವ ಸಂವಿಧಾನಾತ್ಮಕ ತಿದ್ದುಪಡಿಗೆ ಸಂಸತ್ತಿನ ಸ್ವೀಕೃತಿ ದೊರೆಯಬೇಕು. ಆದರೆ 1996ರಲ್ಲೇ, ಎಂದರೆ 27 ವರ್ಷಗಳ ಹಿಂದೆಯೇ ಪ್ರಥಮ ಬಾರಿಗೆ ಮಂಡನೆಯಾದ ಈ ವಿಧೇಯಕಕ್ಕೆ ಅಡ್ಡಿಗಳನ್ನು ಪುರುಷ ಪ್ರಧಾನ ರಾಜಕಾರಣ ತರುತ್ತಲೇ ಇದೆ. ಈ ಮಸೂದೆ ಜಾರಿಗೆ ಬರುವವರೆಗೂ ಮಹಿಳೆಯರಿಗೆ ಅವಕಾಶಗಳನ್ನು ನೀಡಲು ದೇಶ ಕಾಯ್ದು ಕುಳಿತುಕೊಳ್ಳಬೇಕಾದ ಅಗತ್ಯವಿಲ್ಲ. ಪ್ರತಿ ಪಕ್ಷವೂ ಮಹಿಳೆಯರಿಗೆ ಇಂತಿಷ್ಟು ಸ್ಥಾನಗಳನ್ನು ನೀಡುವುದನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಬೇಕು. ಪಕ್ಷದ ಪ್ರಣಾಳಿಕೆಗಳಲ್ಲಿಯೇ ಈ ಆಶಯವನ್ನು ಸೇರಿಸಿ ಅದನ್ನು ಜಾರಿಗೆ ತರುವಂಥ ನಿರ್ಧಾರವನ್ನು ಪಕ್ಷ ಮಟ್ಟದಲ್ಲಿ ಪ್ರತಿ ರಾಜಕೀಯ ಪಕ್ಷವೂ ತೆಗೆದು ಕೊಳ್ಳಬೇಕು. ಇದನ್ನು ಸಂವಿಧಾನಾತ್ಮಕ ಬದ್ಧತೆಯನ್ನಾಗಿ ಮಾಡುವತ್ತಲೂ ರಾಜಕೀಯ ಪಕ್ಷಗಳು ಕಾರ್ಯಪ್ರವೃತ್ತರಾಗಬೇಕು. ಈಗಾಗಲೇ ಈ ನಿಟ್ಟಿನಲ್ಲಿ ಅನೇಕ ದೇಶಗಳು ಕ್ರಮಗಳನ್ನು ಕೈಗೊಂಡಿವೆ. ಅವುಗಳಲ್ಲಿ ಹೆಸರಿಸ ಬಹುದಾದಂತಹ ದೇಶಗಳೆಂದರೆ ನೇಪಾಳ, ಲ್ಯಾಟಿನ್ ಅಮೆರಿಕಾದ ಕೆಲ ರಾಷ್ಟ್ರಗಳು, ನಾರ್ವೆ, ಸ್ವೀಡನ್, ಸ್ಲೋವೇನಿಯಾ ಮತ್ತು ದಕ್ಷಿಣ ಆಫ್ರಿಕಾ.

ಮಹಿಳಾ ಮೀಸಲಾತಿ ಮಸೂದೆಯಾಗಲೀ ಪ್ರತಿ ಪಕ್ಷವೂ ಕಡ್ಡಾಯವಾಗಿ ಇಂತಿಷ್ಟು ಸ್ಥಾನಗಳಲ್ಲಿ ಸ್ಪರ್ಧಿಸುವ ಅವಕಾಶವನ್ನು ಮಹಿಳೆಯರಿಗೆ ನೀಡಲೇಬೇಕೆಂಬುದನ್ನು ನಿಗದಿಪಡಿಸುವ ಸಂವಿಧಾನಾತ್ಮಕ ತಿದ್ದುಪಡಿಯಾಗಲೀ ತಕ್ಷಣಕ್ಕೆ ಜಾರಿಗೆ ಬರಲು ಸಾಧ್ಯವಿಲ್ಲವಾದ್ದರಿಂದ ಚುನಾವಣೆಗಳಲ್ಲಿ ಟಿಕೆಟ್ಟುಗಳನ್ನು ನೀಡುವಾಗ ಪ್ರತಿ ರಾಜಕೀಯ ಪಕ್ಷವೂ ಆಂತರಿಕವಾಗಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದರೆ ಮಾತ್ರ ರಾಜ್ಯ–ರಾಷ್ಟ್ರ ರಾಜಕಾರಣದಲ್ಲಿ ಲಿಂಗ ಸಮಾನತೆಯನ್ನು ಸಾಧಿಸುವ ಹಾದಿಯಲ್ಲಿ ಪ್ರಥಮ ಹೆಜ್ಜೆಗಳನ್ನು ಇಡಲು ಸಾಧ್ಯ.

ಮಹಾರಾಷ್ಟ್ರದಿಂದ ಮತ್ತೊಮ್ಮೆ ಕ್ಯಾತೆ

ಆ ರಾಜ್ಯದ ಗಡಿ ಕನ್ನಡಿಗರಿಗೂ ವಿಮೆ

ಮುಖ್ಯಮಂತ್ರಿ ಬೊಮ್ಮಾಯಿ ಎಚ್ಚರಿಕೆ



ಬೆಂಗಳೂರು, ಏ.5–(ಕೆಎಂಶಿ) ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಸುಪ್ರೀಂಕೋರ್ಟ್‌ನಲ್ಲಿದ್ದರೂ ಮಹಾರಾಷ್ಟ್ರ ಸರ್ಕಾರ ಎರಡೂ ರಾಜ್ಯಗಳ ಗಡಿ ಭಾಗದಲ್ಲಿ ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದೆ. ಮಹಾರಾಷ್ಟ್ರ ಸರ್ಕಾರ ಇದೇ ರೀತಿ ಉದ್ಧಟತನ ಮುಂದುವರೆಸಿದರೆ ಕರ್ನಾಟಕ ಸರ್ಕಾರವೂ ಮಹಾರಾಷ್ಟ್ರ ಗಡಿಯಲ್ಲಿರುವ ಕನ್ನಡಿಗರ ರಕ್ಷಣೆಗೆ ಇದೇ ರೀತಿಯ ವಿಮೆ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದ್ದಾರೆ.

ಮಹಾರಾಷ್ಟ್ರ ಸರ್ಕಾರ ಕರ್ನಾಟಕದ ಗಡಿಯಲ್ಲಿರುವ ಕೆಲವರಿಗೆ ವಿಮೆ ನೀಡುವ ಆದೇಶ ಮಾಡಿರುವುದನ್ನು ಖಂಡಿಸಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ, ಕರ್ನಾಟಕದ ಗಡಿಯಲ್ಲಿ ಇರುವವರಿಗೆ ಮಹಾರಾಷ್ಟ್ರ ಸರ್ಕಾರ ವಿಮೆ ಜಾರಿ ಮಾಡಿರುವುದು ಉದ್ಧಟತನದ ಪರಮಾವಧಿಯಾಗಿದ್ದು, ಇದು ಎರಡು ರಾಜ್ಯಗಳ ನಡುವಿನ ಬಾಂಧವ್ಯ ಕದಡುವ ಪ್ರಯತ್ನವಾಗಿದೆ ಎಂದು ಆರೋಪಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಹಾಗೂ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಗಡಿ ವಿಚಾರದಲ್ಲಿ ಯಾವುದೇ ರೀತಿಯ ಗೊಂದಲ ಸೃಷ್ಟಿಸುವುದಿಲ್ಲ ಎಂದು ಒಪ್ಪಿಕೊಂಡಿದ್ದರು.

ಈಗ ಕರ್ನಾಟಕದ 865 ಗ್ರಾಮಗಳ ಜನತೆಗೆ ಜ್ಯೋತಿರಾವ್ ಫುಲೆ ಜನ ಆರೋಗ್ಯ ವಿಮೆ ಯೋಜನೆ ಜಾರಿಗೆ ಆದೇಶ ಮಾಡಿರುವುದು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಕೆಲಸವಾಗಿದೆ ಎಂದು ಹೇಳಿದ್ದಾರೆ. ಮಹಾರಾಷ್ಟ್ರ ಸರ್ಕಾರ ತಕ್ಷಣ ತನ್ನ ಆದೇಶವನ್ನು ವಾಪಸ್ ಪಡೆದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸೂಚನೆಗೆ ಗೌರವ ಕೊಡುವ ಮೂಲಕ ಎರಡೂ ರಾಜ್ಯಗಳ ನಡುವಿನ ಬಾಂಧವ್ಯ ಕಾಪಾಡುವ ಕೆಲಸ ಮಾಡಬೇಕು. ಕರ್ನಾಟಕ ಗಡಿಯಲ್ಲಿರುವ ಜನರಿಗೆ ವಿಮೆ ನೀಡುವ ಹೆಸರಿನಲ್ಲಿ ಮಹಾರಾಷ್ಟ್ರ ಸರ್ಕಾರ, ಅವರಿಂದ ಮಹಾರಾಷ್ಟ್ರಕ್ಕೆ ಸೇರಿದವರೆಂದು ಘೋಷಣಾ ಪತ್ರ ತೆಗೆದುಕೊಳ್ಳುವುದು ಖಂಡನೀಯ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಆದೇಶ ವಾಪಸ್ ಪಡೆಯದಿದ್ದರೆ ಮುಂದಿನ ಪರಿಸ್ಥಿತಿ ನೆಟ್ಟಗಿರಲ್ಲ

ಬೆಂಗಳೂರು,ಏ.5–(ಕೆಎಂಶಿ) ಕನ್ನಡಿಗರ ತೀವ್ರ ವಿರೋಧದ ಹೊರತಾಗಿಯೂ ರಾಜ್ಯದ ಗಡಿಯೊಳಗಿರುವ 865 ಹಳ್ಳಿಗಳಿಗೆ ಆರೋಗ್ಯ ವಿಮೆ ಜಾರಿ ಮಾಡಿರುವ ಮಹಾರಾಷ್ಟ್ರ ಸರ್ಕಾರದ ಕ್ರಮ ಉದ್ಧಟತನದ್ದು. ಇದನ್ನು ಸಹಿಸಲು ಸಾಧ್ಯವೇ ಇಲ್ಲ. ಈ ಆದೇಶವನ್ನು ತಕ್ಷಣ ವಾಪಸ್ ಪಡೆಯದೆ ಇದ್ದರೆ ಪರಿಣಾಮ ನೆಟ್ಟಗಾಗದು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಆರೋಗ್ಯ ವಿಮೆ ಯೋಜನೆ ಜಾರಿಗೆ ಅವಕಾಶ ನೀಡುವುದಿಲ್ಲ ಎಂದು ರಾಜ್ಯದ ಸಿಎಂ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದರು. ಇವರಿಬ್ಬರ ಮಾತಿಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಕವಡೆ ಕಾಸಿನ ಕಿಮ್ಮತ್ತು ಕೊಟ್ಟಿಲ್ಲ ಎಂದು ಆರೋಪಿಸಿದ್ದಾರೆ. ರಾಜ್ಯದ ಗಡಿಯೊಳಗೆ ಆರೋಗ್ಯ ವಿಮೆ ಜಾರಿಗೆ ಮಹಾರಾಷ್ಟ್ರ ಸರ್ಕಾರ ಯತ್ನಿಸಿದಾಗಲೇ ನಾವು ವಿರೋಧಿಸಿದ್ದೆವು. ಅಲ್ಲಿವರೆಗೆ ತೆಪ್ಪಗಿದ್ದ ಮುಖ್ಯಮಂತ್ರಿಗಳು ನಮ್ಮ ಒತ್ತಡಕ್ಕೆ ಮಣಿದು ವೀರಾವೇಶದ ಮಾತುಗಳನ್ನಾಡಿದ್ದರು. ಆ ಆವೇಶ, ಬದ್ಧತೆಯನ್ನು ತೋರಿಸಬೇಕಾದ ಕಾಲ ಈಗ ಬಂದಿದೆ. ಗಡಿ ವಿವಾದ ಇತ್ಯರ್ಥಗೊಳ್ಳುವವರೆಗೆ ಎರಡೂ ರಾಜ್ಯಗಳು ವಿವಾದವನ್ನು ಕೆದಕಬಾರದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಾಕೀತು ಮಾಡಿ ಎರಡೂ ರಾಜ್ಯಗಳ ಸದಸ್ಯರನ್ನೊಳಗೊಂಡ ಸಲಹಾ ಸಮಿತಿ ರಚಿಸಿದ್ದರು. ಆ ಸೂಚನೆಯನ್ನೇ ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂಧೆ ಧಿಕ್ಕರಿಸಿದ್ದಾರೆ ಎಂದು ಆರೋಪಿಸಿದ್ದಾರೆ. ಬೆಳಗಾವಿ ಗಡಿ ವಿವಾದ ನ್ಯಾಯಾಲಯದ ಕಟಕಟೆಯಲ್ಲಿದೆ. ಕನ್ನಡಿಗರಿಗೆ ನ್ಯಾಯ ಸಿಗುತ್ತದೆ ಎನ್ನುವ ಭರವಸೆ ನಮಗೆ ಇದೆ. ಈ ನಡುವೆ ರಾಜಕೀಯ ಲಾಭದ ದುರುದ್ದೇಶದಿಂದ ಮಹಾರಾಷ್ಟ್ರ ಆಗಾಗ ಗಡಿ ತಂಟೆಯನ್ನು ಕೆದಕುವ ಕಿಡಿಗೇಡಿತನ ಮಾಡುವುದು ಖಂಡನೀಯ. ಕನ್ನಡಿಗರು ಇದನ್ನು ಸಹಿಸುವುದಿಲ್ಲ ಎಂದರು.



ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗಬಹುದು

ಬೆಂಗಳೂರು, ಏ.5–(ಕೆಎಂಶಿ) ರಾಜ್ಯದ ಗಡಿ ಹಳ್ಳಿಗಳ ಜನರಿಗೆ ವಿಮಾ ಯೋಜನೆ ಜಾರಿ ಮಾಡುವ ಮಹಾರಾಷ್ಟ್ರ ಸರಕಾರದ ವಿವಾದಾಸ್ಪದ ಕ್ರಮಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಮಹಾರಾಷ್ಟ್ರದ ನಡೆ ಹಾಗೂ ಕೇಂದ್ರ ಸರ್ಕಾರದ ಮೌನ ಒಕ್ಕೂಟ ವ್ಯವಸ್ಥೆಯ ಒಡಕಿಗೆ ಕಾರಣವಾಗಬಹುದು ಎಂದು ಕುಮಾರಸ್ವಾಮಿ ಕಳವಳ ವ್ಯಕ್ತಪಡಿಸಿದ್ದಾರೆ.



ಮಹಾರಾಷ್ಟ್ರದಲ್ಲಿರುವ ಬಿಜೆಪಿ ಡಬಲ್ ಎಂಜಿನ್ ಸರ್ಕಾರ ಪದೇ ಪದೆ ಕಾಲುಕೆರೆದು ಕಿತಾಪತಿ ಮಾಡುತ್ತಿದೆ. ಚೀನಾ ಮನಸ್ಥಿತಿಯ ಆ ರಾಜ್ಯವು ಕರ್ನಾಟಕವನ್ನು ಶತ್ರು ದೇಶದಂತೆ ನೋಡುತ್ತಿದೆ. ಕೇಂದ್ರ ಬಿಜೆಪಿ ಸರ್ಕಾರ ಇದೆಲ್ಲಾ ನೋಡಿಕೊಂಡು ಮೌನವಾಗಿದೆ. ಒಕ್ಕೂಟ ವ್ಯವಸ್ಥೆಯ ಅವಸಾನಕ್ಕೆ ಇದೇ ಕಾರಣವಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಒಂದಲ್ಲ ಎರಡಲ್ಲ, ಪ್ರತಿಯೊಂದು ವಿಷಯದಲ್ಲೂ ಮಹಾರಾಷ್ಟ್ರವು ಕರ್ನಾಟಕವನ್ನು ಕೆರಳಿಸುತ್ತದೆ. ರಾಜ್ಯದ ಗಡಿ ಒಳಗಿರುವ 865 ಗ್ರಾಮಗಳ ಜನರಿಗೆ ಆರೋಗ್ಯ ವಿಮೆ ಜಾರಿ ಮಾಡಿದ ಆ ರಾಜ್ಯ ಸರ್ಕಾರದ ನಡೆ ಒಕ್ಕೂಟ ವ್ಯವಸ್ಥೆಯನ್ನು ಒಡೆಯುವ ನೇರ, ಧೂರ್ತ ಪ್ರಯತ್ನ ಎಂದು ಅವರು ಕಿಡಿಕಾರಿದ್ದಾರೆ. ಮಹಾರಾಷ್ಟ್ರ ಒಕ್ಕೂಟ ವ್ಯವಸ್ಥೆಯ ಎಲ್ಲೆಗಳನ್ನು ಮೀರಿ ಅಹಂಕಾರದಿಂದ ವರ್ತಿಸುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರ ಶಿಂಧೆ ಸೂತ್ರದ ರಾಜಕಾರಣಕ್ಕೆ ಕರ್ನಾಟಕವನ್ನು ಬಲಿ ಕೊಡಲು ಹೊರಟಿದೆಯಾ ಎನ್ನುವ ಅನುಮಾನ ನನ್ನದು. ಇಲ್ಲವಾದರೆ, ಮಹಾರಾಷ್ಟ್ರ ಈ ಪರಿಯ ಉದ್ಧಟತನ ತೋರುತ್ತಿದ್ದರೂ ಮೋದಿ ಸರ್ಕಾರದ ಮೌನವೇಕೆ ಎಂದು ಪ್ರಶ್ನಿಸಿದ್ದಾರೆ. ಕರ್ನಾಟಕದಲ್ಲಿ ಇಡೀ ಭಾರತವೇ ಅಡಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತಿನಿಂದ ಒಡಿಶಾ ವರೆಗೆ ಎಲ್ಲ ಕಡೆಯಿಂದಲೂ ಅನ್ನ ಅರಸಿಕೊಂಡು ಬಂದವರಿಗೆ ಆಶ್ರಯ ನೀಡಿದೆ. ಆ ಅನ್ನಕ್ಕೆ ಮಣ್ಣು ಹುಯ್ಯುವ ಹೀನ ಕೆಲಸವನ್ನು ಮಹಾರಾಷ್ಟ್ರ ಎಗ್ಗಿಲ್ಲದೆ ಮಾಡುತ್ತಿದೆ. ಕನ್ನಡಿಗರು ಸುಮ್ಮನಿರುವ ಕಾಲ ಮುಗಿದಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಭಾರತ ಸ್ವಾತಂತ್ರ್ಯಗೊಂಡಾಗ ಎಲ್ಲರಿಗಿಂತ ಮೊದಲೇ ಒಕ್ಕೂಟ ವ್ಯವಸ್ಥೆಗೆ ಒಳಪಟ್ಟವರು ನಾವು. ನಮ್ಮ ಉದಾರತೆಯೇ ನಮಗೆ ಇಂದು ಮುಳುವಾಗಿದೆಯಾ? ನೆಲ, ಜಲ, ಭಾಷೆ, ಅನುದಾನ ಸೇರಿ ಪ್ರತಿ ವಿಷಯದಲ್ಲೂ ಕನ್ನಡಿಗರು ಮಲತಾಯಿ ಮಕ್ಕಳಾಗಿದ್ದಾರೆ. ಇನ್ನೆಷ್ಟು ದಿನ ಈ ಅನ್ಯಾಯ? ಎಂದು ಕುಮಾರಸ್ವಾಮಿ ಕೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
ಡಾ. ಗುರೂಜಿ
9448229784
7899625268

WANTED
TELECALLERS
We are Hiring
Hindi Telecallers
Salary: 11K-15K
Location: Kuvempunagar
Contact: 6361078284

ಜಮೀನು ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಮುಳ್ಳೂರು ಗ್ರಾಮ, ಸುತ್ತೂರು ಮೇನ್ ರೋಡ್, ಅಲಿನೇಷನ್ ಆಗಿದೆ,
11 ಗುಂಟೆ, 12000 ಅಡಿ. ಸಂಪರ್ಕಿಸಿ:
9845246549/6363015322

WANTED
Telecaller.
Male - 8 Nos, Female - 8 Nos
Telugu language, Salary 15k
Data entry
Operator-8 Nos
S H Meghana(HR) 7829803426

20x30 ಡೂಪ್ಲೆಕ್ಸ್ ಹೊಸಮನೆ– 68 ಲಕ್ಷ
30x40 ಸೈಟ್ ದಟ್ಟಗಳ್ಳಿ
20x30 ಸೈಟ್ ದಟ್ಟಗಳ್ಳಿ 25 ಲಕ್ಷ
ಹಳೆ ಮನೆ – ಹೊಸಮನೆ ಮಾರುವವರು ಕೊಳ್ಳುವವರು
9945042875

ಛತ್ರ ಖಾಲಿ ಇದೆ
G.L.N Convention Hall available vacant on 10th-11th May 2023
ಸಂಪರ್ಕಿಸಿ:
9845129666
9606225582

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed.
ವಿವಾಹ ನೋಂದಣಿಗೆ ಕರೆ ಮಾಡಿ
(2nd Marriage also)
9164743059

ನಾಟಿ ಔಷಧಿ ಮನೆ
ನಮ್ಮಲ್ಲಿ 20 ವರ್ಷಗಳಿಂದ ಮಕ್ಕಳಾಗದವರಿಗೆ ಮಕ್ಕಳಾಗುವ, ಗಂಡಸರಿಗೆ ನರದೌರ್ಬಲ್ಯ, ಹೆಂಗಸರಿಗೆ ಗರ್ಭಧರಿಸದಿದ್ದಲ್ಲಿ, ಪಾರ್ಶ್ವವಾಯು, ಶುಗರ್, ಮಂಡಿ ಬೆನ್ನು ಮೂಳೆಯ ನೋವಿಗೆ ಔಷಧಿ ದೊರೆಯುತ್ತದೆ. ಎಲ್ಲಾ ವರ್ಗದ ಜನಾಂಗದವರಿಗೆ ವಧು–ವರರು ಬೇಕಾದಲ್ಲಿ ಸಂಪರ್ಕಿಸಿ:
ನಂ. 3, ಹೊಸುಂಡವಾಡಿ, ಶಿರಡಿ ಸಾಯಿಬಾಬ ಟೆಂಪಲ್ ಎದುರು, KRS, S R Patna Tq.,
ಸಂಪರ್ಕಿಸಿ: 9964697692

SHOP FOR RENT
For Commercial Purpose
For more details Call:
9353400182
Location: Irwin Road, Mysore

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಗಂಡಸರು, ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: 9880102700

TO LET
2 BHK Ground Floor with Car Parking
Contact:
9945038026

ಗ್ರಾವೆಲ್ ಮಣ್ಣು, ಕೆಮ್ಮಣ್ಣು ಗೊಬ್ಬರ ದೊರೆಯುತ್ತದೆ
ಹಾಗೂ ಗಾರ್ಡನ್ ಕೆಲಸ ಮಾಡಿಕೊಡಲಾಗುತ್ತದೆ.
ಸಂಪರ್ಕಿಸಿ:
7259407518 / 8310220458

ಮನೆ ಕಟ್ಟಿಕೊಡಲಾಗುವುದು
ಮೈಸೂರು, ಕೊಡಗು, ಹಾಸನ, ತುಮಕೂರು, ಬೆಂಗಳೂರು, ಮಂಡ್ಯ, ಚಾಮರಾಜನಗರ ಹಳ್ಳಿ ಹಾಗೂ ಸಿಟಿಗಳಲ್ಲಿ. ಸಂಪರ್ಕಿಸಿ:
8073026718

IMMEDIATE HIRING
Qualification: 7th, 10th, PUC, Diploma,ITI, Any Degree (Pass or Fail)
Salary: 18000-35000
Age Limit: below 35 years
Applicable for Male Candidates only.
Contact: 8217557212/ 8884466359/ 6366638189

ಶ್ರದ್ಧಾ ಗಾರ್ಮೆಂಟ್ಸ್
ಬಟ್ಟೆ ಬ್ಯಾಗ್ ಹೊಲಿಯಲು ನುರಿತ ಮಹಿಳಾ ಟೈಲರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ: 9886412655
ವಿಳಾಸ: ಶಿವಾಜಿ ರಸ್ತೆ, ಟ್ಯಾಂಕ್ ರಸ್ತೆ, ಮಾರತ ಕ್ಲಿನಿಕ್, ಎನ್. ಆರ್. ಮೊಹಲ್ಲಾ, ಮೈಸೂರು

WANTED
Experienced **TAILORS** for Boutique in Kuvempunagar
ಅನುಭವವಿರುವ **ಟೈಲರ್‌ಗಳು ಬೇಕಾಗಿದ್ದಾರೆ.** ಸಂಪರ್ಕಿಸಿ:
8792720395/9844813224

ತಕ್ಷಣ ಬೇಕಾಗಿದ್ದಾರೆ
ಗಂಗೋತ್ರಿ ಮತ್ತು ವಿಜಯಶ್ರೀಪುರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ: SSLC, ಮೇಲ್ಪಟ್ಟು
ಸಂಬಳ: 15,300/-(26 Days)
ESI & PF+W/o ಸೌಲಭ್ಯ
ವಯೋಮಿತಿ 52 ವರ್ಷದೊಳಗಿರಬೇಕು
9880727819,9620777819

ತರಬೇತಿ
ಡಿಪ್ಲೊಮ ಅಥವಾ ಐ.ಟಿ.ಐ ಕಂಪ್ಲೀಟ್ ಆಗಿರುವ ಹುಡುಗರಿಗೆ ಅಲ್ಯೂಮಿನಿಯಮ್ ಫ್ಯಾಬ್ರಿಕೇಷನ್ ಅಪ್ರೆಂಟಿಸ್‌ಶಿಪ್ ತರಬೇತಿ ಕೊಡಲಾಗುವುದು ಹಾಗೆಯೇ ಸ್ಟೈಫಂಡ್ ಕೂಡ ನೀಡಲಾಗುತ್ತದೆ
99002 51990 / 78990 07585

ಶ್ರೀ ಲಕ್ಷ್ಮೀವೆಂಕಟೇಶ್ವರ ಕೃಪ
ಒನಕೆ ಉಳುಕು ತೆಗೆಯಲಾಗುತ್ತದೆ
(ಕೈಕಾಲು, ಸೊಂಟ, ಬೆನ್ನು, ಕುತ್ತಿಗೆ)
ಸ್ಥಳ: ನಂ. 256, ನಾಯಕರ ಬೀದಿ, ಹಿನಕಲ್, ಮೈಸೂರು
9880819563

ತೇಜಸ್ವಿನಿ ಟೂರಿಸ್ಟ್
16 ದಿನಗಳ ಪ್ರವಾಸ 16–6–23ರಿಂದ ರಾಜಸ್ಥಾನ, ಗುಜರಾತ್, ಮತ್ತು ಮಧ್ಯಪ್ರದೇಶ, ಮಹಾಕಾಳೇಶ್ವರ, ಸೋಮನಾಥ್, ಓಂಕಾರೇಶ್ವರ, ನಾಗೇಶ್ವರ, ನಿಷ್ಕಳಂಕ, ಮಹಾದೇವ, ಮೌಂಟ ಅಂಬು, ಜಯಪುರ, ಸರದಾರ್ ವಲ್ಲಭಾಯಿ ಪಟೇಲ್ ಪ್ರತಿಮೆ ಇತ್ಯಾದಿ
ಮೈಸೂರು
9379792644

ಮಾರಾಟಕ್ಕಿದೆ
ಮೈಸೂರಿನ ಹೃದಯ ಭಾಗದಲ್ಲಿರುವ RMC ಪ್ರೈವೇಟ್ ಬಸ್ ನಿಲ್ದಾಣದ ಹತ್ತಿರ
ಖಾಲಿ ನಿವೇಶನ ಮಾರಾಟಕ್ಕಿದೆ
9916842472

JOBNET
ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

100% ಕೆಲಸ
ಬೆಂಗಳೂರಿನ MNC ಕಂಪನಿಯೊಂದಕ್ಕೆ ಈಗಷ್ಟೆ SSLC / PUC, Degree ಮುಗಿಸಿರುವ ಉತ್ಸಾಹಿ ಯುವಕ/ಯುವತಿಯರು ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತಿಯುಳ್ಳವರು ತಕ್ಷಣ ಸಂಪರ್ಕಿಸಿ.
18000/–ರಿಂದ 33000/– ESI /PF, ಉಚಿತ ವಸತಿಯೂಟವಿರುತ್ತದೆ.
9008603466 / 9980346131

WANTED
SALES GIRLS\BOYS
Full Time\Part Time (5pm to 9pm) for a Multi Brand Inner-wear Showroom
Contact in Person **JAVERS**
#109, Mezzanine Floor
D. Devraj Urs Road
Next to Raghvendra Bakery
Mysore. Email:
javersmys@gmail.com

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ)
ಸಂಬಳ: 12000 ರಿಂದ 18000
(ESI, PF, ಸೌಲಭ್ಯ ಇರುತ್ತದೆ.)
8050699742,7760043596

FOR SALE
1) 30x40 15 lakhs sites in H D Kote Road
2) 17/60 House Near Kamakshi Hospital
3) 40x60 52 L sites Near Ring Road
4) 30x40 N G+2 House Near Ashwini Choultry Srirampura
5) 12/36 House G+2 Kuvempunagar
Sites available in Dattagalli and Vijaynagar
9538690359 | 9035990359

100% ಕೆಲಸ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC / PUC, ITI, AnyDegree Pass/fail ಆದವರಿಗೆ Packing, Helper, Quality Production Maintenance, telephone attender, Receptionist, Data Entry ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000/–ರಿಂದ 39000/– ESI /PF, +OT ಯೊಂದಿಗೆ. ಶರತ್ತು ಅನ್ವಯ. ಸಂಪರ್ಕಿಸಿ:
9980850141/9663704915

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

WANTED SALESMEN
Qualification: 10th pass or fail, 12th pass or fail, B.Com., B.B.M
URGENT REQUIREMENT
Contact:
96206 53579 / 9342155535

ಬೇಕಾಗಿದ್ದಾರೆ
Godown cum Shop Superviser ಹುದ್ದೆಗೆ ಪುರುಷರು
SSLC Pass Or Failed
ವಯೋಮಿತಿ 35 ರಿಂದ 45 ವರ್ಷ
LAKSHMI TRADING CO.
AMPC Yard, Mysore
0821-2483944
7022345672

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಂಟಿಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI +PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ / ಓಟಿ, 15200-86000
9740733021, 9535028750

ಮನೆ ಭೋಗ್ಯಕ್ಕಿದೆ
ಕಾಮಗಾರಿ ಪ್ರಗತಿಯಲ್ಲಿರುವ 2BHK ಮನೆ ಭೋಗ್ಯಕ್ಕೆ ಇದೆ ಆಸಕ್ತಿ ಉಳ್ಳವರು ಸಂಪರ್ಕಿಸಬೇಕಾದ ಸ್ಥಳ ನಜರ್‌ಬಾದ್ ಚಾಮುಂಡಿ ವಿಹಾರ ಸ್ಟೇಡಿಯಂ ಹತ್ತಿರ
6363852614

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ)
8749098879

ವಧು ಬೇಕಾಗಿದೆ
ಬ್ರಾಹ್ಮಣ ಕುಟುಂಬದ ಅಯ್ಯರ್ (ಉತ್ತಮ ಆರ್ಥಿಕ ಸ್ಥಿತಿಯಲ್ಲಿರುವ) ಮನೆತನದ ಹುಡುಗನಿಗೆ ವಧು ಬೇಕಾಗಿದೆ.
ಆಸಕ್ತಿ ಇರುವವರು ಕರೆಮಾಡಿ
9980616059

REQUIREMENT
of 15 guntas land with clear documents in 20 km radius from Suburban bus stand. With Road access and Good Irrigation facilities.
brokers excused
Ph: 9448695727

REQUIRED
30x40
site in Nisarga housing board layout , Ilwala.
brokers excused
Ph: 9448695727

ಕಳೆದಿದೆ
ನಂ.287, ಬೀರಿಹುಂಡಿ ಗ್ರಾಮ ಗದ್ದಿಗೆ ಮೇನ್ ರೋಡ್, ಮೈಸೂರು ತಾ॥, ಇಲ್ಲಿ ವಾಸವಾಗಿರುವ ಶಿವಣ್ಣ ಇವರಿಗೆ ಸೇರಿದ ಮನೆಯ ದಾಖಲಾತಿ ಪತ್ರದ ಸಂಖ್ಯೆ 152200427135000984 ಸ್ವತ್ತಿನ ನಂ. 377/321ರ ಮೂಲ ನೋಂದಣಿ ಪತ್ರವು ಕಳೆದಿದ್ದು ಸಿಕ್ಕವರು ಸಂಪರ್ಕಿಸಿ.
9845218389

LENIN CONVENT ENGLISH HIGH SCHOOL, Srirangapatna
WANTED TEACHERS
TOTAL VACANCY 6 No's
FOR ALL SUBJECTS
Interview Date and Time
April 10 - 2023 At 11Am
Contact - 7996887546/ 9844854461/6362000950
Immediately Appointment
Freshers Can apply with Fluent English

SPOKEN ENGLISH
For Children, College Students Working Professionals, House Wives etc., Contact:
NIHARIKA ACADEMY
6360859871

HOUSE FOR RENT
3 BHK with Car Parking in Srirampura Ring Road outer, SP Enclave, near KSRTC Layout, Kote Hundi, Parasaiahna Hundi Circle. Rent: Rs. 13500/-
Contact: 7829665715

ಕಮರ್ಷಿಯಲ್ ಜಾಗ ಬಾಡಿಗೆಗೆ
1450sqft., 1ನೇ ಮಹಡಿ
2250sqft., ಕೊಳ್ಳೆಗಾಲದ 168
A-B ಅಂಬೇಡ್ಕರ್ ರಸ್ತೆಯಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ: 9900201981

ಬೇಕಾಗಿದ್ದಾರೆ
ನಜರ್‌ಬಾದ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12000/–,
ಸಂಪರ್ಕಿಸಿ: 9380232259

ಬೇಕಾಗಿದ್ದಾರೆ
ಹೆಬ್ಬಾಳ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಬೇಕಾಗಿದ್ದಾರೆ. ಹುಡುಗಿಯರಿಗೆ ಮಾತ್ರ
ಸಂಬಳ: 16000/–
ಸಂಪರ್ಕಿಸಿ: 7899754149

WANTED
Tele Callers, Data Entry Operators, Accountant (Male Only) Sales Manager
Contact
8867196098

ಛತ್ರ ಖಾಲಿ ಇದೆ
2023ರ ಮೇ ತಿಂಗಳಲ್ಲಿ 9-10, 16-17, 24-25 ಹಾಗೂ 27-28 ಮತ್ತು ಇತರೆ ಶುಭದಿನಗಳಲ್ಲಿ ಛತ್ರ ಖಾಲಿ ಇದೆ. ಸಂಪರ್ಕಿಸಿ: ದಿವ್ಯರೂಪ ಕಲ್ಯಾಣ ಭವನ, ವಿಜಯನಗರ 2ನೇ ಹಂತ, ಮೈಸೂರು-16
9448051099, 9880253653

ತಕ್ಷಣ ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಕೆಲಸಕ್ಕಾಗಿ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ ವಯಸ್ಸು 25 ರಿಂದ 35ರವರೆಗೆ 8 ಘಂಟೆ ಪಾಳಿ, 12,000 ಊಟದ ವ್ಯವಸ್ಥೆ ಮತ್ತು ವಾರದ ರಜೆ ದೊರೆಯುತ್ತದೆ
9035367083
8123769346

ಕಳೆದಿದೆ
ರಾಜೇಶ್.V.S ಇವರಿಗೆ ಸೇರಿದ ಮೈಸೂರಿನ ಲಷ್ಕರ್ ಮೊಹಲ್ಲಾದ ಕುಂಬಾರಗೇರಿಯಲ್ಲಿರುವ ನಂ. 748/5 (ಹೊಸ ನಂ.ಎಲ್32/3)ರ ಸ್ವತ್ತಿಗೆ ಸಂಬಂಧಿಸಿದ ವಿಲ್ ಪತ್ರ, ದಿನಾಂಕ: 14.07.1997 ರಂದು ಮೈಸೂರು ಮಹಾನಗರ ಪಾಲಿಕೆಯಿಂದ ನೀಡಿರುವ ಖಾತಾ ಉತ್ತರ ಪತ್ರ, ಕಂದಾಯ ಪಾವತಿಸಿರುವ ರಶೀದಿ ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ: 9945863907

CHANGE OF NAME
I, **SAHIRA BANU,** W/o. Abdul Rasheed A.G., R/at No. 229, EWS, CITB Colony, Udayagiri, Mysuru City have changed my name from **SAIRA BANU** to **SAHIRA BANU** on my own free will in front of Notary C.R. Seetharam vide affidavit dated 04.04.2023 at Mysuru.
Sd/- SAHIRA BANU

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ: SSLC,
ಸಂಬಳ: 15,500/-(8 hours)
ESI & PF ಊಟ, ತಿಂಡಿ, ವಸತಿ ಸೌಲಭ್ಯ ಇರುತ್ತದೆ
9620777819,9880727819

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಆಸ್ಪತ್ರೆ, ಲೇಔಟ್, ಫಾರ್ಮ್ ಹೌಸ್‌ಗಳಿಗೆ, ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಮಹಿಳೆಯರು ಮತ್ತು ವಾರ್ಡ್ ಬಾಯ್, ಕೆಲಸಕ್ಕೆ ಪುರುಷರು ಹೋಟೆಲ್ಗೆ ರೂಮ್ ಬಾಯ್ ಬೇಕಾಗಿದ್ದಾರೆ.
(ಊಟ ಮತ್ತು ವಸತಿ ಉಚಿತ)
(ESI+PF) ಉತ್ತಮ ಸಂಬಳ)
ಯಾವುದೇ ಶುಲ್ಕ ಇಲ್ಲ ಸಂಪರ್ಕಿಸಿ
8884286123, 8884286321, 8884339446

ನೇರ ನೇಮಕಾತಿ
JOIN US @ IMPULS, MYSORE 10 TH PUC, BBAಯಾದ AGE (18-24) EARN (8400/- ರಿಂದ 16500/-) PM *NO FEE * ONLY FRESHERS, MEET US
ಕಾವ್ಯ: 9342827788
* ಪರಸ್ಥಳವರಿಗೆ ಮಾತ್ರ ವಸತಿ *

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಸೈಟು, ಜಮೀನು ಮಾರಾಟಕ್ಕಿದೆ
ಮೈಸೂರು ತಾ. ಜಯಪುರ ಹೋ, ಮತ್ತು ಹಂಪಾಪುರ ಹೋಬಳಿಯಲ್ಲಿ ತೆಂಗಿನ ತೋಟ ಹಾಗೂ ಮಾವಿನ ತೋಟ, ಜಮೀನುಗಳು ಕಡಿಮೆ ಬೆಲೆಗೆ ಮಾರಾಟಕ್ಕಿದೆ.
ದಟ್ಟಗಳ್ಳಿ ಸೋಮನಾಥನಗರದಲ್ಲಿ 30X40 ಸೈಟು ಮಾರಾಟಕ್ಕಿದೆ
9945661696
9663793666

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
FAMOUS ASTROLOGER
ಪಂ. ಎಸ್.ಮಣಿಕಂಠನ್
ಮೊ: 9480743991
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸು, ಶತ್ರುಕಾಟ, ಸ್ತ್ರೀಪುರುಷ, ಪ್ರೇಮ, ಗುಪ್ತ ಸಮಸ್ಯೆ, ಗಂಡ–ಹೆಂಡತಿ ಕಿರಿಕಿರಿ, ಸಾಲಬಾಧೆ, ಅನಾರೋಗ್ಯ ಮದುವೆ, ಸಂತಾನ, ವ್ಯಾಪಾರ, ವಿ.ಸೂ: ಅಘೋರಿ, ಕೊಲ್ಕತ್ತ, ಕೇರಳ, ಕೊಳ್ಳೇಗಾಲ, ಪೂಜಾ ಶಕ್ತಿಯಿಂದ ನಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ, ನಿಮ್ಮ ಯಾವುದೇ ಗುಪ್ತ ಕಠಿಣ, ಸಮಸ್ಯೆಗಳಿಗೆ 600 ವರ್ಷಗಳ ತಾಳೆಗರಿ ವಿದ್ಯೆಯಿಂದ 100% ಪರಿಹಾರ
ಸೂಚನೆ: ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ: ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಮೈಸೂರು

SITE FOR SALE
20×30
MUDA alloted site (East face) is for sale at VASANTHA NAGAR.
Contact: 8073393505

ಬೇಕಾಗಿದ್ದಾರೆ
ಲೀಡಿಂಗ್ ಆಟೋಮೊಬೈಲ್ ಡೀಲರ್‌ಶಿಪ್ ಸರ್ವೀಸ್ ಅಡ್ವೈಸರ್/ಫ್ಲೋರ್/ಇಂಚಾರ್ಜ್/ಮೆಕ್ಯಾನಿಕ್/ ಟಿಂಕರಿಂಗ್/ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ಆಟೋಮೊಬೈಲ್ ಕ್ಷೇತ್ರದದಲ್ಲಿ ಉತ್ತಮ ಅನುಭವ ಹೊಂದಿರಬೇಕು. ಮೈಸೂರು
9449936384, 0821-2404555
email:kshatriyaforcesales@gmail.com

ಬೇಕಾಗಿದ್ದಾರೆ
ಕಾರ್‌ವಾಷ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಬಳ 12,000/– ಊಟ, ತಿಂಡಿ, ವಸತಿ ಸೌಲಭ್ಯವಿದೆ.
9036614475

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ (ರಿ)
ಆಜಾದ್‌ನಗರ, ಚಾಮರಾಜಪೇಟೆ, ಬೆಂಗಳೂರು–18
9611801143/9611701143/ 9742810701
1) 13 ದಿನಗಳ ಚಾರ್ ಧಾಮ್ ಪ್ರವಾಸ (ವಿಮಾನದಲ್ಲಿ) ಹೊರಡುವ ದಿನ: 20.05.2023 ಸೀಟು 1ಕ್ಕೆ ರೂ. 48,500/– ದೆಹಲಿ, ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರ, ಬದರೀನಾಥ, ಋಷಿಕೇಶ ಇತ್ಯಾದಿ,
2) 12 ದಿನಗಳ ಗುಜರಾತ್ ಮತ್ತು ಮಧ್ಯಪ್ರದೇಶ ಪ್ರವಾಸ ಹೊರಡುವ ದಿನ: 04.06.2023. ಸೀಟು 1ಕ್ಕೆ ರೂ. 45,000/– ಉಜ್ಜಯಿನಿ, ಓಂಕಾರೇಶ್ವರ ಮಾತೃಗಯಾ, ದ್ವಾರಕಾ, ಪೋರ್ ಬಂದರ್, ಸೋಮನಾಥ, ನಿಷ್ಕಳಂಕ ಮಹಾದೇವ, ಅಹಮದಾಬಾದ್ ಇತ್ಯಾದಿ,

---

ಬೇಕಾಗಿದ್ದಾರೆ
ಹೆಬ್ಬಾಳ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಕೆಲಸದ ಸಂಜೆ ವೇಳೆ 8 ರಿಂದ ಸಂಜೆ 5 ಗಂಟೆಯವರೆಗೆ, ಸಂಬಳ: 12000/–
ಸಂಪರ್ಕಿಸಿ: 8892258814

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಸೈಟ್ ಮಾರಾಟಕ್ಕಿದೆ
40x60 ಸೈಟ್, MUDA ಖಾತೆ ರಿಂಗ್ ರೋಡ್ ನಿಂದ 1K.M ಹೊಸ APMC ಮಾರ್ಕೆಟ್ ನಂತರ, ಬಂಡೀಪಾಳ್ಯ, ಸಂಪರ್ಕಿಸಿ:
Call: 8197200210

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

KESARI RESTAURANT
Unlimited Lunch & Dinner @ Rs. 199/-
Unlimited Breakfast @ Rs. 99/-
Jain Food Available
154, Nelson Mandela Road, Bannimantap, Mysuru
+91 7899165755

WANTED
DRIVER CUM BOUNCER
For White Board Own Car
Location, Mysuru
Below 30Years only
Call: 9986111160

WANTED
For Resturant in Mysuru
*Waiter & Captain, Cleaners
* Full Time & Part time
Job Available. Contact:
8747811110

ಪೇಂಟ್ಸ್ ಹಾರ್ಡ್‌ವೇರ್ಸ್ ಅಂಗಡಿ ಮಾರಾಟಕ್ಕಿದೆ ಅಥವಾ ಲೀಸ್‌ಗೆ ಇದೆ
ಪಂಪ್‌ಹೌಸ್ ಸರ್ಕಲ್ KRS ರಸ್ತೆ. ಸಂಪರ್ಕಿಸಿ:
9481089466/9845336466

LAUNCHING OFFER..!!
"MUDA SITES"
Next to Adishwarnagar Vijaynagar 4th stage. Ready to Construct & Registration | Loans | Well located
Call +91-7349113666
(Brokers pls excuse)

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: 7 ರಿಂದ SSLC, PUC, ITI, Diploma, BE ಯವರೆಗೂ
7899752014

ಬೇಕಾಗಿದ್ದಾರೆ
ಸಲೂನ್ ಮೆನ್ಸ್ ಪಾರ್ಲರ್‌ನಲ್ಲಿ ಕೆಲಸ ಮಾಡಲು **ಹುಡುಗರು** ಬೇಕಾಗಿದ್ದಾರೆ.
ಸಂಬಳ: 15ರಿಂದ 25 ಸಾವಿರ.
ವಿಳಾಸ: ಸಾತಗಳ್ಳಿ, ಮೈಸೂರು
ಸಂಪರ್ಕಿಸಿ: ಶಿವು
9844341652/9880467652

ಗೋವ ಪ್ರವಾಸ
3 ದಿನಗಳು
ದೂಧ್ ಸಾಗರ್ ಜಲಾಶಯ, ಬಾಗ ಬೀಚ್, ಕಲಂಗೂಟ್ ಬೀಚ್, ಮಂಗೇಶಿ ದೇವಸ್ಥಾನ, ನಾಗೇಶಿ ದೇವಸ್ಥಾನ, ಬಾಸಲಿಕ ಚರ್ಚ್, ಇತ್ಯಾದಿ ಊಟ ವಸತಿ ಸೇರಿ ಒಬ್ಬರಿಗೆ 6000 ರೂ ಗಳು ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ.
ಮೊಬೈಲ್ : 70222 71023

ತರಗತಿಗಳು ಪ್ರಾರಂಭ
Basic Computer, Tally-ERP 9.0, Nudi 4.0
Fee Only Rs. 2999/-
Spoken English Fee Only Rs. 3499/-
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
0821- 3553964
6364116745

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೇಲುಕೋಟೆಯಲ್ಲಿ ವಿಜೃಂಭಣೆಯ ತೆಪ್ಪೋತ್ಸವ



ಇಂದು ತೀರ್ಥಸ್ನಾನ ಪಟ್ಟಾಭಿಷೇಕ

ಶ್ರೀ ಚೆಲುವನಾರಾಯಣಸ್ವಾಮಿ ಜಯಂತಿಯ ಪ್ರಯುಕ್ತ ಗುರುವಾರ ಕಲ್ಯಾಣಿಯಲ್ಲಿ 10 ಗಂಟೆಗೆ ತೀರ್ಥಸ್ನಾನ ಹಾಗೂ ಸಂಜೆ ಚೂರ್ಣಾಭಿಷೇಕ, ಪಟ್ಟಾಭಿಷೇಕ ಮಹೋತ್ಸವ ನಡೆಯಲಿದೆ. ನಂತರ ಪುಷ್ಪಾಲಂಕೃತ ಸಮರ ಭೂಪಾಲ ವಾಹನೋತ್ಸವ ನಡೆಯಲಿದ್ದು, ನಂತರ ಪಡಿಮಾಲೆ–ಪೂರ್ಣಾಹುತಿ ನಡೆಯಲಿದೆ. ವೈರಮುಡಿ ಬ್ರಹ್ಮೋತ್ಸವದ ಯಶಸ್ಸಿಗೆ ಕೈಂಕರ್ಯ ಮಾಡಿದ ಸ್ಥಾನೀಕರಿಗೆ ರಾಮಾನುಜರ ಕಾಲದಿಂದ ನಡೆದುಕೊಂಡು ಬಂದಿರುವ ಅನೂಚಾನ ಸಂಪ್ರದಾಯದಂತೆ ಮಾಲೆ ಮರ್ಯಾದೆ ನಡೆಯಲಿದೆ.

ಮೇಲುಕೋಟೆ, ಏ.5– ದಕ್ಷಿಣಭಾರತದ ಅತಿದೊಡ್ಡ ಪಂಚಕಲ್ಯಾಣಿಯಲ್ಲಿ ಝಗಮಗಿಸುವ ವಿದ್ಯುತ್ ದೀಪಾಲಂಕಾರದ ಮೆರಗಿನೊಂದಿಗೆ ಬುಧವಾರ ರಾತ್ರಿ ಚೆಲುವನಾರಾಯಣಸ್ವಾಮಿಗೆ ತೆಪ್ಪೋತ್ಸವ ನೆರವೇರಿತು.

ವೈರಮುಡಿ ಬ್ರಹ್ಮೋತ್ಸವದ ಪಂಗುನ್ಯುತ್ತರಮ್ ನಿಮಿತ್ತ ತೆಪ್ಪೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು. ಮೈಸೂರು ಅರಸರಾದ ರಾಜ ಒಡೆಯರ್ ಸಮರ್ಪಿಸಿರುವ ವಜ್ರಖಚಿತ ರಾಜಮುಡಿ ಕಿರೀಟ ಧರಿಸಿದ ಚೆಲುವನಾರಾಯಣಸ್ವಾಮಿಯನ್ನು ಕಲ್ಯಾಣಿಯಲ್ಲಿ ನಿರ್ಮಿಸಿದ ತೆಪ್ಪಮಂಟಪದಲ್ಲಿ ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಮಂಗಳವಾದ್ಯದ ನೀನಾದದಲ್ಲಿ ತೆಪ್ಪೋತ್ಸವ ಮೂರು ಪ್ರದಕ್ಷಿಣೆ ಹಾಕಿತು.

ಮಂಡ್ಯ ಜಿಲ್ಲಾಧಿಕಾರಿ ಡಾ.ಹೆಚ್.ಎನ್‌ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಉಪವಿಭಾಗಾಧಿಕಾರಿ ನಂದೀಶ್, ದೇವಾಲಯದ ಇಓ ಮಹೇಶ್ ಸೇರಿದಂತೆ ಹಲವು ಗಣ್ಯರು ತೆಪ್ಪೋತ್ಸವದಲ್ಲಿ ಭಾಗಿಯಾಗಿದ್ದರು. ಕಲ್ಯಾಣಿಯ ನಾಲ್ಕೂ ಕಡೆಯ ಸೋಪಾನಗಳಲ್ಲಿ ಕಿಕ್ಕಿರಿದು ತುಂಬಿದ್ದ ಭಕ್ತರು ಚೆಲುವನಾರಾಯಣನ ತೆಪ್ಪೋತ್ಸವದ ಸೊಬಗನ್ನು ದರ್ಶನ ಮಾಡಿ ಪುನೀತರಾದರು. ಯೋಗನರಸಿಂಹ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಕಲ್ಯಾಣಿ ಸಮುಚ್ಚಯದ ಸಾಲು ಮಂಟಪಗಳು, ಭವ್ಯ ಸ್ಮಾರಕ ಭುವನೇಶ್ವರಿ ಮಂಟಪ, ಧಾರಾ ಮಂಟಪ ಹಾಗೂ ಬಳೆ ಮಂಟಪಗಳಿಗೆ ಆಕರ್ಷಕವಾದ ವಿದ್ಯುದ್ದೀಪಾಲಂಕಾರ ಮಾಡಲಾಗಿತ್ತು ದೇವಾಲಯದ ಇತಿಹಾಸ ಬಿಂಬಿಸುವ ಲೇಸರ್ ಶೋ ಭಕ್ತರ ಮನಸೆಳೆಯಿತು.

ಕಳೆದ ಸಲ ಏರ್ಪಡಿಸಿದ್ದ ಈವೆಂಟ್ ಮಾದರಿಯ ಕಾರ್ಯಕ್ರಮಗಳನ್ನು ಈ ಸಲ ರದ್ದು ಮಾಡಿ ಚೆಲುವನಾರಾಯಣಸ್ವಾಮಿ ತೆಪ್ಪೋತ್ಸವ ವೈಭವವನ್ನು ಕಣ್ತುಂಬಿಕೊಳ್ಳಲು ಭಕ್ತರಿಗೆ ಜಿಲ್ಲಾಡಳಿತ ಅವಕಾಶ ಮಾಡಿತ್ತು. ಸ್ಥಾನೀಕರು, ಅರ್ಚಕರು, ಭಕ್ತರ ಸಲಹೆಗೆ ಮನ್ನಣೆ ನೀಡಿದ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿಗಳು ಸಂಪ್ರದಾಯಬದ್ಧ ಉತ್ಸವಗಳ ನಡುವೆ ಅನಗತ್ಯ ಕಾರ್ಯಕ್ರಮಗಳ ಸೇರ್ಪಡೆ ಮಾಡದೆ ತೆಪ್ಪೋತ್ಸವ ನಡೆಸುವುದಾಗಿ ತಿಳಿಸಿದಂತೆ ಮಹೋತ್ಸವ ನಡೆಸಲಾಯಿತು. ತೆಪ್ಪೋತ್ಸವ ನಡೆದ ನಂತರ ರಾತ್ರಿ ಡೋಲೋತ್ಸವ, ಕುದುರೆ ವಾಹನೋತ್ಸವ, ಕಳ್ಳಸುಲಿಗೆ ಉತ್ಸವ ನೆರವೇರಿತು. ಏ.6ರ ಬೆಳಗ್ಗೆ 6 ಗಂಟೆಗೆ ಸಂಧಾನ ಸೇವೆ ನಡೆಯಲಿದೆ.

ಅಗತ್ಯ ಸೇವಾ ವಲಯಗಳು ಮತದಾನದಿಂದ ವಂಚಿತರಾಗಬಾರದು: ಡಿಸಿ ಗೋಪಾಲಕೃಷ್ಣ



ಮಂಡ್ಯ, ಏ.5– ಜಿಲ್ಲೆಯಲ್ಲಿ ಚೆಸ್ಕಾಂ, ಕೆ.ಎಸ್.ಆರ್.ಟಿ.ಸಿ, ಆರೋಗ್ಯ, ಆರಕ್ಷಕ, ಅಗ್ನಿಶಾಮಕ, ಬಿಎಸ್‌ಎನ್‌ಎಲ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಮಾಧ್ಯಮ ಪ್ರತಿನಿಧಿಗಳು ವಿಧಾನ ಸಭಾ ಸಾರ್ವತ್ರಿಕ ಚುನಾವಣೆಯ ಮತದಾನದ ದಿನಾಂಕದಂದು ಚುನಾವಣೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಅವರಿಗೆ ಪೋಸ್ಟಲ್ ಬ್ಯಾಲೆಟ್ ಮೂಲಕ ಮತದಾನಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಅವರು ತಿಳಿಸಿದರು.

ಅವರು ಇಂದು ಪೋಸ್ಟಲ್ ಬ್ಯಾಲೆಟ್ ಮೂಲಕ ಮತದಾನ ಕುರಿತಂತೆ ಸಭೆ ನಡೆಸಿ ಮಾತನಾಡಿದರು. ಅಗತ್ಯ ಸೇವಾ ವಲಯಗಳಲ್ಲಿ ಅಂಚೆ ಪತ್ರದ ಮೂಲಕ ಮತದಾನ ಮಾಡಲು ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಹೆಸರು ಪಟ್ಟಿ ಮಾಡಿ ವಿವರ ಒದಗಿಸಲು ಇಲಾಖೆಯ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ನೋಡಲ್ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿ ಮತದಾನದ ದಿನದಂದು ಸಿಬ್ಬಂದಿಗಳ ಕೆಲಸ ಅವಶ್ಯಕತೆಯನ್ನು ಗುರುತಿಸಿ ಅವರ ವಿವರವನ್ನು ಸಂಗ್ರಹಿಸಿ ಫಾರಂ 12 ಅಥವಾ 12ಡಿ ವಿತರಿಸಿ ಭರ್ತಿ ಮಾಡಿ ಕ್ರೋಢೀಕರಿಸಿ ಸಲ್ಲಿಸುವಂತೆ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್ ನಾಗರಾಜು, ಜಿಲ್ಲಾ ಪೋಸ್ಟಲ್ ಬ್ಯಾಲೆಟ್‌ನ ನೋಡಲ್ ಅಧಿಕಾರಿ ಜಾನ್ಸನ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಎಸ್ ಹೆಚ್ ನಿರ್ಮಲ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳ ಹಾಜರಿದ್ದರು.

ಇಂದು ಕಾವೇರಿ ಸಾಯಿಧಾಮದಲ್ಲಿ ಚೈತ್ರ ಹುಣ್ಣಿಮೆ ವಿಶೇಷ ಪೂಜೆ

ಪಾಂಡವಪುರ, ಏ.5– ತಾಲೂಕಿನ ದೊಡ್ಡಗೌಡನಕೊಪ್ಪಲು ಗ್ರಾಮದಲ್ಲಿರುವ ಶ್ರೀ ಕಾವೇರಿ ಸಾಯಿಧಾಮದಲ್ಲಿ ಚೈತ್ರ ಹುಣ್ಣಿಮೆ ಅಂಗವಾಗಿ ನಾಳೆ (ಏ.6) ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ ಬಾಬಾ ದೇವರಿಗೆ ವಿವಿಧ ಆರತಿ, ನಂತರ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ತದನಂತರ ಮಹಾಮಂಗಳಾರತಿ, ಅನ್ನ ಸಂತರ್ಪಣೆ ನಡೆಯುತ್ತದೆ, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸಾಯಿಧಾಮದ ವ್ಯವಸ್ಥಾಪಕ ಟ್ರಸ್ಟಿ ಜಯದೇವ್ ಕೋರಿದ್ದಾರೆ.

ಚಿನಕುರಳಿ ಡೇರಿ ಅಧ್ಯಕ್ಷರಾಗಿ ಸಿ.ಎಂ. ರಮೇಶ್



ಚಿನಕುರಳಿ, ಏ.5– ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಎಂ.ರಮೇಶ್ ಅವರು ಬುಧವಾರ ಅವಿರೋಧವಾಗಿ ಆಯ್ಕೆಯಾದರು.

ಹಾಲು ಉತ್ಪಾದಕರ ಸಹಕಾರ ಸಂಘದ ಹಿಂದಿನ ಅಧ್ಯಕ್ಷ ಸಿ.ಎಸ್.ಲೋಕೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ಸಿ.ಎಂ.ರಮೇಶ್ ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ಸಹ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಸಿ.ಎಂ. ರಮೇಶ್ ಅವರನ್ನು ಡೇರಿಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಹೇಮಲತಾ ಘೋಷಿಸಿದರು. ನೂತನ ಅಧ್ಯಕ್ಷ ಸಿ.ಎಂ.ರಮೇಶ್ ಅವರಿಗೆ ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದನೆ ಸಲ್ಲಿಸಿದರು.

ಗ್ರಾಪಂ ಅಧ್ಯಕ್ಷ ಪಾಪಣ್ಣ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗಣ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಮಹಮದ್ ಇಫ್ತಿಯಾಜ್ ಪಾಷ, ಸದಸ್ಯರಾದ ಸಿ.ಎ.ಲೋಕೇಶ್, ಪರಮೇಶ್, ಕೃಷ್ಣೇಗೌಡ, ನಾಗೇಗೌಡ, ಮಾಜಿ ಸದಸ್ಯ ಸಿ.ಡಿ.ಮಹದೇವು, ವಿಎಸ್‌ಎಸ್‌ಎನ್‌ಬಿ ನಿರ್ದೇಶಕ ಮಂಜುನಾಥ್, ಡೇರಿ ಉಪಾಧ್ಯಕ್ಷ ರಾಮಕೃಷ್ಣೇಗೌಡ, ಮಾಜಿ ಅಧ್ಯಕ್ಷರಾದ ಸಿ.ಎಸ್.ಲೋಕೇಶ್, ಆರ್.ವರದರಾಜು, ಸಿ.ಪಿ.ಪುಟ್ಟರಾಜು, ಸಿ.ಆರ್.ಹೊನ್ನರಾಜು, ಸಿ.ಜಿ.ವಿಷಕಂಠೇಗೌಡ, ಗಾಯಿತ್ರಿ, ನಾಗರಾಜು, ಸಿ.ಎಸ್.ರಮೇಶ್, ಬಿ.ಸವಿತಾ ಮಂಜುನಾಥ್, ಗೀತಾಮಂಜು, ಪ್ರ.ಕಾರ್ಯದರ್ಶಿ ಸಿ.ಕೆ.ಲೋಕೇಶ್, ಸಿ.ಬಿ.ಕಾಂತರಾಜು ಸೇರಿದಂತೆ ಹಲವರು ಹಾಜರಿದ್ದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ಬೇಕರಿಗೆ ಬೆಂಕಿ

ನಾಗಮಂಗಲ, ಏ.5– ಶಾರ್ಟ್ ಸರ್ಕ್ಯೂಟ್‌ನಿಂದ ಬೇಕರಿಯೊಂದು ಬೆಂಕಿಗಾಹುತಿಯಾದ ಘಟನೆ ನಾಗಮಂಗಲದ ಟಿ.ಬಿ. ಬಡಾವಣೆಯಲ್ಲಿ ನಡೆದಿದೆ.

ಚೆಸ್ಕಾಂ ಕಚೇರಿ ಎದುರಿರುವ ಬೇಕರಿ ಮಾಲೀಕ ಮಹೇಶ್ ಎಂಬುವರು ಮಂಗಳವಾರ ರಾತ್ರಿ ವ್ಯಾಪಾರ ಮುಗಿಸಿ ಬೇಕರಿಗೆ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದು, ಇಂದು ಮುಂಜಾನೆ ಅಂಗಡಿಯೊಳಗಿನಿಂದ ಹೊಗೆ ಬರುತ್ತಿರುವುದನ್ನು ಕಂಡು ಪಕ್ಕದ ಮದ್ಯದಂಗಡಿಯ ಹುಡುಗರು ಮಾಲೀಕರಿಗೆ ತಿಳಿಸಿದ್ದು, ತಕ್ಷಣವೇ ಚೆಸ್ಕಾಂಗೆ ವಿಷಯ ಮುಟ್ಟಿಸಿದಾಗ ವಿದ್ಯುತ್ ಸಂಪರ್ಕ ನಿಲುಗಡೆಗೊಳಿಸಲಾಗಿದೆ. ನಂತರ ಅಂಗಡಿಯ ಒಳ ಪ್ರವೇಶಿಸಿ ನೋಡಿದಾಗ ಹಲವಾರು ಪದಾರ್ಥಗಳು ಬೆಂಕಿಗಾಹುತಿಯಾಗಿ ಸುಮಾರು 3 ಲಕ್ಷರೂ.ಗಳಿಗೂ ನಷ್ಟವುಂಟಾಗಿದೆ ಎಂದು ತಿಳಿದು ಬಂದಿದೆ.

ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ



ಶ್ರೀರಂಗಪಟ್ಟಣ, ಏ.5– ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡದ ಜೊಳ್ಳುಗಳನ್ನು ತಿರಸ್ಕರಿಸಿ, ನನ್ನನ್ನು ಮತ್ತೊಮ್ಮೆ ಆಯ್ಕೆ ಮಾಡುವ ಮೂಲಕ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಬೇಕು ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಮನವಿ ಮಾಡಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ ಕಸಬಾ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರನ್ನುದ್ದೇಶಿಸಿ ಮಾತನಾಡಿದ ಅವರು, ನನ್ನ ಅವಧಿಯಲ್ಲಿ ಕಸಬಾ ಹೋಬಳಿ ವ್ಯಾಪ್ತಿಯ ಮಹದೇವಪುರ ಬಹುಗ್ರಾಮಗಳ ಕುಡಿಯುವ ನೀರು ಯೋಜನೆ ಸೇರಿದಂತೆ ಹಲವಾರು ಅಭಿವೃದ್ಧಿ ಕೆಲಸಗಳು ನಡೆದಿವೆ ಎಂದರು.

ಇನ್ನು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದವರು ಮತದಾರರನ್ನು ಓಲೈಸುವ ಸಲುವಾಗಿ 2 ಸಾವಿರ ರೂ. ಗ್ಯಾರಂಟಿ ಕಾರ್ಡ್ ಮನೆ ಮನೆಗೆ ಹಂಚುತ್ತಿರುವುದು ಹಾಸ್ಯಾಸ್ಪದ. ಅದು ನಕಲಿ ಗ್ಯಾರಂಟಿ ಕಾರ್ಡ್ ಆಗಿದ್ದು, ಆ ಕಾರ್ಡ್‌ನಿಂದ ಯಾವುದೇ ಹಣ ಬರುವುದಿಲ್ಲ. ಹಾಗಾಗಿ ಎಚ್.ಡಿ. ಕುಮಾರಸ್ವಾಮಿ ಅವರ ದೂರದೃಷ್ಟಿಯುಳ್ಳ ಪಂಚರತ್ನ ಯೋಜನೆಗಳು ಬಡವರಿಗೆ ಅನುಕೂಲವಾಗಲಿದ್ದು ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ನನ್ನನ್ನು ಮತ್ತೊಮ್ಮೆ ಶಾಸಕರನ್ನಾಗಿ ಆಯ್ಕೆ ಮಾಡಬೇಕು ಎಂದರು. ಸಚಿವ ಸುಧಾಕರ್ ಜೆಡಿಎಸ್ ನಿಂದ ಈ ಬಾರಿ 100 ಮಂದಿ ಶಾಸಕರಾಗಿ ಆಯ್ಕೆಗೊಂಡರೆ ರಾಜಕೀಯವಾಗಿ ನಿವೃತ್ತಿ ಹೊಂದುವುದಾಗಿ ಹೇಳಿಕೆ ನೀಡಿರುವುದು ಅವರ ಘನತೆಗೆ ಶೋಭೆ ತರುವಂತದಲ್ಲ. ಅವರು ರಾಜಕೀಯಕ್ಕೆ ಬರುವ ಮುನ್ನವೇ ಎಚ್.ಡಿ ದೇವೇಗೌಡ ರಾಜ್ಯದ ಮುಖ್ಯಮಂತ್ರಿ ಆಗಿದ್ದವರು. ಅವರು ನಮ್ಮ ಪಕ್ಷದ ಬಗ್ಗೆ ಮಾತನಾಡುವ ಬದಲು ಅವರ ಪಕ್ಷದ ಪರವಾಗಿ ಮಾತನಾಡುವುದು ಒಳಿತು ಎಂದರು.

ಇದೇ ವೇಳೆ ಕಸಬಾ ಹೋಬಳಿಯ ವಿವಿಧ ಗ್ರಾಮಗಳ ನೂರಾರು ಮಂದಿ ಹಲವು ಪಕ್ಷಗಳ ಕಾರ್ಯಕರ್ತರು ಹಾಗೂ ಮುಖಂಡರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಈ ವೇಳೆ ರಾಜ್ಯ ಉಪಾಧ್ಯಕ್ಷ ಎಂ.ಸಂತೋಷ್, ತಾಲೂಕು ಅಧ್ಯಕ್ಷ ಪೈ.ಮುಕುಂದ, ಯುವ ಘಟಕ ಅಧ್ಯಕ್ಷ ಕಡತನಾಳು ಸಂಜಯ್, ನಗರ ಘಟಕ ಅಧ್ಯಕ್ಷ ಸುರೇಶ್, ಚಿಕ್ಕಂಕನಹಳ್ಳಿ ಗ್ರಾ.ಪಂ ಅಧ್ಯಕ್ಷ ಪ್ರಭಾಕರ್, ಚಿಕ್ಕತಾಯಮ್ಮ, ಅಶೋಕ್, ಮಹೇಶ್‌ಗೌಡ, ಜಯರಾಂ, ರಜಿನಿ, ಲತಾ ನಾಗೇಶ್, ಪುರಸಭಾ ಸದಸ್ಯ ಎಸ್.ಪ್ರಕಾಶ್, ಮಾಜಿ ಸದಸ್ಯ ಸಾಯಿಕುಮಾರ್ ಸೇರಿದಂತೆ ಸಾವಿರಾರು ಮಂದಿ ಕಾರ್ಯಕರ್ತರು ಹಾಗೂ ಮುಖಂಡರುಗಳು ಹಾಜರಿದ್ದರು.

ಮುಂಗಾರು ಹಂಗಾಮಿನಲ್ಲಿ ದ್ವಿದಳ ಧಾನ್ಯ, ಎಣ್ಣೆಕಾಳು, ಹತ್ತಿ ಬಿತ್ತನೆ ಬೀಜ ಪೂರೈಕೆ

ಮೈಸೂರು, ಏ.5– 2023–24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ದ್ವಿದಳ ಧಾನ್ಯ, ಎಣ್ಣೆ ಕಾಳು ಹಾಗೂ ಹತ್ತಿ ಬಿತ್ತನೆ ಬೀಜಗಳನ್ನು ಜಿಲ್ಲೆಯ ಕೃಷಿ ಉತ್ಪನ್ನ ಮಾರಾಟಗಾರರಿಂದ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆ ಮತ್ತು ತಾಲೂಕಿನಲ್ಲಿರುವ ಚಿಲ್ಲರೆ ಬಿತ್ತನೆ ಬೀಜ ಮಾರಾಟಗಾರರ ಬಳಿ ಬಿತ್ತನೆ ಬೀಜಗಳು ಲಭ್ಯವಿದ್ದು, ಎಲ್ಲಾ ರೈತರಿಗೂ ವಿತರಿಸಲು ಕ್ರಮ ವಹಿಸಲಾಗಿದೆ. ಅಲ್ಲದೆ, ರೈತರು ಹತ್ತಿ ಬಿತ್ತನೆ ಬೀಜಗಳ ಬದಲಿಗೆ ಪರ್ಯಾಯ ದ್ವಿದಳ ಧಾನ್ಯಗಳಾದ ಹೆಸರು, ಉದ್ದು ಹಲಸಂದೆ ಹಾಗೂ ಸೂರ್ಯಕಾಂತಿ, ನಲಗಡಲೆ, ಎಳ್ಳು ಹಾಗೂ ಸಿರಿಧಾನ್ಯಗಳಾದ ನವಣೆ, ಸಾಮೆ ಮತ್ತು ಆರಕ ಬೆಳೆಗಳನ್ನು ಬೆಳೆಯುವಂತೆ ರೈತರಿಗೆ ಸಲಹೆ ನೀಡಿದ್ದು, ಈ ಕುರಿತು ಹೆಚ್ಚಿನ ಮಾಹಿತಿಗಾಗಿ ದೂ.ಸಂ:82779–33162 ಹಾಗೂ ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2023–24ರ ಶೈಕ್ಷಣಿಕ ಮಾರ್ಗಸೂಚಿ ಬಿಡುಗಡೆ

ಮೈಸೂರು, ಏ.5(ಎಸ್‌ಪಿಎನ್)– ರಾಜ್ಯ ವಿಧಾನಸಭೆ ಸಾರ್ವತ್ರಿಕ ಚುನಾವಣೆ ನಡುವೆಯೇ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2023–24ನೇ ಸಾಲಿನ ವಾರ್ಷಿಕ ಶೈಕ್ಷಣಿಕ ಚಟುವಟಿಕೆಗಳ ಮಾರ್ಗಸೂಚಿಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಿಡುಗಡೆಗೊಳಿಸಿದೆ.

ಈ ಸಾಲಿನ ಶೈಕ್ಷಣಿಕ ಚಟುವಟಿಕೆಗಳು ಮೇ.29ರಿಂದ ಆರಂಭವಾಗಲಿದ್ದು, ರಾಜ್ಯಾದ್ಯಂತ ಏಕರೂಪ ವಾರ್ಷಿಕ ಶೈಕ್ಷಣಿಕ ಚಟುವಟಿಕೆ, ಪರೀಕ್ಷೆ ಮತ್ತು ಮೌಲ್ಯಂಕನ ವಿಶ್ಲೇಷಣೆ, ಗುಣಮಟ್ಟದ ಶಿಕ್ಷಣ ನೀಡಲು ಸುಮಾರು 29 ಪುಟಗಳ ಮಾರ್ಗ ಸೂಚಿ ಬಿಡುಗಡೆಗೊಳಿಸಿದೆ.

ಶೈಕ್ಷಣಿಕ ಚಟುವಟಿಕೆಯ ಮೊದಲನೇ ಅವಧಿ 2023ರ ಮೇ.29ರಿಂದ ಅ.7ರ ವರೆಗೆ ಹಾಗೂ ಎರಡನೇ ಅವಧಿ 2023ರ ಅ.25ರಿಂದ 2024ರ ಏ.10ರವರೆಗೆ ನಿಗದಿಪಡಿಸಲಾಗಿದೆ. ಈ ಸಾಲಿನ ದಸರಾ ರಜೆಯನ್ನು 2023ರ ಅ.8ರಿಂದ ಅ.24ರ ವರೆಗೆ ನಿಗದಿಪಡಿಸಲಾಗಿದೆ. 2024ರ ಬೇಸಿಗೆ ರಜೆಯನ್ನು 2024ರ ಏ.11ರಿಂದ ಮೇ.28ರವರೆಗೆ ನಿಗದಿಗೊಳಿಸಲಾಗಿದೆ.

ಅಲ್ಲದೆ, ಈ ಸಾಲಿನ ಶೈಕ್ಷಣಿಕ ವರ್ಷದ 365 ದಿನಗಳಲ್ಲಿ 121 ರಜಾ ದಿನಗಳಿದ್ದು, 244 ಶಾಲಾ ಕರ್ತವ್ಯ ದಿನಗಳೆಂದು ಗುರುತಿಸಲಾಗಿದೆ. ಇದರಲ್ಲಿ ಪರೀಕ್ಷೆ ಮತ್ತು ಮೌಲ್ಯಾಂಕನ ಕಾರ್ಯಕ್ಕಾಗಿ 26 ದಿನ, ಪಠ್ಯೇತರ ಚಟುವಟಿಕೆಗಳಿಗಾಗಿ 24 ದಿನ, ಮೌಲ್ಯಮಾಪನಾ ಮತ್ತು ಫಲಿತಾಂಶ ವಿಶ್ಲೇಷಣೆ ಕಾರ್ಯಕ್ಕೆ 10 ದಿನ, ಶಾಲಾ ಸ್ಥಳೀಯ ರಜೆಗಳಿಗೆ 4 ದಿನ ಹಾಗೂ ಬೋಧನಾ – ಕಲಿಕಾ ಪ್ರಕ್ರಿಯೆಗಾಗಿ 180 ದಿನಗಳನ್ನು ವಿಂಗಡಿಸಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಇಂದು ಜಾನಪದ ಕಲಾ ಪ್ರದರ್ಶನ

ಮಂಡ್ಯ, ಏ.5– ಜಾನಪದ ಕಲಾವಿದರ ಒಕ್ಕೂಟ, ಮೈಸೂರು ವಿಭಾಗ ಇವರ ವತಿಯಿಂದ ನಾಳೆ ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಜಾನಪದ ಕಲಾ ಪ್ರದರ್ಶನ ಮತ್ತು ಆರ್.ಕೆ. ಕರ್ನಾಟಕ ಸಂಪಾದಿಸಿರುವ ಜನಪದ ಕಲೆಗಳು ಪುಸ್ತಕ ಬಿಡುಗಡೆ ಸಮಾರಂಭ ನಡೆಯಲಿದೆ.

ಕಸಾಪ ಜಿಲ್ಲಾಧ್ಯಕ್ಷ ಸಿ.ಕೆ. ರವಿಕುಮಾರ ಚಾಮಲಾಪುರ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ವಿ. ಅಂಗಡಿ, ಮಹಿಳಾ ಸರ್ಕಾರಿ ಕಾಲೇಜು ಸಹಾಯಕ ಪ್ರಾಧ್ಯಾಪಕಿ ಡಾ. ಕೆಂಪಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್. ಉದಯಕುಮಾರ್, ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ಎಚ್.ಬಿ. ರಾಜೇಗೌಡ ಭೂಮಿಪುರ, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಕಾರಸವಾಡಿ ಮಹದೇವು, ಅರ್ಚಕ ವೀರಭದ್ರಸ್ವಾಮಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕಲಾವಿದರಾದ ಆರ್.ಕೆ. ಸ್ವಾಮಿ, ಎಚ್.ಸಿ. ಮಹೇಶ್‌ಕುಮಾರ್, ಪುನೀತ್‌ಕುಮಾರ್, ಕುಲ್‌ದೀಪ್, ಅಮಿತ್‌ಕುಮಾರ್, ಯಡಹಳ್ಳಿ ಪ್ರಕಾಶ್, ಮಹದೇವಸ್ವಾಮಿ, ರವಿ ಕೆ., ಅರುಣ್ ಕುಮಾರ್ ಅವರುಗಳು ವಿವಿಧ ಜಾನಪದ ಕಲಾಪ್ರದರ್ಶನ ನೀಡುವರು ಎಂದು ವ್ಯವಸ್ಥಾಪಕರು ತಿಳಿಸಿದ್ದಾರೆ.

ರೈಲ್ವೆಯಲ್ಲಿ ಕೆಲಸ ಕೊಡಿಸುವುದಾಗಿ ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ಪರಿಚಯ ಆದವರಿಗೆ ವಂಚನೆ: ಆರೋಪಿ ಬಂಧನ

- 10 ಲಕ್ಷ ನಗದು, ಪಲ್ಸರ್ ಬೈಕ್, ಚಿನ್ನಾಭರಣ, ಐ–ಫೋನ್ ವಶಕ್ಕೆ
- ಹಲವರಿಗೆ ಹೀಗೆ ವಂಚಿಸಿದ ಸಂಬಂಧ ಹಲವೆಡೆ ಪ್ರಕರಣ ದಾಖಲು

ಮಂಡ್ಯ, ಏ.5–ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ಪರಿಚಯವಾದ ವಿದ್ಯಾರ್ಥಿನಿಗೆ ರೈಲ್ವೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 31.34 ಲಕ್ಷ ರೂ. ವಂಚನೆ ಮಾಡಿದ ವಂಚಕನನ್ನು ಮಂಡ್ಯ ಜಿಲ್ಲಾ ಸೆನ್ ಠಾಣೆ ಪೊಲೀಸರು ಬಂಧಿಸಿ 10 ಲಕ್ಷ ನಗದು, 37 ಗ್ರಾಂ ಚಿನ್ನಾಭರಣ, ಐ–ಫೋನ್ ಮತ್ತು ಪಲ್ಸರ್ ಬೈಕ್ ವಶಪಡಿಸಿಕೊಂಡಿದ್ದಾರೆ.

ಈತನನ್ನು ಮಂಡ್ಯ ತಾಲೂಕಿನ ಮಾಚಹಳ್ಳಿ ಗ್ರಾಮದವನೆಂದು ಪೊಲೀಸರು ತಿಳಿಸಿದ್ದು, ಆನ್‌ಲೈನ್ ಮೂಲಕ ವಂಚನೆ ಮಾಡುವುದನ್ನೇ ಪ್ರವೃತ್ತಿಯಾಗಿಸಿಕೊಂಡಿರುವ ಈತ, ಹಲವಾರು ಹೆಸರುಗಳಲ್ಲಿ ಮೈಸೂರು ನಗರ, ಕೆ.ಆರ್.ನಗರ, ದಾವಣಗೆರೆ, ಬೆಂಗಳೂರು, ಚಿಕ್ಕಮಗಳೂರು ಹಾಗೂ ಹರಿಹರದ ವ್ಯಕ್ತಿಗಳಿಗೆ ವಂಚನೆ ಎಸಗಿದ್ದು, ಈತನ ನೈಜ ಹೆಸರನ್ನು ಪೊಲೀಸರು ತಿಳಿಸಿಲ್ಲ.

ವಿವರ: ಮಂಡ್ಯ ಜಿಲ್ಲೆ ಮದ್ದೂರು ತಾಲೂಕು ಬಿದರಕೋಟೆ ಗ್ರಾಮದ ಪ್ರಥಮ ವರ್ಷದ ಎಂ.ಎಸ್ಸಿ ವ್ಯಾಸಂಗ ಮಾಡುತ್ತಿರುವ ಬಿ.ಎನ್. ನಂದಿನಿ (26) ಎಂಬ ವಿದ್ಯಾರ್ಥಿನಿಯ ಪ್ರೊಫೈಲ್‌ಗೆ ಲಿಂಗಾಯತ್ ಮ್ಯಾಟ್ರಿಮೋನಿ ಡಾಟ್ ಕಾಮ್ ಮೂಲಕ ಒಪ್ಪಿಗೆ ಕೊಟ್ಟ ಎಂ.ಮಧು ಎಂಬಾತ ನಂತರ ಮ್ಯಾಟ್ರಿಮೋನಿ ವೆಬ್‌ಸೈಟ್ ನಲ್ಲಿದ್ದ ಆಕೆಯ ಮೊಬೈಲ್ ನಂಬರ್ ಅನ್ನು 2022ರ ಡಿ.6ರಂದು ಸಂಪರ್ಕಿಸಿ ರೈಲ್ವೆ ಇಲಾಖೆಯಲ್ಲಿ ಕೆಲಸವಿದೆ. ಇಷ್ಟಪಟ್ಟರೆ ಕೊಡಿಸುತ್ತೇನೆ ಎಂದು ಹೇಳಿದ್ದಾನೆ.

ಅದಕ್ಕೆ ವಿದ್ಯಾರ್ಥಿನಿ ಸ್ಪಂದಿಸಿದಾಗ ಮೊದಲಿಗೆ 7200 ರೂ. ಡಿಡಿ ತೆಗೆದುಕೊಳ್ಳಬೇಕು ಎಂದು ರಜತ್ ಎಂಬ ಹೆಸರಿನ ಫೋನ್ ಪೇ ನಂಬರ್‌ಗೆ ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ತದನಂತರ ವಿವಿಧ ಕಾರಣಗಳನ್ನು ಹೇಳಿ ಹಲವಾರು ಹೆಸರುಗಳ ಫೋನ್ ಪೇ ಹಾಗೂ ಬ್ಯಾಂಕ್ ಖಾತೆಗಳಿಗೆ 2022ರ ಡಿ.6 ರಿಂದ 2023ರ ಫೆ.13ರವರೆಗೆ ಒಟ್ಟು 31,34,340 ರೂ. ವರ್ಗಾವಣೆ ಮಾಡಿಸಿಕೊಂಡಿದ್ದು, ಆಕೆಗೆ ಕೆಲಸವನ್ನೂ ಕೊಡಿಸದೆ ಮತ್ತೆ ಯಾವುದೋ ಶುಲ್ಕವೆಂದು ಹಣಕ್ಕೆ ಬೇಡಿಕೆ ಇಟ್ಟಾಗ ಎಚ್ಚೆತ್ತುಕೊಂಡ ವಿದ್ಯಾರ್ಥಿ ಮಾ.29ರಂದು ಮಂಡ್ಯ ಜಿಲ್ಲಾ ಸೆನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಈ ವಂಚಕನನ್ನು ಬಂಧಿಸಿ, 10 ಲಕ್ಷ ನಗದು, 2.34 ಲಕ್ಷ ಮೌಲ್ಯದ 37 ಗ್ರಾಂ ಚಿನ್ನಾಭರಣ, ಐ–ಫೋನ್ ಮತ್ತು ಪಲ್ಸರ್ ಬೈಕ್ ವಶಪಡಿಸಿಕೊಂಡಿದ್ದಾರೆ. ಈತನ ವಿರುದ್ಧ ಮೈಸೂರು ನಗರ ಸೆನ್ ಠಾಣೆ, ಕೆ.ಆರ್.ನಗರ, ದಾವಣಗೆರೆ ಬಡಾವಣೆ ಠಾಣೆ, ಬೆಂಗಳೂರಿನ ಕಾಟನ್ ಪೇಟೆ ಠಾಣೆ, ಚಿಕ್ಕಮಗಳೂರು ಗ್ರಾಮಾಂತರ ಠಾಣೆ, ಹರಿಹರ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 6 ಪ್ರಕರಣಗಳು ದಾಖಲಾಗಿವೆ ಈತ ಮ್ಯಾಟ್ರಿಮೋನಿ ವೆಬ್‌ಸೈಟ್ ಮೂಲಕ ಯುವತಿಯರು ಹಾಗೂ ಅವರ ಪೋಷಕರನ್ನು ಸಂಪರ್ಕಿಸಿ ಕೆಲಸ ಕೊಡಿಸುವ ನೆಪದಲ್ಲಿ ಆನ್‌ಲೈನ್ ಮೂಲಕ ವಂಚನೆ ಮಾಡುವುದನ್ನೇ ಪ್ರವೃತ್ತಿಯಾಗಿಸಿಕೊಂಡಿದ್ದಾನೆ ಎಂದು ಹೇಳಲಾಗಿದೆ.

ಆಲನಹಳ್ಳಿ ಕೆಲವೆಡೆ ಕಲುಷಿತ ನೀರು ಪೂರೈಕೆ

ನಿವಾಸಿಗಳಲ್ಲಿ ಸಾಂಕ್ರಾಮಿಕ ರೋಗ ಭೀತಿ

ಮೈಸೂರು, ಏ.5(ಎಸ್‌ಪಿಎನ್)– ಮೈಸೂರಿನ ಆಲನಹಳ್ಳಿ ಗ್ರಾಮ ಸೇರಿದಂತೆ ಸುತ್ತಮುತ್ತ ಬಡಾವಣೆಗಳಿಗೆ ಕೆಲ ದಿನಗಳಿಂದ ಕಲುಷಿತ ನೀರು ಸರಬರಾಜಾಗುತ್ತಿದೆ. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಒತ್ತಾಯಿಸಿ ಆಲನಹಳ್ಳಿ ನಿವಾಸಿಗಳು ಮೈಸೂರು ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ಪಾಲಿಕೆ ಆಯುಕ್ತರು ಹಾಗೂ ಮೈಸೂರು ತಾಪಂ ಇಓಗೆ ಮನವಿ ಸಲ್ಲಿಸಿದ್ದಾರೆ.



ಆಲನಹಳ್ಳಿ ಗ್ರಾಮದ ಬಸವೇಶ್ವರ ದೇವಸ್ಥಾನ ಹಿಂಭಾಗದ ಮೂರು ಬೀದಿಗಳಲ್ಲಿ ಹಲವು ದಿನದಿಂದ ಕಲುಷಿತ ನೀರು ಸರಬರಾಜಾಗುತ್ತಿದೆ. ಈ ನೀರು ಕುಡಿದ ಕೆಲ ಮಕ್ಕಳು, ವೃದ್ಧರಿಗೆ ಸಾಂಕ್ರಾಮಿಕ ರೋಗಗಳು ಉಲ್ಬಣಗೊಂಡಿದ್ದು ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಲುಷಿತ ನೀರು ಕುಡಿಯುವುದರಿಂದ ಗ್ರಾಮದಲ್ಲಿ ಪದೆ ಪದೇ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಒತ್ತಾಯಿಸಿದ್ದಾರೆ.

> ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಕಲುಷಿತ ನೀರು ಪೂರೈಕೆ ಆಗುತ್ತಿರುವ ಕುರಿತು ಇಲ್ಲಿಯವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಈ ಕುರಿತು ಪಾಲಿಕೆ ಆಯುಕ್ತರು, ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ಹಾಗೂ ಮೈಸೂರು ಜಿಪಂ ಸಿಇಓ ಸೇರಿದಂತೆ ಇದಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೂ ಕುಡಿಯುವ ನೀರಿನ ಸಮಸ್ಯೆ ಹಾಗೂ ಆಲನಹಳ್ಳಿ ಕಲುಷಿತ ನೀರು ಪೂರೈಕೆ ಕುರಿತು ಪರಿಶೀಲಿಸುವಂತೆ ಸೂಚನೆ ನೀಡಲಾಗುವುದು.
>
> -ಡಾ.ಕೆ.ವಿ.ರಾಜೇಂದ್ರ
> ಮೈಸೂರು ಜಿಲ್ಲಾಧಿಕಾರಿ

ಆಲನಹಳ್ಳಿ ನಿವಾಸಿಗಳಾದ ಪಿ.ಮಹೇಶ್, ಪ್ರಸನ್ನ ಕುಮಾರ್, ಮಾದೇವ್, ಬಿ.ಹೇಮಂತ್, ರುಕ್ಮಿಣಿ, ಚಂದ್ರಮ್ಮ, ಚಿನ್ನಮ್ಮ, ಗೌರಮ್ಮ, ಎನ್.ಮಹದೇವಸ್ವಾಮಿ, ರಾಚಪ್ಪ, ಮರಿದೇವಮ್ಮ, ರೇಣುಕಾ, ಎಂ.ಮಲ್ಲಿಕಾರ್ಜುನ ಸ್ವಾಮಿ, ಎಲ್.ಮಹದೇವಸ್ವಾಮಿ, ಪಿ.ಕೃಷ್ಣ ಭೈರಪ್ಪ ಗೋವಿಂದ, ಮಹದೇವಸ್ವಾಮಿ, ಚೇತನ, ಮಹಾಲಿಂಗ ಸೇರಿದಂತೆ ಇತರರು ಸಮಸ್ಯೆ ನಿವಾಹರಣೆಗೆ ಹಿರಿಯ ಅಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಪುತ್ರ, ಬೆಂಬಲಿಗರೊಂದಿಗೆ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಬಿಜೆಪಿ ಸೇರ್ಪಡೆ

ಬೆಂಗಳೂರು, ಏ.5– ಮಾಜಿ ಲೋಕಸಭಾ ಸದಸ್ಯ ಹಾಗೂ ಮಂಡ್ಯ ಜಿಲ್ಲೆಯ ಪ್ರಭಾವಿ ರಾಜಕೀಯ ನಾಯಕ ಎಲ್.ಆರ್.ಶಿವರಾಮೇಗೌಡ ಅವರು ಬಿಜೆಪಿ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿದ್ದಾರೆ. ಮಲ್ಲೇಶ್ವರಂನ ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್.ಆರ್. ಶಿವರಾಮೇಗೌಡ ಅವರನ್ನು ಪಕ್ಷದ ಪ್ರಮುಖರು ಹೂಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡಿದ್ದು, ನಂತರ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ.

ಶಿವರಾಮೇಗೌಡರ ಜೊತೆಗೆ ಈ ಸಂದರ್ಭದಲ್ಲಿ ಅವರ ಪುತ್ರ ಮತ್ತು ಬೆಂಬಲಿಗರು ಕೂಡ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಅವರು ಸ್ಪರ್ಧೆ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ. ನಾಗಮಂಗಲದಲ್ಲಿ ಬಿಜೆಪಿ ಸಂಘಟನೆ ಕೊರತೆ ಎದುರಿಸುತ್ತಿದ್ದು, ಶಿವರಾಮೇಗೌಡ ಅವರಂತಹ ಪ್ರಭಾವಿ ನಾಯಕರು ಬಿಜೆಪಿಗೆ ಸೇರ್ಪಡೆಯಾಗಿರುವುದು ಕಮಲ ನಾಯಕರಿಗೆ ಹೆಚ್ಚಿನ ಶಕ್ತಿ ತುಂಬಿದೆ. ಈ ಹಿಂದೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನಲ್ಲಿದ್ದ ಅವರು ಶಾಸಕರಾಗಿ ಹಾಗೂ ಒಂದು ಬಾರಿ ಮಂಡ್ಯ ಲೋಕಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು, ಏ.5– ಏ.3 ರಂದು ಬ್ಯಾಡರಳ್ಳಿ–ಪಾಂಡವಪುರ ರೈಲು ನಿಲ್ದಾಣಗಳ ನಡುವೆ ರೈಲ್ವೇ ಟ್ರ್ಯಾಕ್ ಪಕ್ಕದಲ್ಲಿ ಸುಮಾರು 65 ವರ್ಷದ ಅಪರಿಚಿತ ಗಂಡಸು ಮೃತಪಟ್ಟಿದ್ದು, ರೈಲ್ವೇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಮೃತನ ಚಹರೆ: ಈ ವ್ಯಕ್ತಿಯು 5 ಅಡಿ ಎತ್ತರವಿದ್ದು ಸಾಧಾರಣ ಮೈಕಟ್ಟನ್ನು ಹೊಂದಿರುತ್ತಾರೆ. ಗೋಧಿ ಬಣ್ಣ, ಬಡಕಲು ಶರೀರ, ಕಪ್ಪು ಬಿಳಿ ತಲೆಕೂದಲು ಇದ್ದು, ಕೊರಳಲ್ಲಿ ಏಸು ಕ್ರಿಸ್ತನ ಶಿಲುಬೆಯಿರುತ್ತದೆ.

ವಾರಸುದಾರರು ಇದ್ದಲ್ಲಿ ರೈಲ್ವೇ ಪೊಲೀಸ್ ಠಾಣೆ (ದೂ.ಸಂ:0821–2516579) ಯನ್ನು ಸಂಪರ್ಕಿಸಬಹುದು ಎಂದು ರೈಲ್ವೇ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಧಾನಸಭಾ ಚುನಾವಣೆ–2023



ಭತ್ತದ ಕಣಜ ಕೆ.ಆರ್.ನಗರ ಮತ್ತೊಮ್ಮೆ ಜಿದ್ದಾಜಿದ್ದಿ ಕಣ



■ ಎಸ್.ಬಿ.ದೇವರಾಜ

ಭತ್ತದ ಕಣಜ ಕೃಷ್ಣರಾಜನಗರ (ಕೆ.ಆರ್.ನಗರ) ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಸಮಬಲ ಸಾಧಿಸಿಕೊಂಡು ಬಂದಿವೆ. ಮೂರು ಬಾರಿ ಪಕ್ಷೇತರರು, ಎರಡು ಬಾರಿ ಜನತಾ ಪಕ್ಷದ ಅಭ್ಯರ್ಥಿಗಳೂ ಇಲ್ಲಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕ್ಷೇತ್ರದ ಮೊದಲ ಶಾಸಕರು ಪಕ್ಷೇತರವಾಗಿ ಸ್ಪರ್ಧಿಸಿ ಗೆದ್ದಿದ್ದು ವಿಶೇಷ. ಜೀವನದಿ ಕಾವೇರಿ ಉಭಯ ದಂಡೆಗಳಲ್ಲಿ ವ್ಯಾಪಿಸಿರುವ ಈ ಕ್ಷೇತ್ರದಲ್ಲಿ ಒಕ್ಕಲಿಗ ಹಾಗೂ ಕುರುಬ ಸಮುದಾಯಗಳ ಪ್ರಾಬಲ್ಯವಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡ, ಲಿಂಗಾಯತರು ಸೇರಿ ಇತರೆ ಹಿಂದುಳಿದ ವರ್ಗದವರು ಹಾಗೂ ಮುಸ್ಲಿಂ ಸಮುದಾಯದ ಮತದಾರರೂ ಹೆಚ್ಚಿದ್ದಾರೆ. ಜೆಡಿಎಸ್‌ಗೆ ಹ್ಯಾಟ್ರಿಕ್ ಗೆಲುವು ನೀಡಿರುವ ಇಲ್ಲಿಯ ಮತದಾರರು, ಕಾಂಗ್ರೆಸ್‌ನ ಓರ್ವ ಅಭ್ಯರ್ಥಿಯನ್ನೂ ಮೂರು ಬಾರಿ ಆಯ್ಕೆ ಮಾಡಿದ್ದಾರೆ. ಹಲವು ಅಭ್ಯರ್ಥಿಗಳ ಸೋಲು–ಗೆಲುವಿನ ಚದುರಂಗದಾಟ ಸೇರಿದಂತೆ ಹಲವು ವಿಶೇಷತೆಗಳಿಗೆ ಈ ಕ್ಷೇತ್ರ ಸಾಕ್ಷಿಯಾಗಿದೆ.

ಮೊದಲ ಶಾಸಕರಾದ ಪಕ್ಷೇತರ: 1952ರಲ್ಲಿ ನಡೆದ ಮೊದಲ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಎಂ.ಎಲ್.ನಂಜರಾಜೇ ಅರಸ್, ಸಮಾಜವಾದಿ ಪಕ್ಷದಿಂದ ಕೆ.ಎಸ್.ಗೌಡಯ್ಯ, ಕಿಸಾನ್ ಮಜ್ದೂರ್ ಪ್ರಜಾ ಪಾರ್ಟಿ(ಕೆಎಂಪಿಪಿ)ಯಿಂದ ಬಿ.ಸಿದ್ದಲಿಂಗಶೆಟ್ಟಿ ಹಾಗೂ ಪಕ್ಷೇತರರಾಗಿ ಸಾಲಿಗ್ರಾಮದ ಹನುಮಂತಗೌಡರು ಕಣಕ್ಕಿಳಿದಿದ್ದರು. ಆ ಚುನಾವಣೆಯಲ್ಲಿ ಪಕ್ಷೇತರ ಎಸ್.ಎಚ್. ತಮ್ಮಯ್ಯ ಅವರು ಗೆಲುವು ಪಡೆದು ಶಾಸಕರಾದರು. ಕಾಂಗ್ರೆಸ್‌ನ ನಂಜರಾಜೇ ಅರಸ್ ಪೈಪೋಟಿ ನೀಡಿ, ಪರಾಜಿತರಾದರು.

ರೋಚಕ ಇತಿಹಾಸ: 1957ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ.ಚನ್ನಬಸಪ್ಪ ಅವರು, ಪಕ್ಷೇತರ ಅಭ್ಯರ್ಥಿ ಕೆ.ಎಸ್.ಗೌಡಯ್ಯ ಅವರನ್ನು ಮಣಿಸಿ ಶಾಸಕರಾಗಿ ಆಯ್ಕೆಯಾದರು. ಆದರೆ 1962ರ ಚುನಾವಣೆಯಲ್ಲೂ ಪಕ್ಷೇತರರಾಗಿ ಸ್ಪರ್ಧಿಸಿದ್ದ ಕೆ.ಎಸ್.ಗೌಡಯ್ಯ ಹಾಗೂ ಕಾಂಗ್ರೆಸ್‌ನ ಹೆಚ್.ಎಂ.ಚನ್ನಬಸಪ್ಪ ಅವರನ್ನು ಸೋಲಿಸಿ ಶಾಸಕರಾದರು. 1967ರ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಗಳಾಗಿದ್ದ ಎಂ.ಬಸವರಾಜು ಹಾಗೂ ಎಸ್‌ಹೆಚ್‌ಆರ್ ಗೌಡರ ನಡುವಿನ ಹಣಾಹಣಿಯಲ್ಲಿ ಬಸವರಾಜು ಗೆಲುವು ದಾಖಲಿಸಿದರು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕೆ.ಎಸ್.ಗೌಡಯ್ಯ, ಭಾರತೀಯ ಜನಸಂಘದಿಂದ ವೈ.ಎಸ್.ಲಿಂಗಯ್ಯ, ಪಕ್ಷೇತರ ಎಸ್.ಬಿ.ಬೋರಣ್ಣ ಬಿ.ಗೌಡರೂ ಸ್ಪರ್ಧಿಸಿದ್ದರು. 1972ರ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್‌ನ ಹೆಚ್.ಎಲ್.ತಿಮ್ಮೇಗೌಡ ಹಾಗೂ ಪಕ್ಷೇತರ ಎಂ.ಬಸವರಾಜು ಅವರನ್ನು ಮಣಿಸಿ ಕಾಂಗ್ರೆಸ್‌ನ ಹೆಚ್.ಬಿ.ಕೆಂಚೇಗೌಡ ಶಾಸಕರಾಗಿದ್ದರು.

1978ರಲ್ಲಿ ಇಂದಿರಾ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎ.ಹೆಚ್.ವಿಶ್ವನಾಥ್, ಜನತಾ ಪಕ್ಷದ ಎಸ್.ನಂಜಪ್ಪ ಅವರನ್ನು ಸೋಲಿಸಿ, ಗೆದ್ದು ಬಂದಿದ್ದರು. 1983 ಮತ್ತು 1985ರಲ್ಲಿ ಜನತಾ ಪಕ್ಷದ ಎಸ್.ನಂಜಪ್ಪ, ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್ ಅವರನ್ನು ಸೋಲಿಸಿ, ಸತತ ಎರಡು ಬಾರಿ ಶಾಸಕರಾದರು. 1989ರಲ್ಲಿ ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್, ಎಸ್.ನಂಜಪ್ಪ ಅವರನ್ನು ಮಣಿಸಿ ಮತ್ತೆ ಶಾಸಕರಾದರು. 1994ರಲ್ಲಿ ಜನತಾದಳದ ಎಸ್.ನಂಜಪ್ಪ ಅವರು ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್ ಅವರನ್ನು ಸೋಲಿಸಿ, ಆಯ್ಕೆಯಾದರು. 1999ರಲ್ಲಿ ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್, ಜೆಡಿಎಸ್‌ನ ಮಂಚನಹಳ್ಳಿ ಮಹದೇವ್ ಅವರನ್ನು ಸೋಲಿಸಿ, ಶಾಸಕರಾದರು. ಬಿಜೆಪಿಯ ಎಸ್.ಎ.ಗೋವಿಂದರಾಜು ಮೂರನೇ ಸ್ಥಾನ ಪಡೆದರು. 2004ರಲ್ಲಿ ಜೆಡಿಎಸ್‌ನ ಮಂಚನಹಳ್ಳಿ ಮಹದೇವ್ ಅವರು ಕಾಂಗ್ರೆಸ್‌ನ ವಿಶ್ವನಾಥ್ ಅವರನ್ನು ಸೋಲಿಸಿ ಶಾಸಕರಾದರು. ಆ ಚುನಾವಣೆಯಲ್ಲಿ ಸಾ.ರಾ.ಮಹೇಶ್ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾದರು. ಆದರೆ 2008ರಲ್ಲಿ ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್, 2013ರಲ್ಲಿ ಕಾಂಗ್ರೆಸ್‌ನ ದೊಡ್ಡಸ್ವಾಮೇಗೌಡರು ಹಾಗೂ 2018ರಲ್ಲಿ ಕಾಂಗ್ರೆಸ್‌ನ ಡಿ.ರವಿಶಂಕರ್ ವಿರುದ್ಧ ಗೆದ್ದು ನಿರಂತರವಾಗಿ ಮೂರು ಬಾರಿ ಶಾಸಕರಾಗುವ ಮೂಲಕ ದಾಖಲೆ ಬರೆದರು.

ಸೋಲು–ಗೆಲುವಿನಾಟ: ಕೆ.ಆರ್.ನಗರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸೆಣಸಾಡಿದ ಎ.ಹೆಚ್.ವಿಶ್ವನಾಥ್ ಅವರು 5 ಬಾರಿ ಸೋಲುಂಡು ಮೂರು ಬಾರಿ ಗೆದ್ದು ಶಾಸಕರಾಗಿದ್ದಾರೆ. ಅವರ ಸೋಲು–ಗೆಲುವಿನಾಟ ವಿರೋಚಿತವಾಗಿತ್ತು. 1978ರಲ್ಲಿ ಜನತಾ ಪಕ್ಷದ ಎಸ್.ನಂಜಪ್ಪ ಅವರನ್ನು ಮಣಿಸಿ ಮೊದಲ ಬಾರಿ ಶಾಸಕರಾದರು. 1983 ಹಾಗೂ 85ರ ಚುನಾವಣೆಗಳಲ್ಲಿ ನಂಜಪ್ಪ ಅವರ ವಿರುದ್ಧ ಸತತ ಸೋಲು ಕಂಡರು. 1989ರಲ್ಲಿ ನಂಜಪ್ಪ ವಿರುದ್ಧ ಮತ್ತೆ ಗೆದ್ದರು. 1994ರಲ್ಲಿ ನಂಜಪ್ಪ ಅವರ ವಿರುದ್ಧ ಪರಾಭವಗೊಂಡರು. 1999ರಲ್ಲಿ ಜೆಡಿಎಸ್‌ನ ಮಂಚನಹಳ್ಳಿ ಮಹದೇವ್ ವಿರುದ್ಧ ವಿಶ್ವನಾಥ್ ಗೆದ್ದು ಶಾಸಕರಾದರು. ಆದರೆ 2004ರಲ್ಲಿ ಅವರ ವಿರುದ್ಧವೇ ಸೋತರು. 2008ರಲ್ಲೂ ವಿಶ್ವನಾಥ್, ಜೆಡಿಎಸ್‌ನ ಸಾ.ರಾ.ಮಹೇಶ್ ವಿರುದ್ಧ ಸೋಲು ಕಂಡರು.

ಸಾರಾಗೆ ಹ್ಯಾಟ್ರಿಕ್: 2004ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಪರಾಭವಗೊಂಡಿದ್ದ ಸಾ.ರಾ.ಮಹೇಶ್, ನಂತರದಲ್ಲಿ ಜೆಡಿಎಸ್‌ನಿಂದ ಹ್ಯಾಟ್ರಿಕ್ ಗೆಲುವು ಪಡೆದರು. 2008ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ದೊಡ್ಡ ಸ್ವಾಮೇಗೌಡರನ್ನು 15,052 ಮತಗಳ ಅಂತರದಿಂದ ಹಾಗೂ 2013ರಲ್ಲಿ ಕಾಂಗ್ರೆಸ್‌ನ ಎ.ಹೆಚ್.ವಿಶ್ವನಾಥ್ ವಿರುದ್ಧ 20,548 ಮತಗಳ ಭಾರೀ ಅಂತರದಲ್ಲಿ ಜಯಗಳಿಸಿದ್ದ ಸಾ.ರಾ.ಮಹೇಶ್‌ಗೆ ಹ್ಯಾಟ್ರಿಕ್ ಗೆಲುವು ಸುಲಭ ಸಾಧ್ಯವಾಗಿರಲಿಲ್ಲ. ದೊಡ್ಡಸ್ವಾಮೇಗೌಡರ ಪುತ್ರ, ಜಿಪಂ ಮಾಜಿ ಸದಸ್ಯ ಡಿ.ರವಿಶಂಕರ್ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಸಾ.ರಾ. ಮಹೇಶ್ ಜೊತೆ ಜಿದ್ದಾಜಿದ್ದಿನ ಹೋರಾಟ ನಡೆಸಿದ್ದರು. ಆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸಾ.ರಾ.ಮಹೇಶ್ 85,011 ಮತಗಳೊಂದಿಗೆ ಕಾಂಗ್ರೆಸ್‌ನ ರವಿಶಂಕರ್ (83,232 ಮತ) ವಿರುದ್ಧ ಕೇವಲ 1779 ಮತಗಳ ಅಂತರದಲ್ಲಿ ಗೆಲ್ಲುವ ಮೂಲಕ ಕಡೆಗೂ ಹ್ಯಾಟ್ರಿಕ್ ಸಾಧನೆ ಮಾಡಿದರು.

ಈ ಬಾರಿಯೂ ಹೈ ವೋಲ್ಟೇಜ್ ಕಣ

2023ರ ಸಾರ್ವತ್ರಿಕ ಚುನಾವಣೆಯಲ್ಲೂ ಕೆ.ಆರ್.ನಗರ ಹೈ ವೋಲ್ಟೇಜ್ ಕಣವಾಗುವುದು ನಿಶ್ಚಿತ. ಹ್ಯಾಟ್ರಿಕ್ ಸಾಧನೆಯ ಹಾಲಿ ಶಾಸಕ ಸಾ.ರಾ. ಮಹೇಶ್ ಮತ್ತೆ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧೆಗಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಅತ್ಯಲ್ಪ ಮತಗಳಿಂದ ಪರಾಜಿತರಾದ ಡಿ.ರವಿಶಂಕರ್ ಅವರನ್ನೇ ಕಾಂಗ್ರೆಸ್ ಮತ್ತೆ ಅಖಾಡಕ್ಕಿಳಿಸಿದೆ. ಇವರಿಬ್ಬರ ವಿರುದ್ಧ ತೀವ್ರ ಹಣಾಹಣಿ ನಡೆಯಲಿದೆ ಎನ್ನುವುದು ಕ್ಷೇತ್ರದ ಜನರ ಅಭಿಪ್ರಾಯ. ಇನ್ನು ಬಿಜೆಪಿ ಟಿಕೆಟ್‌ಗೆ ಪೈಪೋಟಿ ಹೆಚ್ಚಾಗಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶ್ವೇತಾ ಗೋಪಾಲ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಮುಖಂಡ ಹೊಸಳ್ಳಿ ವೆಂಕಟೇಶ, ಕೆ.ವೈ.ಮಂಜು, ಮೇಲೂರು ಮಂಜು, ಎಚ್.ಪಿ.ಗೋಪಾಲ್, ಪ್ರಭಾಕರ್ ಜೈನ್ ಸೇರಿದಂತೆ ಹಲವರು ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಅಂತಿಮವಾಗಿ ಸಾ.ರಾ.ಮಹೇಶ್ ಹಾಗೂ ಡಿ.ರವಿಶಂಕರ್ ವಿರುದ್ಧ ಯಾರನ್ನು ಕಣಕ್ಕಿಳಿಸುತ್ತಾರೆ ಎನ್ನುವುದು ಕೆಲ ದಿನಗಳಲ್ಲೇ ತಿಳಿಯಲಿದೆ.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1952	ಎಸ್.ಹೆಚ್.ತಮ್ಮಯ್ಯ	ಪಕ್ಷೇತರ	.....
1957	ಹೆಚ್.ಎಂ.ಚನ್ನಬಸಪ್ಪ	ಕಾಂಗ್ರೆಸ್	18,615
1962	ಕೆ.ಎಸ್.ಗೌಡಯ್ಯ	ಪಕ್ಷೇತರ	20,976
1967	ಎಂ.ಬಸವರಾಜು	ಪಕ್ಷೇತರ	10,418
1972	ಹೆಚ್.ಬಿ.ಕೆಂಚೇಗೌಡ	ಕಾಂಗ್ರೆಸ್	15,604
1978	ಎ.ಹೆಚ್.ವಿಶ್ವನಾಥ್	ಕಾಂಗ್ರೆಸ್	33,571
1883	ಎಸ್.ನಂಜಪ್ಪ	ಜನತಾ ಪಕ್ಷ	35,896
1985	ಎಸ್.ನಂಜಪ್ಪ	ಜನತಾ ಪಕ್ಷ	33,170
1989	ಎ.ಹೆಚ್.ವಿಶ್ವನಾಥ್	ಕಾಂಗ್ರೆಸ್	61,509
1994	ಎಸ್.ನಂಜಪ್ಪ	ಜನತಾದಳ	51,014
1999	ಎ.ಹೆಚ್.ವಿಶ್ವನಾಥ್	ಕಾಂಗ್ರೆಸ್	58,161
2004	ಮಹದೇವ	ಜೆಡಿಎಸ್	40,341
2008	ಸಾ.ರಾ.ಮಹೇಶ್	ಜೆಡಿಎಸ್	77,322
2013	ಸಾ.ರಾ.ಮಹೇಶ್	ಜೆಡಿಎಸ್	81,457
2018	ಸಾ.ರಾ.ಮಹೇಶ್	ಜೆಡಿಎಸ್	85,011



ಕೆ.ಆರ್.ನಗರದಲ್ಲಿ ಮೂರರ ವಿಶೇಷ

ಜೆಡಿಎಸ್‌ನ ಸಾ.ರಾ.ಮಹೇಶ್ ಸತತವಾಗಿ 3 ಬಾರಿ ಶಾಸಕರಾಗಿದ್ದಾರೆ. ಸೋಲು–ಗೆಲುವಿನ ನಡುವೆ ಕಾಂಗ್ರೆಸ್‌ನಿಂದ ಎ.ಹೆಚ್.ವಿಶ್ವನಾಥ್ 3 ಬಾರಿ ಆಯ್ಕೆಯಾಗಿದ್ದಾರೆ. ಹಾಗೆಯೇ ಎಸ್.ನಂಜಪ್ಪನವರೂ ಒಮ್ಮೆ ಜನತಾದಳದಿಂದ ಹಾಗೂ ಇನ್ನೆರಡು ಬಾರಿ ಜನತಾ ಪಕ್ಷದಿಂದ ಸೇರಿ 3 ಬಾರಿ ಶಾಸಕರಾಗಿದ್ದಾರೆ. ಇನ್ನುಳಿದಂತೆ ಮಂಚನಹಳ್ಳಿ ಮಹದೇವ್, ಹೆಚ್.ಬಿ. ಕೆಂಚೇಗೌಡ, ಎಂ.ಬಸವರಾಜು, ಕೆ.ಎಸ್.ಚೌಡಯ್ಯ, ಹೆಚ್.ಎಂ.ಚೆನ್ನಬಸಪ್ಪ ಹಾಗೂ ಎಸ್.ಹೆಚ್.ತಮ್ಮಯ್ಯ ಒಮ್ಮೆ ಆಯ್ಕೆಯಾಗಿದ್ದಾರೆ. 3 ಬಾರಿ ಪಕ್ಷೇತರರು ಗೆದ್ದು ಶಾಸಕರಾಗಿದ್ದಾರೆ. ಇಲ್ಲಿ ಗೆದ್ದು ಶಾಸಕರಾದ ಎ.ಹೆಚ್. ವಿಶ್ವನಾಥ್, ಎಸ್.ನಂಜಪ್ಪ, ಸಾ.ರಾ. ಮಹೇಶ್ ಸೇರಿ ಮೂವರು ಸಚಿವರಾಗಿದ್ದರು. 1957ರಲ್ಲಿ ಶಾಸಕರಾಗಿ ಆಯ್ಕೆಯಾದ ಹೆಚ್.ಎಂ.ಚನ್ನಬಸಪ್ಪ ಅವರು ನೆರೆಯ ಪಿರಿಯಾಪಟ್ಟಣ ತಾಲೂಕಿನವರು. ವಿಧಾನಪರಿಷತ್ ಮಾಜಿ ಸದಸ್ಯ ಕೆ.ಸಿ. ಪುಟ್ಟಸಿದ್ದಶೆಟ್ಟಿ ಬಿಜೆಪಿ ಅಭ್ಯರ್ಥಿಯಾಗಿ ಹಾಗೂ ಖ್ಯಾತ ವೈದ್ಯ ಡಾ.ಎಸ್.ಪಿ.ಯೋಗಣ್ಣ ಬಿಎಸ್ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಈಗಿನ ಮತದಾರರ ವಿವರ	
ಪುರುಷರು	1,07,047
ಮಹಿಳೆಯರು	1,08,491
ಇತರೆ	19
ಒಟ್ಟು	2,15,557
ಇವರಲ್ಲಿ	
ಯುವ ಮತದಾರ	5,170
80+ ಹಿರಿಯರು	6,811
ವಿಶೇಷಚೇತನರು	3,132
ಮತಗಟ್ಟೆಗಳು	250
ಕಳೆದ ಚುನಾವಣೆ(2018) ಮತದಾನ	
ಒಟ್ಟು ಮತ	2,01,733
ಚಲಾಯಿಸಿದ್ದು	1,73,062
ಶೇಕಡಾ	85.79

ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಏ.11ರವರೆಗೆ ಅವಕಾಶ

ಮೈಸೂರು, ಏ.5– ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದ್ದರೆ ಮತ್ತು ಮತದಾರರ ಪಟ್ಟಿಯಲ್ಲಿ ಹೊಸದಾಗಿ ಹೆಸರು ಸೇರಿಸಲು ಏ.11 ರವರೆಗೆ ಅವಕಾಶವಿದ್ದು, ತಡ ಮಾಡದೆ ಬಂದ ಅರ್ಜಿಗಳನ್ನು ಸ್ವೀಕರಿಸಿ ಈ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಎಂ. ಗಾಯಿತ್ರಿ ತಿಳಿಸಿದರು. ವಿಧಾನಸಭೆ ಸಾರ್ವತ್ರಿಕ ಚುನಾವಣೆ–2023 ರ ಸಂಬಂಧ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಹುಣಸೂರು ಕ್ಷೇತ್ರದ ಫ್ಲೈಯಿಂಗ್ ಸ್ಕ್ವಾಡ್ ಹಾಗೂ ಸ್ಟಾಟಿಸ್ಟಿಕ್ ಸರ್ವೇಲೆನ್ಸ್ ತಂಡದ ಸದಸ್ಯರು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾದರಿ ನೀತಿ ಸಂಹಿತೆ ಸಮಿತಿಯ ವತಿಯಿಂದ ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸೆಕ್ಟರ್ ಆಫೀಸರ್‌ಗಳು ಬೂತ್ ಲೆವೆಲ್ ಆಫೀಸರ್‌ಗಳೊಟ್ಟಿಗೆ ಸಂಪರ್ಕದಲ್ಲಿದ್ದು ಏನಾದರೂ ಸಮಸ್ಯೆಗಳು ಕಂಡು ಬಂದಲ್ಲಿ ಪರಿಹರಿಸಬೇಕು.

ಮತದಾರರ ಪಟ್ಟಿಯಿಂದ ಹೆಸರುಗಳು ಕೈ ಬಿಟ್ಟು ಹೋಗದಂತೆ ಮತ್ತು ಮರಣ ಹೊಂದಿದವರ ಪಟ್ಟಿಯ ಬಗ್ಗೆ ಗಮನಹರಿಸಬೇಕು. ಪಾರ್ಟಿ ಮುಖಂಡರೊಡನೆ ಸಭೆ ನಡೆಸಿ ಅವರ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು. 80 ವರ್ಷ ಮೇಲ್ಪಟ್ಟಿದ್ದು ಮತಗಟ್ಟೆಗೆ ಬಂದು ಮತ ಹಾಕಲು ಸಾಧ್ಯವಾಗದವರಿಗೆ 12 ಡಿ ಮೂಲಕ ಮತದಾನ ಮಾಡಲು ಅವಕಾಶವಿದೆ. ಸಿ–ವಿಜಿಲ್ ಮೂಲಕ ದಾಖಲಾದ ದೂರುಗಳಿಗೆ ನೂರು ನಿಮಿಷಗಳಲ್ಲಿ ಪರಿಹಾರಕ್ಕೆ ನಮ್ಮ ಕೈಗೊಳ್ಳಲಾಗುವುದು. ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪೋಲಿಂಗ್ ಸ್ಟೇಷನ್‌ಗಳನ್ನು ಗುರುತಿಸಿದ್ದು, ಅವುಗಳ ಸರಿಯಾದ ನಿರ್ವಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು.

ಮತಗಟ್ಟೆಯಲ್ಲಿ ಕುಡಿಯುವ ನೀರು, ಶೌಚಾಲಯ, ವಿದ್ಯುತ್, ರ‍್ಯಾಂಪ್ ಫ್ಯಾನ್ ಒಳಗೊಂಡಂತೆ ಕನಿಷ್ಠ ಸೌಲಭ್ಯಗಳಿರುವಂತೆ ನೋಡಿಕೊಳ್ಳಬೇಕು. ಇವಿಎಂ ಮತ್ತು ವಿವಿಪ್ಯಾಟ್‌ಗಳ ನಿರ್ವಹಣೆಯಲ್ಲಿ ಅಥವಾ ಇವುಗಳ ಬಳಕೆಯಲ್ಲಿ ಸಮಸ್ಯೆಯಾದರೆ ರೀಪ್ಲೇಸ್ ಮಾಡಿಕೊಡಲಾಗುವುದು. ಯಾವುದೇ ಪಕ್ಷಗಳಿಗೆ ಸಂಬಂಧಿಸದ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಸ್ವಯಂಸೇವಕರನ್ನು ಚುನಾವಣಾ ಕಾರ್ಯದಲ್ಲಿ ಬಳಸಿಕೊಳ್ಳಬಹುದು. ಎಫ್‌ಎಸ್‌ಟಿ ಮತ್ತು ಎಸ್‌ಎಸ್‌ಟಿ ತಂಡದವರಿಗೆ ವಾಹನ ಪೂರೈಕೆ ಮಾಡಲು ಆರ್‌ಓ ಮತ್ತು ಎಂಆರ್‌ಓಗಳಿಗೆ ಸೂಚಿಸಿದರು. ತರಬೇತಿಯಲ್ಲಿ ಪ್ರಾಚ್ಯ ವಸ್ತು ಸಂಗ್ರಹಾಲಯದ ಆಯುಕ್ತ ದೇವರಾಜ್, ಹುಣಸೂರು ಚುನಾವಣಾಧಿಕಾರಿ ರುಚಿ ಬಿಂದಾಲ್ ಅವರನ್ನು ಒಳಗೊಂಡಂತೆ ಇತರರು ಉಪಸ್ಥಿತರಿದ್ದರು.

ಹಿಂದುತ್ವದ ಉಳಿವು, ಭ್ರಷ್ಟಾಚಾರದ ಅಳಿವಿಗಾಗಿ ಚುನಾವಣೆಯಲ್ಲಿ ಸ್ಪರ್ಧೆ

ಕಾರ್ಕಳ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ; ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್

ಮೈಸೂರು,ಏ.5(ಪಿಎಂ)–ಉಡುಪಿ ಜಿಲ್ಲೆಯ ಕಾರ್ಕಳ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಲಿದ್ದೇನೆ ಎಂದು ತಿಳಿಸಿದ ಶ್ರೀರಾಮಸೇನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್, ಹಿಂದುತ್ವದ ಉಳಿವು ಹಾಗೂ ಭ್ರಷ್ಟಾಚಾರದ ಅಳಿವು ಎಂಬ ಅಂಶಗಳನ್ನು ಮುಂದಿಟ್ಟುಕೊಂಡು ಸ್ಪರ್ಧಿಸುತ್ತಿದ್ದೇನೆ ಎಂದು ಹೇಳಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉಡುಪಿ ಜಿಲ್ಲೆಯ ಕಾರ್ಕಳ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಲಿದ್ದೇನೆ. ಕಳೆದ 6 ತಿಂಗಳಿಂದ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತಿದ್ದೇನೆ. ವಿಪರೀತ ಭ್ರಷ್ಟಾಚಾರ ಮತ್ತು ಡೋಂಗಿ ಹಿಂದುತ್ವವಾದದ ಬಗ್ಗೆ ಕ್ಷೇತ್ರದ ಮನೆ ಮನೆಗಳಲ್ಲಿ ಅಸಮಾಧಾನವಿದೆ. ಚುನಾವಣೆಗೆ ಸ್ಪರ್ಧಿಸುತ್ತಿರುವ ಹಿನ್ನೆಲೆಯಲ್ಲಿ ಇಂದು ಚಾಮುಂಡೇಶ್ವರಿ ದರ್ಶನ ಪಡೆಯಲು ಮೈಸೂರಿಗೆ ಭೇಟಿ ನೀಡಿದ್ದೆ ಎಂದು ತಿಳಿಸಿದರು.

ನನ್ನ ಸ್ಪರ್ಧೆ ಬಿಜೆಪಿ ವಿರುದ್ಧವಲ್ಲ. ಪ್ರಧಾನಿ ನರೇಂದ್ರ ಮೋದಿಯವರೇ ನಮಗೆ ಆದರ್ಶ. ಯೋಗಿ (ಉತ್ತರ ಪ್ರದೇಶ ಸಿಎಂ) ಮಾದರಿಯಲ್ಲೇ ಕಾರ್ಕಳ ಕ್ಷೇತ್ರದಲ್ಲಿ ಆಡಳಿತ ತರಬೇಕೆಂಬ ವಿಚಾರವಿಟ್ಟುಕೊಂಡೇ ಹೊರಟಿದ್ದೇನೆ. ಬಿಜೆಪಿಯೇ ಬೇಕು. ನಾನು ಗೆದ್ದ ನಂತರ ಬಿಜೆಪಿಗೇ ಸೇರುತ್ತೇನೆ. ಮೋದಿಯವರನ್ನೇ ಬೆಂಬಲಿಸುತ್ತೇನೆ ಎಂದರಲ್ಲದೆ, ಭ್ರಷ್ಟಾಚಾರಕ್ಕೆ ತಡೆಯೊಡ್ಡುವಲ್ಲಿ ರಾಜ್ಯ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನನ್ನನ್ನೂ ಸೇರಿದಂತೆ ಲಕ್ಷಾಂತರ ಹಿಂದು ಕಾರ್ಯಕರ್ತರು ಬಿಜೆಪಿ ಬೆಳೆಸಿದ್ದಾರೆ. ಹಾಗಾಗಿ ನನಗೆ ಹಕ್ಕಿದೆ ಎಂದ ಅವರು, ಬಿಜೆಪಿ ಹಿಂದೂಗಳನ್ನು ಕಾಪಾಡುತ್ತಿಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಬಿಜೆಪಿ ದಾರಿ ತಪ್ಪಿದೆ. ನಾನು ಸೇರಿದಂತೆ 12 ಮಂದಿ ಹಿಂದುತ್ವವಾದಿಗಳು ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿದ್ದೇವೆ. ನಮ್ಮ ಪರಿಸ್ಥಿತಿ ಹೇಗಾಗಿದೆ ಅಂದರೆ, ಕುಡುಕ ಗಂಡನಿಗೆ ವಿಚ್ಛೇದನ ಕೊಡಲಾಗದಂತಾಗಿದೆ. ಕುಡುಕ ಗಂಡನನ್ನೇ ಸುಧಾರಿಸಬೇಕು ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಸಚಿವ ಸುನಿಲ್‌ಕುಮಾರ್ ಆಸ್ತಿ ದುಪ್ಪಟ್ಟು: 2014ರಲ್ಲಿ ನರೇಂದ್ರ ಮೋದಿಯವರಿಗೆ 70 ಲಕ್ಷ ಆಸ್ತಿ ಇತ್ತು. ಆದರೆ ಇಂದು ಅವರ ಆಸ್ತಿ ಕಡಿಮೆಯಾಗಿದೆ. ಆದರೆ ಉಳಿದ ಎಂಪಿ, ಎಂಎಲ್‌ಎಗಳ ಆಸ್ತಿ ಬೆಳೆಯುತ್ತಿದೆ. ಸಚಿವ ಸುನೀಲ್ ಕುಮಾರ್ ಅವರಲ್ಲಿ 2004ರ ವೇಳೆಯಲ್ಲಿ ಏನೂ ಇರಲಿಲ್ಲ. ಆದರೆ ಇಂದು ಅವರದು ಸಾವಿರ ಕೋಟಿ ರೂ. ಘೋಷಿತ ಆಸ್ತಿ ಇದೆ. ಎಲ್ಲಿಂದ ಬಂತು. ಮುತಾಲಿಕ್ ಒಳಗೆ ಬಂದರೆ ತಾನೂ ತಿನ್ನುವುದಿಲ್ಲ. ಬೇರೆಯವರನ್ನೂ ತಿನ್ನಲು ಬಿಡುವುದಿಲ್ಲ ಎಂಬ ಆತಂಕ ರಾಜ್ಯ ಬಿಜೆಪಿಯವರಲ್ಲಿದೆ ಎಂದು ಹೇಳಿದರು.

ಹಾಸನ ಡಿಸಿ ಅಮಾನತಾಗಲಿ: ಹಾಸನ ಜಿಲ್ಲೆಯ ಬೇಲೂರಿನ ಚೆನ್ನಕೇಶವ ದೇವಸ್ಥಾನದಲ್ಲಿ ನಿನ್ನೆ ಕುರಾನ್ ಪಠಣ ಆಗಿದೆ. ಇದು ಕಾನೂನುಬಾಹಿರ. ಧಾರ್ಮಿಕ ದತ್ತಿ ಇಲಾಖೆಯ 12ನೇ ವಿಧಿಯಲ್ಲಿ ಅಹಿಂದುಗಳಿಗೆ 200 ಮೀಟರ್ ಅಂತರದಲ್ಲಿ ಪ್ರವೇಶವಿಲ್ಲ. ಅವರಿಗೆ ಯಾವುದೇ ರೀತಿಯ ಮಳಿಗೆಗಳ ಟೆಂಡರ್ ಕೊಡುವಂತಿಲ್ಲ ಎಂದು ಉಲ್ಲೇಖಿಸಲಾಗಿದೆ. ಅಲ್ಲಿಯ ಜಿಲ್ಲಾಧಿಕಾರಿಗಳು ಈ ನಿಯಮ ಉಲ್ಲಂಘನೆ ಮಾಡಿ ಕುರಾನ್ ಪಠಣಕ್ಕೆ ಅವಕಾಶ ನೀಡಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಅಲ್ಲಿಯ ಜೆಡಿಎಸ್ ಮುಖಂಡರ ಒತ್ತಡದಿಂದ ಇದಾಗಿದೆ. ಜಿಲ್ಲಾಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಒತ್ತಾಯಿಸಿದರು.

ಇತ್ತೀಚೆಗೆ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ಹುಂಡಿಯ ಹಣದಲ್ಲಿ ಶಾದಿ ಮಹಲ್‌ಗಾಗಿ 10 ಲಕ್ಷ ನೀಡಲು ತೀರ್ಮಾನಿಸಲಾಗಿದೆ. ಚುನಾವಣಾ ನೀತಿ ಸಂಹಿತೆ ಘೋಷಣೆಗೂ ಪೂರ್ವದಲ್ಲಿ ಈ ನಿರ್ಧಾರ ಮಾಡಲಾಗಿದೆ. ಭಕ್ತಿಭಾವನೆಯಿಂದ ಹಿಂದುಗಳು ಹಾಕಿದ ಹಣವನ್ನು ಶಾದಿ ಮಹಲ್‌ಗೆ ಕೊಡುವುದು ಸರಿಯಲ್ಲ. ಧಾರ್ಮಿಕ ದತ್ತಿ ಇಲಾಖೆಯ ವಿಧಿಯಲ್ಲಿ ಅಹಿಂದುಗಳಿಗೆ ಹೀಗೆ ಹಣ ನೀಡುವಂತಿಲ್ಲವೆಂಬ ಉಲ್ಲೇಖವಿದೆ. ಹೀಗೆ ಶಾದಿ ಮಹಲ್‌ಗೆ ಹುಂಡಿ ಹಣ ನೀಡುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗೋ ಹತ್ಯೆ ನಿಷೇಧ ಕಾನೂನು ಜಾರಿ ಇದ್ದರೂ ನಿರಂತರ ಗೋ ಸಾಗಾಣಿಕೆ ನಡೆಯುತ್ತಿದೆ. ಹಿಂದುತ್ವದ ಪ್ರತಿಪಾದಕ ಪುನೀತ್ ಕೆರೆಹಳ್ಳಿ ಗೋ ಸಾಗಾಣಿಕೆ ತಡೆದು ಪೊಲೀಸರಿಗೆ ಒಪ್ಪಿಸಿದ ವಿಚಾರದಲ್ಲಿ (ಸಾತನೂರು ಗೋ ಸಾಗಾಣಿಕೆ ಪ್ರಕರಣ) ಕೊಲೆ ಆಗಿದೆ ಎಂಬ ಆರೋಪ ಇದ್ದು, ಆದರೆ ಇಲ್ಲಿ ಕೊಲೆ ಆಗಿಲ್ಲ. ಬದಲಿಗೆ ವ್ಯವಸ್ಥಿತವಾದ ಪಿತೂರಿ ಏನೋ ನಡೆದಿದೆ. ಹಾಗಾಗಿ ಮೊದಲು ತನಿಖೆಯಾಗಬೇಕು. ಒಮ್ಮೆಲೆ ಕೊಲೆ ಪ್ರಕರಣ ದಾಖಲಿಸುವುದು ಸರಿಯಲ್ಲ ಎಂದರು.

ಸಿದ್ದು, ಹೆಚ್‌ಡಿಕೆ ವಿರುದ್ಧ ಕಿಡಿ: ಈ ಪ್ರಕರಣ ಸಂಬಂಧ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿಯವರು ಮುಸಲ್ಮಾನರ ಪರವಾಗಿ ಏಕಪಕ್ಷೀಯವಾದ ಹೇಳಿಕೆ ನೀಡಿದ್ದಾರೆ. ಪ್ರಕರಣದ ಸಂಬಂಧ ಗೋ ಸಾಗಾಣಿಕೆ ಬಗ್ಗೆ ಏಕೆ ಇವರು ಮಾತನಾಡಿಲ್ಲ. ರೈತರ ಮಕ್ಕಳು ಎಂದು ಹೇಳುವ ಇವರು, ಗೋ ಸಾಗಾಣಿಕೆ ಮಾಡುತ್ತಿದ್ದದ್ದೂ ತಪ್ಪು ಎಂದು ಹೇಳಬೇಕಿತ್ತು. ಇವರಿಗೆ ಹಸುಗಳ ಶಾಪ ತಟ್ಟುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶ್ರೀರಾಮಸೇನೆಯ ಬೆಂಗಳೂರು ನಗರ ವಿಭಾಗ ಅಧ್ಯಕ್ಷ ಸುಂದರೇಶ್, ಮುಖಂಡರಾದ ಅರ್ಜುನ್, ಸಂಜಯ್ ಗೋಷ್ಠಿಯಲ್ಲಿದ್ದರು.

> “ಗೋ ಮಾಂಸ ರಫ್ತು ವಿರೋಧಿಸುತ್ತೇನೆ. ಬಿಜೆಪಿಯವರು, ಬ್ರಾಹ್ಮಣರು, ಜೈನರು ಸೇರಿದಂತೆ ಯಾರೇ ಇದರಲ್ಲಿ ಇದ್ದರೂ ಅವರನ್ನು ಗಲ್ಲಿಗೆ ಹಾಕಬೇಕು. ನನಗೊಂದು ಅಧಿಕಾರ ಸಿಕ್ಕರೆ ಇಂತಹವರಿಗೆ ತೋರಿಸುತ್ತೇನೆ. ಆರ್‌ಎಸ್‌ಎಸ್ ಸ್ವಯಂ ಸೇವಕರನ್ನು ಕೊಲ್ಲುವುದಾಗಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಬೆದರಿಕೆ ಹಾಕಿದೆ. ಈ ಸಂಬಂಧ ಕೇಂದ್ರ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು. –ಪ್ರಮೋದ್ ಮುತಾಲಿಕ್

ವಿಧಾನಸಭಾ ಚುನಾವಣೆ ಹಿನ್ನೆಲೆ: ಮೈಸೂರು ನಗರ, ಜಿಲ್ಲಾ ಪೊಲೀಸರಿಂದ ಪ್ರತ್ಯೇಕ ಪಥ ಸಂಚಲನ

ಮೈಸೂರು, ಏ.5(ಎಸ್‌ಬಿಡಿ)– ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸಶಸ್ತ್ರ ಮೀಸಲು ಪಡೆಯೊಂದಿಗೆ ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸರು ಬುಧವಾರ ಪ್ರತ್ಯೇಕ ಪಥಸಂಚಲನ ನಡೆಸಿದರು.

ಮೈಸೂರು ನಗರದ ಶಬೀರ್ ನಗರ, ನ್ಯಾಯಾಲಯ ವೃತ್ತ, ಕಲ್ಪತರು ವೃತ್ತ, ಸರಸ್ವತಿಪುರಂ, ಎಂಡಿಸಿಸಿ ಸರ್ಕಲ್, ಅಯ್ಯಪ್ಪ ಹೋಟೇಲ್ ಸರ್ಕಲ್, ಪಿ.ಕೆ ಕಾಲೋನಿ, ಶಿವಜ್ಯೋತಿನಗರ, ಜಂಡೇ ಸರ್ಕಲ್, ಶಿವಣ್ಣ ಕ್ಲಿನಿಕ್ ರಸ್ತೆ, ಜೆ.ಎಲ್.ಬಿ ರಸ್ತೆ, ಲಕ್ಷ್ಮೀ ವಿಲಾಸ್ ಸರ್ಕಲ್, ಅಕ್ಷಯ ಭಂಡಾರ ಸರ್ಕಲ್ ಸೇರಿದಂತೆ ವಿವಿಧೆಡೆ ಪಥಸಂಚಲನ ನಡೆಸಲಾಯಿತು. ಸಶಸ್ತ್ರ ಅರೆ ಸೇನಾ ಪಡೆಯೊಂದಿಗೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜು, ಜಾಹ್ನವಿ, ಎಸಿಪಿಗಳು, ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್‌ಗಳು ಸೇರಿ ಸುಮಾರು 270 ಮಂದಿ ಪಾಲ್ಗೊಂಡಿದ್ದರು.





ಮೈಸೂರು ನಗರ ಪೊಲೀಸರು ಸಶಸ್ತ್ರ ಮೀಸಲು ಪಡೆಯೊಂದಿಗೆ ಪಥ ಸಂಚಲನ ನಡೆಸಿದರು. ಮತ್ತೊಂದು ಚಿತ್ರದಲ್ಲಿ ಹುಣಸೂರಿನಲ್ಲಿ ಜಿಲ್ಲಾ ಪೊಲೀಸರು ಪಥ ಸಂಚಲನ ನಡೆಸಿದ್ದನ್ನು ಕಾಣಬಹುದು.

ಇನ್ನು ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಹುಣಸೂರು ಪಟ್ಟಣದ ಪ್ರಮುಖ ರಸ್ತೆಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಪಥ ಸಂಚಲನ ನಡೆಸಲಾಯಿತು. ಅಪರ ಪೊಲೀಸ್ ಅಧೀಕ್ಷಕರಾದ ಬಿ.ಎನ್.ನಂದಿನಿ ಸೇರಿದಂತೆ ಅನೇಕ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರು. ಈ ಪಥ ಸಂಚಲನದ ಮೂಲಕ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಿಟ್ಟಿನಲ್ಲಿ ಸೂಕ್ತ ಭದ್ರತೆ ಹಾಗೂ ರಕ್ಷಣೆ ನೀಡಲು ನಾವು ಸಜ್ಜಾಗಿದ್ದು ನಿರ್ಭೀತಿಯಿಂದ ಮತ ಚಲಾಯಿಸುವಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ನೀತಿ ಸಂಹಿತೆ ಉಲ್ಲಂಘನೆ ಹಾಗೂ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ ಎಂಬ ಎಚ್ಚರಿಕೆ ಸಂದೇಶವನ್ನೂ ರವಾನಿಸಿದರು.

ದೇವರಿಗೂ ತಟ್ಟಿದ ಚುನಾವಣಾ ನೀತಿ ಸಂಹಿತೆ ಬಿಸಿ

- ದೇವಾಲಯಗಳಲ್ಲಿ ಪೂಜೆ, ತೀರ್ಥ, ಪ್ರಸಾದ ಮಾತ್ರ, ಅನ್ನದಾನಕ್ಕೆ ಅವಕಾಶವಿಲ್ಲ
- ಭಕ್ತರಿಗೆ ನಿರಾಶೆ, ಆಯೋಜಕರಿಗೆ ಬೇಸರ, ಉತ್ಸವಕ್ಕೆ ಮಾತ್ರ ಸೀಮಿತ



ಮಡಿಕೇರಿ, ಏ.5– ಕೊಡಗು ಜಿಲ್ಲೆಯಾದ್ಯಂತ ಫೆಬ್ರವರಿ ತಿಂಗಳಿನಿಂದ ಹಬ್ಬಗಳು, ದೇವಾಲಯಗಳ ವಾರ್ಷಿಕೋತ್ಸವ, ದೈವ ನೇಮೋತ್ಸವಗಳು ನಡೆಯುತ್ತಿವೆ. ಇದೀಗ ಚುನಾವಣಾ ನೀತಿ ಸಂಹಿತೆ ಜಾರಿಯಾಗಿರುವ ಕಾರಣ ಅದರ ಬಿಸಿ ದೇವ ದೈವಗಳಿಗೂ ತಟ್ಟಿದೆ.

ಚುನಾವಣಾ ನೀತಿ ಸಂಹಿತೆಯಂತೆ ಧಾರ್ಮಿಕ ಉತ್ಸವಗಳ ಆಚರಣೆಗೆ ಅವಕಾಶವಿದ್ದರೂ 'ಅನ್ನದಾನ'ಕ್ಕೆ ಅವಕಾಶವಿಲ್ಲ. ಕೇವಲ ತೀರ್ಥ, ಪ್ರಸಾದ ವಿನಿಯೋಗಕ್ಕೆ ಮಾತ್ರವೇ ಅವಕಾಶ ಒದಗಿಸಲಾಗಿದೆ. ಇದು ಸಹಜವಾಗಿಯೇ ಭಕ್ತರು, ದೇವಾಲಯಗಳ ಆಡಳಿತ ಮಂಡಳಿ, ಉತ್ಸವ ಆಯೋಜಕರಿಗೆ ಬೇಸರ ತರಿಸಿದೆ. ಕೆಲವೆಡೆ ನೀತಿ ಸಂಹಿತೆ ಜಾರಿಗೂ ಮುನ್ನವೇ ಉತ್ಸವಗಳ ಕುರಿತು ಬಿತ್ತಿ ಪತ್ರಗಳನ್ನು ಹಂಚಲಾಗಿದ್ದು, ಅದರಲ್ಲೂ 'ಅನ್ನದಾನ ಇದೆ' ಎಂದು ಉಲ್ಲೇಖಿಸಲಾಗಿದೆ. ಅನ್ನದಾನ ಇದೆ ಎಂದು ನಂಬಿ ಬರುವ ಭಕ್ತರಿಗೆ ಉತ್ತರಿಸುವುದು ಹೇಗೆ ಎಂಬ ಪ್ರಶ್ನೆ ಆಯೋಜಕರನ್ನು ಕಾಡುತ್ತಿದೆ.

ಜಿಲ್ಲೆಯಲ್ಲಿ ಯಾವುದೇ ದೇವರ ಉತ್ಸವವನ್ನು ಆಚರಿಸಬಹುದಾಗಿದ್ದು, ಈ ಸಂಬಂಧದ ಮೆರವಣಿಗೆ, ಬಾವುಟಗಳನ್ನು ಹಾರಿಸುವುದಕ್ಕೆ ಕಡ್ಡಾಯವಾಗಿ ಪೂರ್ವಾನುಮತಿಯ ಅಗತ್ಯವಿದೆ. ಉತ್ಸವದಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳಿಗೆ ಪ್ರಸಾದ ವಿತರಣೆಗೆ ಅವಕಾಶವಿದೆಯಾದರು, ಅನ್ನದಾನಕ್ಕೆ ಅವಕಾಶವಿಲ್ಲವೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯಾಗಿರುವ ಡಾ. ಬಿ.ಸಿ. ಸತೀಶ ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯ ವಿವಿಧೆಡೆಗಳಲ್ಲಿ ದೇವರ ವಾರ್ಷಿಕ ಉತ್ಸವಗಳು ನಡೆಯುತ್ತಿದ್ದು, ಚುನಾವಣಾ ಅವಧಿಯಲ್ಲೂ ಪೂರ್ವ ನಿಗದಿಯಂತೆ ಹಲವೆಡೆಗಳಲ್ಲಿ ಉತ್ಸವಗಳು ನಡೆಯಲಿವೆ. ಉತ್ಸವವನ್ನು ಬಳಸಿಕೊಂಡು ಮತದಾರರನ್ನು ಸೆಳೆಯುವ ಸಾಧ್ಯತೆಗಳು ಇರುವ ಹಿನ್ನೆಲೆಯಲ್ಲಿ ಅನ್ನದಾನಕ್ಕೆ ಅವಕಾಶವನ್ನು ಒದಗಿಸಿಲ್ಲ.

ನಿಶ್ಚಿತಾರ್ಥ, ಮದುವೆ, ನಾಮಕರಣ ಮತ್ತಿತರ ಖಾಸಗಿ ಸಮಾರಂಭಗಳನ್ನು ನಡೆಸುವುದಕ್ಕೆ ಸಾರ್ವಜನಿಕರಿಗೆ ಯಾವುದೇ ನಿರ್ಬಂಧ ಇಲ್ಲವಾದರೂ, ಈ ಸಮಾರಂಭಗಳು ರಾಜಕೀಯ ಪ್ರೇರಿತವಾಗಿರಬಾರದು ಮತ್ತು ಯಾವುದೇ ಪಕ್ಷದ ಪ್ರಚಾರಕ್ಕೆ ವೇದಿಕೆಯಾಗಿರಬಾರದು ಎಂಬುದು ನೀತಿ ಸಂಹಿತೆಯಲ್ಲಿ ಉಲ್ಲೇಖಿಸಲಾಗಿದೆ.

ಇನ್ನು ಮೆರವಣಿಗೆ, ವಾರ್ಷಿಕೋತ್ಸವ, ಜಾತ್ರೆ, ಸಾಮೂಹಿಕ ವಿವಾಹ ಮತ್ತಿತರ ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಲು ಸಂಬಂಧಿಸಿದ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಅನುಮತಿ ಕಡ್ಡಾಯವಾಗಿದೆ.

ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದ ಕಾಂಗ್ರೆಸ್ ಬೆಂಗಲಿಸಿ

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಹಿಂದುಳಿದ ವರ್ಗಗಳ ಕಾಂಗ್ರೆಸ್ ಸಮಾವೇಶ



ಮಡಿಕೇರಿ, ಏ.5– ರಾಜ್ಯದಲ್ಲಿ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದೇ ಕಾಂಗ್ರೆಸ್. ಈ ಪಕ್ಷವನ್ನು ಬೆಂಬಲಿಸಿ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಸಿದ್ದಾಪುರದಲ್ಲಿ ಆಯೋಜಿಸಿದ್ದ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಹಿಂದುಳಿದ ವರ್ಗಗಳ ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ದೇವರಾಜ ಅರಸ್ ಅವರು, ದುಡಿಯುವ ವರ್ಗಗಳ ಕೈಗೆ ಭೂಮಿ ಹಕ್ಕು ನೀಡಿದರು. ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಎಸ್.ಬಂಗಾರಪ್ಪ ಅವರು, ಆಶ್ರಯ, ಆರಾಧನಾ ಸೇರಿದಂತೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದರು. ರಾಜ್ಯದಲ್ಲಿ ಪ್ರಥಮ ಬಾರಿಗೆ ರೈತರಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಿದವರು ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಬಂಗಾರಪ್ಪ ಅವರೆಂದು ಸ್ಮರಿಸಿದ ಅವರು, ರಾಜ್ಯದಲ್ಲಿ ರೈತರಿಗೆ ಉಚಿತ ವಿದ್ಯುತ್ ನೀಡದಿದ್ದಲ್ಲಿ 2ನೇ ಬೆಳೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ, ಇದನ್ನು ಈಗಲೂ ರಾಜ್ಯದ ರೈತರು ಸ್ಮರಿಸಿಕೊಳ್ಳುತ್ತಾರೆ. ಹಾಗೆಯೇ ರಾಜ್ಯದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದರು. ಇವೆಲ್ಲವೂ ಕಾಂಗ್ರೆಸ್ ಪಕ್ಷದ ಕೊಡುಗೆಯಾಗಿದೆ ಎಂದರು.

ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ನೀಡಿದರೇ ಅದನ್ನು ಅನುಷ್ಠಾನಕ್ಕೆ ತರುವುದು ಶತಃಸಿದ್ದ. ಆದರೆ ಬೇರೆ ಪಕ್ಷದವರು ಗ್ಯಾರಂಟಿ ನೀಡುತ್ತಿದ್ದಾರೆಂದರೇ ಆ ಮಾತು ನಂಬಿಕೆಗೆ ಅರ್ಹವಲ್ಲವೆಂದು ಟೀಕಿಸಿದ ಮಧು ಬಂಗಾರಪ್ಪ ಅವರು, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಸಬ್ಸಿಡಿ ದರದಲ್ಲಿ ಅಡುಗೆ ಸಿಲಿಂಡರ್ ನೀಡಿದರು. ಆದರೆ ಈಗಿನ ಸರಕಾರ ಸಿಲಿಂಡರ್ ಬೆಲೆಯನ್ನು ಗಗನಕ್ಕೆ ಏರಿಸಿರುವುದರಿಂದ ಗ್ಯಾಸ್ ಸ್ಟೌವ್ ಮೂಲೆ ಸೇರಿದ್ದು, ಮಹಿಳೆಯರು ಸೌದೆ ಒಲೆಯಲ್ಲಿ ಅಡುಗೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಸಮಾವೇಶದಲ್ಲಿ ಮಾತನಾಡಿದ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷರು ಹಾಗೂ ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್.ಪೊನ್ನಣ್ಣ, ನಾನು ಭೇಟಿ ನೀಡಿದ ಗ್ರಾಮಗಳಲ್ಲಿ ಜನರು ನಮಗೆ ರಸ್ತೆ, ಕುಡಿಯುವ ನೀರು, ವಾಸಕ್ಕೆ ಮನೆ ಇಲ್ಲವೆಂದು ಹೇಳುತ್ತಿದ್ದಾರೆ. ಕಳೆದ 20 ವರ್ಷಗಳಿಂದ ಕ್ಷೇತ್ರದಲ್ಲಿ ಜನಪ್ರತಿನಿಧಿಯಾಗಿದ್ದವರು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆಂದು ಆರೋಪಿಸಿದರು.


ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಕೊಡಗಿನಲ್ಲಿರುವ 32 ಹಿಂದುಳಿದ ವರ್ಗಗಳಿಗೆ ಸೇರಿದ ಸಮುದಾಯದವರು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ ದಯನೀಯ ಬದುಕನ್ನು ಸಾಗಿಸುತ್ತಿವೆ. ಹಿಂದುಳಿದ ವರ್ಗಗಳ ಮಂದಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲು ದಕ್ಷ ಮತ್ತು ಪ್ರಾಮಾಣಿಕ ಅಭ್ಯರ್ಥಿಯಾದ ಎ.ಎಸ್.ಪೊನ್ನಣ್ಣ ಅವರನ್ನು ಬೆಂಬಲಿಸುವುದು ಅತ್ಯಗತ್ಯವಾಗಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯರಾದ ಸಿ.ಎಸ್.ಅರುಣ್ ಮಾಚಯ್ಯ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಮಾಜಿ ಸಚಿವೆ ಸುಮಾವಸಂತ್, ಜಿಲ್ಲಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಅಬ್ದುಲ್ ರೆಹ ಮಾನ್ ಮತ್ತಿತರರು ಮಾತನಾಡಿದರು. ಸಮಾವೇಶದಲ್ಲಿ ಆಮ್ ಆದ್ಮಿ ಪಾರ್ಟಿಯ ಸಂಭವನೀಯ ಅಭ್ಯರ್ಥಿ ಎಂದು ಹೇಳಲಾಗುತ್ತಿದ್ದ ಟಿ.ಕೆ.ಸಾಯಿಕುಮಾರ್, ಜೆಡಿಎಸ್ ಮುಖಂಡ ಹೆಚ್.ಪಿ.ಗಣೇಶ್ ಸೇರಿದಂತೆ ಮತ್ತಿತರರು ಮಧು ಬಂಗಾರಪ್ಪ ಮತ್ತು ಎ.ಎಸ್.ಪೊನ್ನಣ್ಣ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು.

ಕಾಂಗ್ರೆಸ್ ಹಿಂದುಳಿದ ಘಟಕದ ಜಿಲ್ಲಾಧ್ಯಕ್ಷ ಬಾನಂಡ ಪ್ರಥ್ಯು, ಕಾಂಗ್ರೆಸ್‌ನ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ, ಹಿಂದುಳಿದ ವರ್ಗಗಳ ಘಟಕದ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ, ಕಾರ್ಯದರ್ಶಿ ಎಂ.ವಿಜೋಯ್, ವಿರಾಜಪೇಟೆ ಬ್ಲಾಕ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಕೆ.ಎಂ.ಇಸ್ಮಾಯಿಲ್, ಪೊನ್ನಂಪೇಟೆ ಬ್ಲಾಕ್ ಅಧ್ಯಕ್ಷ ಮಿದೇರಿರ ನವೀನ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಮಿಥುನ್ ಹಾನಗಲ್, ಗೋಣಿಕೊಪ್ಪ ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ಪ್ರಮುಖರಾದ ಕೊಲ್ಯದ ಗಿರೀಶ್, ಸರ ಚಂಗಪ್ಪ, ಶಬ್ಬೀರ್, ಮಹದೇವ್, ಎಸ್.ಬಿ.ಪ್ರತೀಶ್, ಜಾನ್ಸನ್, ಮಜೀದ್ ಮತ್ತಿತರರು ಉಪಸ್ಥಿತರಿದ್ದರು.

ತೋಟದಲ್ಲಿ ಗುಂಡು ಹೊಡೆದುಕೊಂಡು ವ್ಯಕ್ತಿ ಆತ್ಮಹತ್ಯೆ

ಪುತ್ರ ಕುಟುಂಬದೊಂದಿಗೆ ದೇವಾಲಯಕ್ಕೆ ತೆರಳಿದ್ದ ವೇಳೆ ದುರಂತ



ಮಡಿಕೇರಿ, ಏ.5– ವ್ಯಕ್ತಿಯೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಡಿಕೇರಿ ತಾಲೂಕಿನ ಕಾಟಗೇರಿ ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಕೆ.ಎ. ಉತ್ತಪ್ಪ(72) ಆತ್ಮಹತ್ಯೆಗೆ ಶರಣಾದ ದುರ್ದೈವಿ.

ಕೆ.ಎ.ಉತ್ತಪ್ಪ ಅವರ ಪುತ್ರ ಜಯಂತ್ ಸುಬ್ಬಯ್ಯ ಮಂಗಳವಾರ ತಮ್ಮ ವಯೋವೃದ್ದ ತಂದೆಯನ್ನು ಮನೆಯಲ್ಲಿ ಬಿಟ್ಟು ಸಂಸಾರದೊಂದಿಗೆ ನಾಪೋಕ್ಲುವಿನ ಇಗ್ಗುತ್ತಪ್ಪ ದೇವಾಲಯಕ್ಕೆ ತೆರಳಿದ್ದರು. ಮನೆಗೆ ವಾಪಸ್ ಬಂದ ಸಂದರ್ಭ ಉತ್ತಪ್ಪ ಅವರು ಮನೆಯಲ್ಲಿರಲಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಕಡೆ ಹುಡುಕಾಡಿದರೂ ಅವರು ಪತ್ತೆಯಾಗಿರಲಿಲ್ಲ. ತೋಟದಲ್ಲಿ ಹುಡುಕಾಡಿದ ಸಂದರ್ಭ ತಮ್ಮದೇ ಕೋವಿಯಿಂದ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿದೆ. ಕೆ.ಎ ಉತ್ತಪ್ಪ ಅವರು ಹಲವು ವರ್ಷಗಳಿಂದ ಕಿಡ್ನಿ ಸಂಬಂಧಿತ ಅನಾರೋಗ್ಯ ಪೀಡಿತರಾಗಿದ್ದು, ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಘಟನೆ ಕುರಿತು ಜಯಂತ್ ಸುಬ್ಬಯ್ಯ ಅವರು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಮಹಜರು ನಡೆಸಿ, ಮೃತದೇಹವನ್ನು ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಅಕ್ರಮವಾಗಿ ಗೋ ಮಾಂಸ ಸಾಗಿಸುತ್ತಿದ್ದ ಇಬ್ಬರ ಬಂಧನ

ಕಾರು, ಮಾಂಸ ವಶ


ವಿರಾಜಪೇಟೆ, ಏ.5– ಕೇರಳದಿಂದ ಕೊಡಗಿನ ತಿತಿಮತಿಗೆ ಕಾರಿನಲ್ಲಿ ಗೋ ಮಾಂಸವನ್ನು ಸಾಗಿಸುತ್ತಿದ್ದ ಇಬ್ಬರನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಬಂಧಿಸಿ ಕಾರು, ಮಾಂಸವನ್ನು ವಶಪಡಿಸಿಕೊಂಡಿದ್ದಾರೆ.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೊಡಗು–ಕೇರಳ ಹೆದ್ದಾರಿ ಪೆರುಂಬಾಡಿ ಚೆಕ್‌ಪೋಸ್ಟ್ ಬಳಿ ನಗರ ಠಾಣೆ ಪೊಲೀಸರು ವಾಹನಗಳನ್ನು ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಕಾರನ್ನು ತಪಾಸಣೆ ನಡೆಸಿದಾಗ 12 ಕೆ.ಜಿ. ಗೋ ಮಾಂಸ ಪತ್ತೆಯಾಗಿದ್ದು ಈ ಸಂಭಂದ ಕಾರಿನಲ್ಲಿದ್ದ ಹಂಸ ಮತ್ತು ರಫೀಕ್ ನನ್ನು ಬಂಧಿಸಿ ತನಿಖೆ ನಡೆಸಿದಾಗ ಕೇರಳದಿಂದ ಗೋ ಮಾಂಸ ತಂದಿದ್ದು, ಇದನ್ನು ತಿತಿಮತಿ ಗ್ರಾಮದಲ್ಲಿರುವ ಮನೆಗೆ ಕೊಂಡೊಯ್ಯುತ್ತಿರುವುದಾಗಿ ಒಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ನಗರ ಠಾಣಾಧಿಕಾರಿ ಮದನ್ ಕುಮಾರ್ ಘಟನೆಗೆ ಸಂಬಂಧಿಸಿದ ಕಾರನ್ನು ವಶಪಡಿಸಿಕೊಂಡು, ಆರೋಪಿಗಳನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದಾರೆ. ಡಿವೈಎಸ್ಪಿ ಮೋಹನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ನಾಪೋಕ್ಲು ಸುತ್ತ-ಮುತ್ತ ಗುಡುಗಿನೊಂದಿಗೆ ಮಳೆ

ಕೋಟೇರಿಯಲ್ಲಿ ಆಲಿಕಲ್ಲು ಮಳೆ, ಮರ ಬಿದ್ದು ಸಂಚಾರ ಅಸ್ತವ್ಯಸ್ತ



ನಾಪೋಕ್ಲು, ಏ.5– ನಾಪೋಕ್ಲು ವ್ಯಾಪ್ತಿಯಲ್ಲಿ ಬುಧವಾರ ಮಧ್ಯಾಹ್ನ ಗುಡುಗು ಸಹಿತ ಮಳೆಯಾಗಿದ್ದು, ಗ್ರಾಮವನ್ನು ತಂಪನ್ನಾಗಿಸಿದೆ. ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲೂ ಮಳೆಯಾಗಿದ್ದು ಧರೆಗೆ ತಂಪೆರೆದಿದೆ.

ಬಲ್ಲಮಾವಟಿ,ನೆಲಜಿ, ಎಮ್ಮೆಮಾಡು, ಕಕ್ಕಬ್ಬೆ ವ್ಯಾಪ್ತಿಯಲ್ಲಿ ಮಳೆಯಾಗಿದ್ದು ಕೋಟೇರಿಯಲ್ಲಿ ಆಲಿಕಲ್ಲು ಸಹಿತ 96 ಸೆಂಟ್ ಮಳೆಯಾಗಿದೆ. ಗಾಳಿ ಮಳೆಗೆ ನಾಪೋಕ್ಲು – ಕಕ್ಕಬೆ ಮುಖ್ಯ ಸಂಪರ್ಕ ರಸ್ತೆಗೆ ಕೋಟೇರಿಯಲ್ಲಿ ಅಡ್ಡಲಾಗಿ ಮರ ಬಿದ್ದು ಸ್ವಲ್ಪ ಸಮಯ ರಸ್ತೆ ಸಂಚಾರಕ್ಕೆ ಅಡಚಣೆಯಾಗಿತ್ತು. ಮಳೆಯ ಕಾರಣದಿಂದಾಗಿ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಪ್ಪಚೆಟ್ಟೋಳಂಡ ಕಪ್ ಹಾಕಿ ನಮ್ಮೆಯ ಮರುವಂಡ ಮತ್ತು ಕುಪ್ಪಣ್ಣ ತಂಡಗಳ ನಡುವಿನ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯ ಮುಂದೂಡಲ್ಪಟ್ಟಿತು. ಈ ಎರಡು ತಂಡಗಳ ನಡುವೆ ಗುರುವಾರ ಸೆಡೆಸಾಟ ನಡೆಯಲಿದೆ.

ಬಿಟ್ಟಂಗಾಲ ಶ್ರೀ ಪೊನ್ನಿಮನೆ ಅಯ್ಯಪ್ಪ, ಬೋಟೆ ಚಾಮುಂಡಿ ದೇವರ ವಾರ್ಷಿಕ ಉತ್ಸವ

ಪೊನ್ನಂಪೇಟೆ, ಏ.5– ಬಿಟ್ಟಂಗಾಲ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಪೊನ್ನಿಮನೆ ಅಯ್ಯಪ್ಪ ಮತ್ತು ಬೋಟೆ ಚಾಮುಂಡಿ ದೇವರ ವಾರ್ಷಿಕ ಉತ್ಸವವು ಏ.8 ಮತ್ತು 9ರಂದು ಜರುಗಲಿದೆ.

ಉತ್ಸವದ ಅಂಗವಾಗಿ ಏ.8ರಂದು ಶನಿವಾರ ರಾತ್ರಿ 8 ಗಂಟೆಗೆ ಭಂಡಾರ ಹೊರಡುವುದು, 8:30 ಗಂಟೆಗೆ ದೇವಸ್ಥಾನದಲ್ಲಿ ಕೊಟ್ಟಿ ಪಾಟ್ ಮತ್ತು 10 ಗಂಟೆಗೆ ವಿವಿಧ ಧಾರ್ಮಿಕ ಕೋಲಗಳು ನಡೆಯಲಿದೆ. ಏ. 9ರಂದು ಭಾನುವಾರ ಬೆಳಿಗ್ಗೆ 9 ಗಂಟೆಗೆ ಬೋಟೆ ಚಾಮುಂಡಿ ಹಾಗೂ ವಿಷ್ಣುಮೂರ್ತಿ ದೇವರ ತೆರೆ ಸೇರಿದಂತೆ ವಿವಿಧ ತೆರೆಗಳು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯಲಿದೆ ಎಂದು ಬಿಟ್ಟಂಗಾಲದ ಪೊನ್ನಿರ ಕುಟುಂಬಸ್ಥರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬೂಜಿ ಸಂದೇಶ ಅಳವಡಿಸಿಕೊಳ್ಳಲು ಡಿಸಿ ಸಲಹೆ



ಚಾಮರಾಜನಗರ, ಏ.5– ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಅವರ ಸಂದೇಶ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ನಿಷ್ಠೆಯಿಂದ ಮುನ್ನಡೆಯಬೇಕು. ಅವರು ರಾಷ್ಟ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಜಿಲ್ಲಾಧಿಕಾರಿ ಡಿ. ಎಸ್. ರಮೇಶ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ವತಿಯಿಂದ ಆಯೋಜಿಸಲಾಗಿದ್ದ ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಅವರ 116ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಹಾಗೂ ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಮಹನೀಯರೆಲ್ಲರೂ ಒಂದೇ ನೆಲೆಗಟ್ಟಿನಲ್ಲಿ ಚಿಂತಿಸಿದಂತವರು. ಸಮಾಜದಲ್ಲಿ ಎಲ್ಲರೂ ಸಮಾನತೆಯಿಂದ ಜೀವಿಸಬೇಕು ಎಂದು ಅಂದಿನ ದಿನಗಳಲ್ಲಿ ಹೋರಾಡಿದವರು. ಅವರ ಪರಿಕಲ್ಪನೆ, ತತ್ವಗಳನ್ನು ಶ್ರದ್ಧೆಯಿಂದ ಪಾಲಿಸಬೇಕು. ಸಮುದಾಯ ಉಳಿವಿಗೆ ಬಾಬು ಜಗಜೀವನ್ ರಾಮ್ ಅವರ ಹೋರಾಟದ ಹಾದಿಯನ್ನು ಅರ್ಥ ಮಾಡಿಕೊಂಡು ಜೀವನ ಮುನ್ನಡೆಸಬೇಕು ಎಂದು ಅವರು ತಿಳಿಸಿದರು.

ಎಲ್ಲಾ ಸಮುದಾಯದವರಿಗೆ ಸಮಾನ ಸಾಮಾಜಿಕ ಗೌರವ ದೊರಕುವಂತಾಗಬೇಕು. ಆಗ ಬಾಬು ಜಗಜೀವನ್ ರಾಮ್ ಅಂತಹ ರಾಷ್ಟ್ರ ನಾಯಕರ ಜಯಂತಿಗಳ ಆಚರಣೆಗೆ ಅರ್ಥ ಬರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಎಸ್. ಪೂವಿತಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮಲ್ಲಿಕಾರ್ಜುನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ. ವಿಶ್ವೇಶ್ವರಯ್ಯ, ನಗರಸಭೆಯ ಆಯುಕ್ತರಾದ ಎಸ್.ವಿ. ರಾಮ್‌ದಾಸ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಪಂ ಸಿಇಓ ಎಸ್. ಪೂವಿತಾ, ಇತರೆ ಗಣ್ಯರು ಮಾಲಾರ್ಪಣೆ ಮಾಡಿದರು.

ಶ್ರೀ ಅಡವಿತಾಯಿ, ಗುರು ಸಿದ್ದೇಶ್ವರ ಸ್ವಾಮಿ ವೈಭವದ ರಥೋತ್ಸವ



ಕೊಳ್ಳೇಗಾಲ, ಏ.5– ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಬುಧವಾರ ಶ್ರೀ ಅಡವಿ ತಾಯಿ ಹಾಗೂ ಶ್ರೀ ಗುರು ಸಿದ್ದೇಶ್ವರಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ಹೊಂಡರಬಾಳು ಗ್ರಾಮದ ಶಂಕಿನ ಮಠದ ಮಠಾಧೀಶ ಶ್ರೀ ವಿದ್ವಾನ್ ನೀಲಕಂಠ ಶಿವಚಾರ್ಯ ಮಹಾಸ್ವಾಮಿಗಳು ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ನಡೆಯಿತು. ಹೊರವಲಯದ ಸಿದ್ಧೇಶ್ವರ ಬೆಟ್ಟದಲ್ಲಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ಬಳಿಕ ಮೆರವಣಿಗೆ ಮೂಲಕ ಹೊತ್ತು ತಂದು ತೇರಿನ ಮಾಳದಲ್ಲಿ ಸಿಂಗಾರಗೊಂಡಿದ್ದ ರಥದ ಸುತ್ತ ಪ್ರದಕ್ಷಿಣೆ ಹಾಕಿ ಬಳಿಕ ರಥದಲ್ಲಿ ಇಟ್ಟು ಎಳೆಯಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ಹಣ್ಣು-ಜವನ ಎಸೆಯುವ ಮೂಲಕ ಭಕ್ತಿಭಾವ ಮೆರೆದರು.

ಇದಕ್ಕೂ ಮುನ್ನ ಮೆರವಣಿಗೆ ಸಮಯದಲ್ಲಿ ಸತ್ತಿಗೆ, ಉತ್ಸವಮೂರ್ತಿ ಮೆರವಣಿಗೆಯ ಮೂಲಕ ಹೊತ್ತು ತಂದರು. ಯುವಕರು ಕುಣಿದು ಕುಪ್ಪಳಿಸುವ ಮೂಲಕ ಸಂಭ್ರಮಿಸಿದರು. ಇನ್ನೂ ಕೆಲ ಭಕ್ತರು ಹಣ್ಣು ಜವನವನ್ನು ರಥೋತ್ಸವಕ್ಕೆ ಎಸೆದು ಸಂಭ್ರಮಿಸಿದರು. ನೆರೆದಿದ್ದ ಭಕ್ತರಿಗೆ ಮಜ್ಜಿಗೆ, ಪಾನಕ ಹಾಗೂ ಪ್ರಸಾದವನ್ನು ವಿನಿಯೋಗ ಮಾಡಿದರು.

ಮೆರವಣಿಗೆಯಲ್ಲಿ ನಾಡಗೌಡ ಮಹೇಶಪ್ಪ, ಯಜಮಾನರುಗಳಾದ ಶಿವಣ್ಣ, ಸಿದ್ದಪ್ಪ ಸ್ವಾಮಿ, ನಾರಾಯಣ, ಚಿಕ್ಕವೀರಶೆಟ್ಟಿ, ಗಿರಿಗೌಡ, ಆನಂದೇಗೌಡ, ನಾಗೇಶ್, ಬಸವರಾಜೇ ಅರಸ್, ಮೋಹನ್ , ಮಾದೇಶ್, ಹರ್ಷ, ರಾಮಣ್ಣ, ಸತ್ತಿಗೆ ಮಧು, ಮಧುವನಹಳ್ಳಿ ಗ್ರಾ.ಪಂ ಅಧ್ಯಕ್ಷೆ ರೇಣುಕಾ, ಉಪಾಧ್ಯಕ್ಷ ಸಿದ್ದಲಿಂಗಸ್ವಾಮಿ, ಮಹದೇವ ಸ್ವಾಮಿ, ಹರೀಶ್, ಮಲ್ಲಿಕಾರ್ಜುನ, ಭಾಸ್ಕರ್, ಚಂದ್ರಕಲಾ, ಚಿತ್ರಕಲಾ, ಲಕ್ಷ್ಮಮ್ಮ, ಅಶ್ವಿನ್ ಸೇರಿದಂತೆ ಸಾವಿರಾರು ಭಕ್ತರು ಇದ್ದರು.

ಕೃಷಿ ಉಪಕರಣಗಳ ಬಿಲ್ ಮಂಜೂರು ಮಾಡಲು ಲಂಚ ಸ್ವೀಕಾರ

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಸೇರಿ ಮೂವರು ಲೋಕಾಯುಕ್ತ ಬಲೆಗೆ








ಗುಂಡ್ಲುಪೇಟೆ, ಏ.5– ಪೂರೈಕೆ ಮಾಡಿದ್ದ ಕೃಷಿ ಉಪಕರಣಗಳ ಬಿಲ್ ಮಂಜೂರು ಮಾಡಲು 2.5 ಲಕ್ಷ ರೂ. ಪಡೆಯುತ್ತಿದ್ದ ಇಲ್ಲಿನ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರವೀಣ್ ಕುಮಾರ್, ತಾಂತ್ರಿಕ ಕೃಷಿ ಅಧಿಕಾರಿ ಸತೀಶ್ ಮತ್ತು ಹೊರಗುತ್ತಿಗೆಯ ಗ್ರೂಪ್ ಡಿ ನೌಕರ ಅರುಣ್ ಅವರು ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಗುಂಡ್ಲುಪೇಟೆಯ ಎಸ್.ಆರ್. ಟ್ರೇಡರ್ಸ್ ಮಾಲೀಕ ಕುಮಾರಸ್ವಾಮಿ ಅವರು ಲೋಕಾಯುಕ್ತ ಪೊಲೀಸರಿಗೆ ಮಾ. 31ರಂದು ದೂರು ನೀಡಿದ್ದರು. ಬಿಲ್ ಮಂಜೂರು ಮಾಡುವುದಕ್ಕಾಗಿ ಕೃಷಿ ಅಧಿಕಾರಿ ಸತೀಶ್ 1.5 ಲಕ್ಷ ರೂ., ಸಹಾಯಕ ನಿರ್ದೇಶಕ ಪ್ರವೀಣ್ ಕುಮಾರ್ ಅವರು 1 ಲಕ್ಷ ರೂ. ಲಂಚವನ್ನು ಕುಮಾರಸ್ವಾಮಿ ಬಳಿ ಕೇಳಿದ್ದರು. ಬುಧವಾರ ಸಂಜೆ 4.10ರ ಸುಮಾರಿಗೆ ಇಬ್ಬರು ಕೇಳಿದ್ದ ಮೊತ್ತವನ್ನು ಡಿ ಗ್ರೂಪ್ ನೌಕರ ಅರುಣ್ ಕುಮಾರಸ್ವಾಮಿ ಅವರಿಂದ ಪಡೆಯುತ್ತಿದ್ದ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿ, ಮೂವರನ್ನೂ ಬಂಧಿಸಿ, ಹಣವನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಎಸ್‌ಪಿ ಸುರೇಶ್‌ಬಾಬು ಮಾರ್ಗದರ್ಶನದಲ್ಲಿ ಲೋಕಾಯುಕ್ತ ಡಿವೈಎಸ್‌ಪಿ ಮ್ಯಾಥ್ಯೂ ಥಾಮಸ್, ಇನ್‌ಸ್ಪೆಕ್ಟರ್‌ಗಳಾದ ಶಶಿಕುಮಾರ್, ರವಿಕುಮಾರ್, ಸಿಬ್ಬಂದಿ ಮಹಾಲಿಂಗಸ್ವಾಮಿ, ಮಹದೇವಸ್ವಾಮಿ, ಗುರುಪ್ರಸಾದ್, ಶ್ರೀನಿವಾಸ್, ಗೌತಮ್, ನಾಗೇಂದ್ರ, ಕೃಷ್ಣಗೌಡ, ಇಸಾಕ್, ಪುರು ಷೋತ್ತಮ್, ಶಕುಂತಲ ಕಾರ್ಯಾಚರಣೆಯಲ್ಲಿದ್ದರು.

ಭಾಗ್ಯಮ್ಮ ನಿಧನ



ಚಾಮರಾಜನಗರ, ಏ.5– ತಾಲೂಕಿನ ಯಲಕ್ಕೂರು ಗ್ರಾಮದ ನಿವಾಸಿ ಭಾಗ್ಯಮ್ಮ (60) ಬುಧವಾರ ರಾತ್ರಿ ನಿಧನರಾದರು. ಮೃತರು ರೇಷ್ಮೆ ಇಲಾಖೆ ನಿವೃತ್ತ ನೌಕರರಾದ ಬಸವಣ್ಣ ಅವರ ಪತ್ನಿ. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಮಾ.6) ಮಧ್ಯಾಹ್ನ ಸ್ವಗ್ರಾಮದ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗುಂಡ್ಲುಪೇಟೆಯಲ್ಲಿ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಬಿರುಸು



ಗುಂಡ್ಲುಪೇಟೆ ತಾಲೂಕಿನ ಬಲಚವಾಡಿ ಗ್ರಾಮದಲ್ಲಿ ಬಿಜೆಪಿ ಶಾಸಕ ಸಿ.ಎಸ್. ನಿರಂಜನಕುಮಾರ್ ಮತಯಾಚನೆ ಮಾಡಿದರು.



ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗಣೇಶ್‌ಪ್ರಸಾದ್ ಮತಯಾಚನೆ ಮಾಡಿದರು.

ಗುಂಡ್ಲುಪೇಟೆ, ಏ.5– ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಕ್ಷೇತ್ರದಲ್ಲಿ ರಾಜಕೀಯ ರಂಗೇರುತ್ತಿದೆ. ಪಾರ್ವತಿ ಬೆಟ್ಟದಲ್ಲಿ ಬಿಜೆಪಿ ಹಾಗೂ ಓಂಕಾರ ಸಿದ್ದೇಶ್ವರ ದೇವಸ್ಥಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಪೂಜೆ ಸಲ್ಲಿಸಿ ಅಧಿಕೃತವಾಗಿ ಪ್ರಚಾರ ಆರಂಭಿಸಿದ್ದು ಪ್ರತಿ ದಿನವೂ ಕನಿಷ್ಠ ಎರಡು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮತಯಾಚನೆ ಮಾಡುತ್ತಿವೆ. ಜೆಡಿಎಸ್ ಕೂಡ ಪಾರ್ವತಿ ಬೆಟ್ಟದಲ್ಲಿ ಪೂಜೆ ಸಲ್ಲಿಸುವ ಮೂಲಕ ಕಣಕ್ಕಿಳಿಯಲಿದ್ದು ತಾಲೂಕಿನಲ್ಲಿ ರಾಜಕೀಯ ಬಿಸಿಯೇರುತ್ತಿದೆ.

ಶಾಸಕ ಸಿ.ಎಸ್.ನಿರಂಜನಕುಮಾರ್ ತಾಲೂಕಿನ ಬಲಚವಾಡಿ ಹಾಗೂ ಕೆಲಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಹತ್ತು ಗ್ರಾಮಗಳಲ್ಲಿ ಮನೆ ಮನೆಗಳಿಗೆ ತೆರಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ಜನರ ಜತೆ ಸಂವಾದ ನಡೆಸಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರು ಹಾಗೂ ಮಹಿಳೆಯರ ಅಭಿವೃದ್ದಿಗೆ ಕೈಗೊಂಡ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿ ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ಡಿ.ಪಿ.ಜಗದೀಶ್, ಮುಖಂಡರಾದ ಮಾಡ್ರಹಳ್ಳಿ ನಾಗೇಂದ್ರ, ಲಕ್ಕೂರು ಶಿವಸ್ವಾಮಿ, ನಾಗಭೂಷಣ್, ಮಹೇಶ್, ಮಾಧ್ಯಮ ಸಂಚಾಲಕ ಎಸ್.ಸಿ.ಮಂಜುನಾಥ್, ತಾಪಂ ಮಾಜಿ ಸದಸ್ಯ ಸಿ.ಮಹದೇವಪ್ರಸಾದ್, ಲಿಂಗರಾಜು ಸೇರಿದಂತೆ ಹಲವರು ಇದ್ದರು.

ಕಾಂಗ್ರೆಸ್ ಮತಯಾಚನೆ: ತಾಲೂಕಿನ ಚಿಕ್ಕಾಟಿ ಹಾಗೂ ಕೋಟೆಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಎಂ.ಗಣೇಶ್ ಪ್ರಸಾದ್ ಮತಯಾಚನೆ ಮಾಡಿದರು.

ತೆರಕಣಾಂಬಿ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ನಂತರ ಮತಯಾಚನೆ ಆರಂಭಿಸಿದರು. ಚಿಕ್ಕಾಟಿಗೆ ಆಗಮಿಸಿದ ಗಣೇಶ್ ಪ್ರಸಾದ್ ಅವರನ್ನು ಮಹಿಳೆಯರು ಆರತಿ ಎತ್ತಿ ಸ್ವಾಗತಿಸಿದರು. ಮನೆ ಮನೆಗಳಿಗೆ ತೆರಳಿ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಹಾಗೂ ಬೆಲೆ ಏರಿಕೆ ಬಗ್ಗೆ ಮಾತನಾಡಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಗ್ಯಾರೆಂಟಿ ಕಾರ್ಡ್‌ನಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಎಚ್.ಎನ್.ಬಸವರಾಜು, ಮಾಜಿ ಉಪಾಧ್ಯಕ್ಷ ಬಂಗಾರನಾಯ್ಕ, ಎಪಿಎಂಸಿ ಸದಸ್ಯ ಆರ್.ಎಸ್.ನಾಗರಾಜು, ಮುಖಂಡ ಮಹೇಶ್ ಹಾಗೂ ಇತರರು ಇದ್ದರು.

ಮಾದಾಪುರದಲ್ಲಿ ಪುಟ್ಟರಂಗಶೆಟ್ಟಿ ಬಿರುಸಿನ ಮತಯಾಚನೆ



ಚಾಮರಾಜನಗರ, ಏ.5– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಕ್ಷೇತ್ರದ ಮಾದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ತಮ್ಮ ಬೆಂಬಲಿಗರೊಂದಿಗೆ ಬಿರುಸಿನ ಮತಯಾಚನೆ ನಡೆಸಿದರು.

ಹಂಡ್ರಕಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಂಡ್ರಕಳ್ಳಿ ಮೋಳೆಯಿಂದ ಶಾಸಕರು ಚುನಾವಣಾ ಪ್ರಚಾರ ಆರಂಭಿಸಿದ್ದು, ಗ್ರಾಮದ ಮನೆ ಮನೆಗೆ ತೆರಳಿ ಕರಪತ್ರಗಳನ್ನು ಹಂಚುವ ಮೂಲಕ ಮತ್ತೊಮ್ಮೆ ನನ್ನನ್ನು ಆಯ್ಕೆ ಮಾಡುವಂತೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಅವರು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ದಿಗೆ ಬದ್ಧವಾಗಿದ್ದು, ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್, ಸಮುದಾಯ ಭವನಗಳ ನಿರ್ಮಾಣ ಗ್ರಾಮಗಳ ಸಂಪರ್ಕ ರಸ್ತೆ ಅಭಿವೃದ್ಧಿ, ಎಲ್ಲಾ ಸಮುದಾಯಗಳ ಬೀದಿಗಳನ್ನು ಸಿಮೆಂಟ್ ರಸ್ತೆಯನ್ನಾಗಿ ಪರಿವರ್ತನೆ ಮಾಡಿ, ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಿ ಶ್ರಮಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಚಿಕ್ಕಮಹದೇವ್, ಎಪಿಎಂಸಿ ನಿರ್ದೇಶಕ ಅಲೂರು ಪ್ರದೀಪ್, ಕಸಬಾ ಹೋಬಳಿ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಹೇಶ್ ಕುದರ್, ಗ್ರಾಪಂ ಮಾಜಿ ಅಧ್ಯಕ್ಷೆ ಭುವನೇಶ್ವರಿ ಸದಸ್ಯರಾದ ಸಿದ್ದರಾಜು, ಮುಖಂಡರಾದ ರಾಜು, ಚೌಡಶೆಟ್ಟಿ, ರವಿಕುಮಾರ್, ನಿಂಗಶೆಟ್ಟಿ, ಕಾಡಹಳ್ಳಿ ಗ್ರಾಪಂ ಸದಸ್ಯ ರೂಪೇಶ್, ಮಂಗಲ ಶಿವಣ್ಣ, ತಾ.ಪಂ. ಮಾಜಿ ಸದಸ್ಯ ರಾಜು, ರವಿಗೌಡ, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಕೋಡಿಮೋಳೆ ಪ್ರಕಾಶ್, ಗಿರೀಶ್ ಇತರರು ಹಾಜರಿದ್ದರು.

ಮೈಸೂರು ಮಿತ್ರ

ಗುರುವಾರ 6 ಏಪ್ರಿಲ್ 2023

ಪುನೀತ್ ಕೆರೆಹಳ್ಳಿ ಬಂಧನ:ಕಾರ್ಯಾಚರಣೆ ನಡೆಸಿದ ಪೊಲೀಸರಿಗೆ 1 ಲಕ್ಷ ಬಹುಮಾನ



ರಾಮನಗರ, ಏ.5– ಗೋವು ಸಾಗಾಣಿಕೆ ವೇಳೆ ವ್ಯಕ್ತಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಪ್ರಕರಣ ಸಂಬಂಧ ಸಾತನೂರು ಪೊಲೀಸರು ಕಾರ್ಯಾಚರಣೆ ನಡೆಸಿ ಪ್ರಕರಣದ ಐವರು ಆರೋಪಿಗಳನ್ನ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದ ಐದು ದಿನಗಳಿಂದ ತಲೆಮರೆಸಿಕೊಂಡಿದ್ದ ಹಿಂದೂಪರ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ಸೇರಿ ಐವರು ಆರೋಪಿಗಳನ್ನ ರಾಜಸ್ಥಾನದಲ್ಲಿ ಬಂಧಿಸಿ, ರಾಮನಗರಕ್ಕೆ ಕರೆತರಲು ಸಿದ್ಧತೆ ನಡೆಸಿದ್ದಾರೆ. ಕನಕಪುರ ತಾಲೂಕಿನ ಸಾತನೂರು ಬಳಿ ಮಾ.31ರ ರಾತ್ರಿ ಮಂಡ್ಯದಿಂದ ಗೋವುಗಳನ್ನು ಸಾಗಿಸುತ್ತಿದ್ದ ಕ್ಯಾಂಟರ್ ವಾಹನವನ್ನು ಪುನೀತ್ ಕೆರೆಹಳ್ಳಿ ಹಾಗೂ ಸಂಗಡಿಗರು ತಡೆದು, ಜಾಲತಾಣಗಳಲ್ಲಿ ವೀಡಿಯೋ ಹಂಚಿಕೊಂಡಿದ್ದರು. ಈ ವೇಳೆ ಕ್ಯಾಂಟರ್‌ನಲ್ಲಿನ ಚಾಲಕ ಹಾಗೂ ಮತ್ತೊಬ್ಬ ಪರಾರಿಯಾಗಿದ್ದರೆ, ವಾಹನದಲ್ಲಿದ್ದ ಇದ್ರೀಶ್ ಪಾಷ ಘಟನೆ ನಡೆದ 200 ಮೀಟರ್ ದೂರದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದರು. ಈ ಪ್ರಕರಣ ಸಂಬಂಧ ಹಿಂದೂ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ನೈತಿಕ ಪೊಲೀಸ್ ಗಿರಿ ಮಾಡಿದ್ದು ಇದ್ರಿಷ್ ಪಾಷಾ ಎಂಬ ವ್ಯಕ್ತಿ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು. ಮೃತ ವ್ಯಕ್ತಿ ಇದ್ರಿಷ್ ಪಾಷಾ ಕುಟುಂಬಸ್ಥರು ಸೇರಿ ರಾಜ್ಯದ ಹಲವೆಡೆ ಮುಸ್ಲಿಂ ಸಮುದಾಯ ಪ್ರತಿಭಟನೆ ನಡೆಸಿ ಪುನೀತ್ ಬಂಧನಕ್ಕೆ ಒತ್ತಾಯಿಸಿತ್ತು. ಪ್ರಕರಣ ಸಂಬಂಧ ಸಾತನೂರು ಪೊಲೀಸ್ ಠಾಣೆಯಲ್ಲಿ 3 ಎಫ್‌ಐಆರ್ ದಾಖಲಾಗಿದ್ದ ಹಿನ್ನೆಲೆ ಇಂದು ಸಾತನೂರು ಪೊಲೀಸರು ಪುನೀತ್ ಕೆರೆಹಳ್ಳಿ ಸೇರಿ ಐವರನ್ನು ಬಂಧಿಸಿದ್ದಾರೆ.

ಕೆಲವರ ಪಕ್ಷಾಂತರದಿಂದ ಬಿಜೆಪಿ ಮೇಲೆ ಯಾವುದೇ ಪರಿಣಾಮವಿಲ್ಲ

ಬೆಂಗಳೂರು, ಏ.5– ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ



ಬಿಜೆಪಿಯ ಕೆಲವು ಶಾಸಕರು ಮತ್ತು ಎಂಎಲ್‌ಸಿಗಳ ಪಕ್ಷಾಂತರವು ಪಕ್ಷದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಿಂದ ಟಿಕೆಟ್ ಸಿಗುವುದಿಲ್ಲ ಎಂಬ ಖಚಿತತೆಯ ಮೇರೆಗೆ ಕೆಲ ನಾಯಕರು ಪಕ್ಷ ತೊರೆದಿದ್ದು, ಇದರಿಂದ ಪಕ್ಷಕ್ಕೆ ಯಾವುದೇ ಪರಿಣಾಮ ಬೀರುವುದಿಲ್ಲ. ಚುನಾವಣೆಯಲ್ಲಿ ಬಿಜೆಪಿ ಸಂಪೂರ್ಣ ಬಹುಮತ ಪಡೆಯಲಿದೆ ಎಂದು ಪುನರುಚ್ಚರಿಸಿದರು. ಇದೇ ವೇಳೆ, ಬೇರೆ ಪಕ್ಷಗಳಿಂದ ಇನ್ನೂ ಹಲವು ನಾಯಕರು ಕಾಂಗ್ರೆಸ್ ಸೇರಲಿದ್ದಾರೆ ಎಂಬ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಉತ್ತರಿಸಿದ ಸಿಎಂ, ಯಾರೂ ಬಿಜೆಪಿ ತೊರೆಯುವುದಿಲ್ಲ, ಕೆಪಿಸಿಸಿ ಅಧ್ಯಕ್ಷರು ಕೆಲವರ ಹೆಸರುಗಳನ್ನು ಅನಗತ್ಯವಾಗಿ ಹೇಳುತ್ತಿದ್ದಾರೆ, ಬಿಜೆಪಿ ಶಾಸಕರನ್ನು ಸಂಪರ್ಕಿಸಲು ಕಾಂಗ್ರೆಸ್ ನಾಯಕ ಪ್ರಯತ್ನಿಸಿದ್ದು, ಅವರಿಗೆ ಟಿಕೆಟ್ ನೀಡುತ್ತಿದ್ದಾರೆಂದು ಹೇಳಿದರು.

ನಟ ಸುದೀಪ್ ಪ್ರಚಾರಕ್ಕೆ ಮಹತ್ವ ಕೊಡಬೇಕಿಲ್ಲ

ಬೆಂಗಳೂರು, ಏ.5– ನಟ ಸುದೀಪ್ ಅವರು ಸಿಎಂ ಬೊಮ್ಮಾಯಿ ಪರ



ಪ್ರಚಾರ ಮಾಡುವುದರಿಂದ ನಮಗೇನು ತೊಂದರೆ ಇಲ್ಲ. ಸುದೀಪ್ ಪ್ರಚಾರಕ್ಕೆ ಹೆಚ್ಚು ಮಹತ್ವ ಕೊಡಬೇಕಿಲ್ಲ ಅಂತಾ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ನಟ ಸುದೀಪ್ ಬೆಂಬಲದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಹಿಂದಿನಿಂದಲೂ ವಿಶ್ವಾಸದ ಮೇಲೆ ಹಲವು ನಟರು ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಹೋಗ್ತಾರೆ, ಅದು ಮಾಮೂಲಿಯಾಗಿ ನಡೆಯುತ್ತಿದೆ. ಬೊಮ್ಮಾಯಿ ಮೇಲಿನ ವಿಶ್ವಾಸದಲ್ಲಿ ಸುದೀಪ್ ಪ್ರಚಾರ ಮಾಡ್ತೀನಿ ಅಂತಾ ಹೇಳಿದ್ದಾರೆ. ಇದು ಅವರ ನಡುವೆ ಇರುವ ವೈಯಕ್ತಿಕ ಸಂಬಂಧಗಳು. ಅದಕ್ಕೆ ಹೆಚ್ಚು ಮಹತ್ವ ಕೊಡುವ ಅವಶ್ಯಕತೆ ಇಲ್ಲ ಎಂದಿದ್ದಾರೆ.

ಬಿಜೆಪಿ ಅವರು ಅಭಿವೃದ್ಧಿ ಮಾಡುವುದರಲ್ಲಿ ವಿಫಲರಾಗಿದ್ದಾರೆ. ಈ ರೀತಿ ಮಾಡಿಯೇ ಚುನಾವಣೆಯಲ್ಲಿ ಮತ ಪಡೆಯೋಕೆ ಮುಂದಾಗಿದ್ದಾರೆ. ಇದ್ಯಾವುದೂ ವರ್ಕ್ ಆಗಲ್ಲ. ನಟರನ್ನು ನೋಡೋಕೆ ಜನ ಬರ್ತಾರೆ. ಅಭಿಮಾನಿಗಳು ಜೈಕಾರ ಹಾಕ್ತಾರೆ, ಶಿಳ್ಳೆ ಹೊಡೆಯುತ್ತಾರೆ. ನಟರು ಅನೇಕರ ಪರ ಪ್ರಚಾರಕ್ಕೆ ಹೋಗ್ತಾರೆ. ಕಾಂಗ್ರೆಸ್ ಪರವೂ ಹೋಗ್ತಾರೆ, ಬಿಜೆಪಿಗೂ ಹೋಗ್ತಾರೆ. ಬೇರೆ ಬೇರೆ ಕಡೆ ಹೋಗ್ತಾರೆ. ನಟರಲ್ಲಿ ಸ್ಥಿರತೆ ಇಲ್ಲ. ವೈಯಕ್ತಿಕ ಬಾಂಧವ್ಯ, ಸ್ನೇಹದ ಮೇಲೆ ಹೋಗ್ತಾರೆ. ಆದರೆ ಜನ ಅಂತಿಮವಾಗಿ ತೀರ್ಮಾನ ಮಾಡ್ತಾರೆ ಅಂತಾ ಹೇಳಿದ್ದಾರೆ.

ಜೆಡಿಎಸ್‌ಗೆ ಸ್ಟಾರ್ ಕ್ಯಾಂಪೇನ್ ನನ್ನ ಕಾರ್ಯಕರ್ತರು. ಪಂಚರತ್ನ ಯೋಜನೆಯೇ ಪಕ್ಷದ ಪ್ರಮುಖ ಆಕರ್ಷಣೆ. ಅ ಕಾರ್ಯಕ್ರಮ ಇಟ್ಟುಕೊಂಡು ಜನತೆ ಮುಂದೆ ಹೋಗ್ತೀನಿ. ಅಲ್ಲದೇ ಮುಖ್ಯಮಂತ್ರಿಗಳಾದ ಕೆ.ಚಂದ್ರಶೇಖರ ರಾವ್ ಮತ್ತು ಮಮತಾ ಬ್ಯಾನರ್ಜಿ ಅವರು ಕೆಲವು ಕಡೆ ಅವಶ್ಯಕತೆ ಇದ್ದರೆ ಪ್ರಚಾರಕ್ಕೆ ಬರ್ತೀನಿ ಅಂತಾ ಹೇಳಿದ್ದಾರೆ. ಮುಂದೆ ಅದನ್ನು ತೀರ್ಮಾನ ಮಾಡ್ತೀನಿ ಎಂದು ಸ್ಪಷ್ಟಪಡಿಸಿದ್ದಾರೆ.

ನಾನು ಯಾವ ಚಿತ್ರ ನಟರನ್ನು ವೈಯಕ್ತಿಕವಾಗಿ ದುರುಪಯೋಗಪಡಿಸಿಕೊಳ್ಳಲ್ಲ. ಅವರು ಸಮಾಜದಲ್ಲಿ ಎಲ್ಲಾ ವರ್ಗಕ್ಕೆ ಸೇರಿದ ಚಿತ್ರನಟರು. ಅವರನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಅವರ ಘನತೆ ಗೌರವವನ್ನು ಸ್ಥಿಮಿತ ಮಾಡೋಕೆ ಇಷ್ಟಪಡಲ್ಲ. ನನ್ನ ಕಾರ್ಯಕರ್ತರೇ ಸ್ಟಾರ್ ಕ್ಯಾಂಪೇನ್‌ಗಳು. ಅವರೇ ನಮ್ಮ ಪಕ್ಷದ ಪರ ಪ್ರಚಾರ ಮಾಡ್ತಿದ್ದಾರೆ. ಮುಂದೆಯೂ ಮಾಡ್ತಾರೆ ಎಂದಿದ್ದಾರೆ.

ಒಂದನೇ ಪುಟದಿಂದ

ಸುದೀಪ್ ಪರೋಕ್ಷ ಬೆಂಬಲ

ಆರೋಪಗಳನ್ನು ಸಮರ್ಥಿಸಿಕೊಂಡಂತಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನನಗೆ ಗೊತ್ತಿರುವ ಸಂಗತಿಗಳ ಬಗ್ಗೆ ಮಾತನಾಡುತ್ತೇನೆ. ನನಗೆ ಗೊತ್ತಿಲ್ಲದ ವಿಷಯಗಳ ಬಗ್ಗೆ ಮಾತನಾಡುವುದಿಲ್ಲ ಎಂದು ಹೇಳಿದರು. ಚುನಾವಣೆಯಲ್ಲಿ ನಿಲ್ಲಬೇಕು ಎಂದು ತೀರ್ಮಾನಿಸಿದರೆ ಘೋಷಣೆ ಮಾಡಿಯೇ ಸ್ಪರ್ಧಿಸುತ್ತೇನೆ. ಚಿತ್ರರಂಗದವರು, ಸೆಲೆಬ್ರಿಟಿಗಳು ಚುನಾವಣಾ ಪ್ರಚಾರಕ್ಕೆ ಇಳಿಯುವುದು ಹೊಸತೇನಲ್ಲ. ನಾನೂ ಹಾಗೇ ಇಳಿದಿದ್ದೇನೆ ಎಂದು ನುಡಿದರು.

ಸಂಪೂರ್ಣ ನಿಷೇಧ

ಬ್ಯಾನರ್‌ಗಳನ್ನು ಹಾಕುವಂತಿಲ್ಲ. ಒಂದು ವೇಳೆ ಮೇಲ್ಕಂಡ ನಿಯಮಗಳನ್ನು ಉಲ್ಲಂಘಿಸಿ ನಗರ ಪ್ರದೇಶದ ಯಾವುದೇ ಸ್ಥಳದಲ್ಲಿ (ಅಧಿಕೃತ ಸ್ಥಳ ಬಿಟ್ಟು) ಅನಧಿಕೃತವಾಗಿ ಜಾಹಿರಾತು ಫಲಕ ಹೋರ್ಡಿಂಗ್, ಬಟಿಂಗ್ಸ್, ಪ್ಲೆಕ್ಸ್, ಭಿತ್ತಿಪತ್ರ, ಗೋಡೆಬರಹ, ಕಟೌಟ್, ಬ್ಯಾನರ್ ಹಾಕಿದ್ದಲ್ಲಿ ಅಂತಹವರ ವಿರುದ್ಧ The Karnataka Open Places (Prevention Of Disfigurement) Act, 1981ರ ಪ್ರಕಾರ ಮತ್ತು ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976ರ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದೆಂದು ಮಹಾನಗರ ಪಾಲಿಕೆಯ ಅಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಹಾದಿಗೆ ಅರಣ್ಯ ಇಲಾಖೆಯಿಂದ ತಡೆ

ಮಾರ್ಗ ತೆರವುಗೊಳಿಸಿದ್ದು, ಈ ಕಾಮಗಾರಿಯಂತು ಕೇವಲ ಒಂದೇ ದಿನದಲ್ಲಿ ನಡೆದಂತೆ ಕಾಣುತ್ತಿಲ್ಲ. ಇಂದೂ ಸಹ ಪರಿಸರವಾದಿಗಳು ಮಾಹಿತಿ ನೀಡಿದ ನಂತರವೇ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಂಡಿದ್ದಾರೆ. ಒಂದು ವೇಳೆ ಪರಿಸರವಾದಿಗಳು ಸಕಾಲಕ್ಕೆ ಎಚ್ಚೆತ್ತುಕೊಂಡು ಮಾಹಿತಿ ನೀಡದಿದ್ದರೆ ಸದರಿ ಬಂಡೆವರೆಗೂ ಸುಸಜ್ಜಿತ ಪಾದಚಾರಿ ಮಾರ್ಗ ನಿರ್ಮಾಣವಾಗೇ ಬಿಡುತ್ತಿತ್ತು. ರಾಜಾರೋಷವಾಗಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಕಾಮಗಾರಿ ನಡೆಯುತ್ತಿದ್ದರೂ ಕೂಡ ಇದು ಅರಣ್ಯಾಧಿಕಾರಿಗಳ ಗಮನಕ್ಕೆ ಬರಲಿಲ್ಲವೇ? ಎಂದು ಪರಿಸರವಾದಿಗಳು ಪ್ರಶ್ನಿಸುತ್ತಿದ್ದಾರೆ. ಚಾಮುಂಡಿಬೆಟ್ಟದಲ್ಲಿ ಯಾವುದೇ ಕಾಮಗಾರಿ ನಡೆಸಬೇಕಾದರೂ ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿದೆ. ಕೆಲ ತಿಂಗಳ ಹಿಂದೆ ನಂದಿ ರಸ್ತೆ ಕುಸಿದಿದ್ದು, ಅದನ್ನು ದುರಸ್ತಿಪಡಿಸಲು ಲೋಕೋಪಯೋಗಿ ಇಲಾಖೆಯು ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದಿದೆ. ಹೀಗಿರುವಾಗ ಇದೇ ರಸ್ತೆಯಲ್ಲಿ ಅರಣ್ಯ ಪ್ರದೇಶದ ಒಳಗೆ ಎಂ ಸ್ಯಾಂಡ್ ಬಳಸಿ ಇಂಟರ್‌ಲಾಕ್ ಪಾದಚಾರಿ ಮಾರ್ಗ ನಿರ್ಮಿಸಿರುವುದು ಅರಣ್ಯ ಇಲಾಖೆ ಅಧಿಕಾರಿಗಳ ಕಾರ್ಯದಕ್ಷತೆಯನ್ನು ಪ್ರಶ್ನಿಸುವಂತಾಗಿದೆ.

ಪರಿಸರವಾದಿಗಳಿಂದ ದೊರೆತ ಮಾಹಿತಿ ಮೇರೆಗೆ ಚಾಮುಂಡಿಬೆಟ್ಟ ವಲಯದ ಆರ್‌ಎಫ್‌ಓ ಧನ್ಯಶ್ರೀ, ಡಿಆರ್‌ಎಫ್‌ಓ ಸತೀಶ್‌ಕುಮಾರ್ ನೇತೃತ್ವದ ತಂಡ ಕ್ರಮ ಕೈಗೊಂಡಿತ್ತು. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಆರ್‌ಎಫ್‌ಓ ಧನ್ಯಶ್ರೀ ಅವರು, ಯಾವುದೇ ಅನುಮತಿ ಇಲ್ಲದೇ ಚಾಮುಂಡಿಬೆಟ್ಟದಲ್ಲಿ 10ರಿಂದ 12 ಮೀಟರ್ ಇಂಟರ್‌ಲಾಕ್ ಪಾದಚಾರಿ ಮಾರ್ಗ ನಿರ್ಮಿಸಲಾಗಿತ್ತು. ಮಾಹಿತಿ ತಿಳಿದ ತಕ್ಷಣ ನಾವು ತೆರಳಿ ಸದರಿ ನಿರ್ಮಾಣವನ್ನು ತೆರವುಗೊಳಿಸಿದ್ದಲ್ಲದೇ ಸ್ಥಳೀಯರೇ ಆದ ಗುತ್ತಿಗೆದಾರ ದಿನೇಶ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ. ಈ ಕಾಮಗಾರಿ ನಡೆಸಲು ಈತನಿಗೆ ಯಾರು ಹೇಳಿದ್ದರು ಎಂಬುದು ಸೇರಿದಂತೆ ಅನಧಿಕೃತ ಕಾಮಗಾರಿಗೆ ಸಂಬಂಧಪಟ್ಟ ವ್ಯಕ್ತಿಗಳು ಯಾರೆಂಬುದು ವಿಚಾರಣೆ ವೇಳೆ ತಿಳಿಯಲಿದ್ದು ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದರು.

ಮೈಸೂರು, ಬಂಡೀಪುರ, ಮದುಮಲೈಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ

ಎಸ್‌ಪಿಜಿ ಅಧಿಕಾರಿಗಳಿಂದ ಮೈಸೂರಲ್ಲಿ ಭದ್ರತಾ ವ್ಯವಸ್ಥೆ ಪರಿಶೀಲನೆ

ಮೈಸೂರು,ಏ.5(ಆರ್‌ಕೆ)–ಏಪ್ರಿಲ್ 8 ಮತ್ತು 9ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೈಸೂರು, ಬಂಡೀಪುರ ಮತ್ತು ಮದುಮಲೈಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ವಿಶೇಷ ಭದ್ರತಾ ತಂಡ (ಎಸ್‌ಪಿಜಿ)ದ ಅಧಿಕಾರಿಗಳು ಮೈಸೂರಿನಲ್ಲಿ ಕೈಗೊಂಡಿರುವ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸುತ್ತಿದ್ದಾರೆ.

ಗೃಹ ಸಚಿವಾಲಯದ ಬ್ಲೂ ಬುಕ್ ನಿಯಮಾನುಸಾರ ಅತೀ ಗಣ್ಯ ವ್ಯಕ್ತಿಗಳಿಗೆ ಒದಗಿಸುವ ಭದ್ರತೆಯನ್ನು ಪ್ರಧಾನಮಂತ್ರಿಗಳಿಗೆ ಒದಗಿಸಿ ಲೋಪವಾಗದಂತೆ ಎಚ್ಚರ ವಹಿಸಬೇಕಾಗಿರುವುದರಿಂದ ನವದೆಹಲಿಯಿಂದ ಆಗಮಿಸಿರುವ ಎಸ್‌ಪಿಜಿ ಅಧಿಕಾರಿಗಳು ಮೈಸೂರಿನಲ್ಲಿ ಬೀಡು ಬಿಟ್ಟಿದ್ದು, ಇಲ್ಲಿನ ಭದ್ರತಾ ವ್ಯವಸ್ಥೆಯನ್ನು ಖಾತರಿಪಡಿಸಿಕೊಳ್ಳುತ್ತಿದ್ದಾರೆ.

ಇಂದು ಮಂಡಕಳ್ಳಿ ವಿಮಾನ ನಿಲ್ದಾಣ, ಸುತ್ತಲಿನ ಕಾಂಪೌಂಡ್, ನಂಜನಗೂಡು ರಸ್ತೆ, ಕ್ರಾಫರ್ಡ್ ಹಾಲ್ ಎದುರಿನ ಓವಲ್ ಗ್ರೌಂಡ್‌ನ ತಾತ್ಕಾಲಿಕ ಹೆಲಿಪ್ಯಾಡ್, ಹುಣಸೂರು ರಸ್ತೆಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನ, ಎಂಜಿ ರಸ್ತೆಯ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಸಾಗುವ ಮಾರ್ಗಗಳಲ್ಲಿ ಭದ್ರತಾ ಕಾರ್ಯ ಪರಿಶೀಲಿಸಿದ ಅಧಿಕಾರಿಗಳು ಕೆಲ ಮಾರ್ಪಾಡು ಮಾಡಬೇಕೆಂದು ಸಲಹೆ ನೀಡಿದರು.



ಏ.9ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆಯಲ್ಲಿ ಎಸ್‌ಪಿಜಿ ಅಧಿಕಾರಿಗಳು ಮೈಸೂರಿನ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಭದ್ರತಾ ವ್ಯವಸ್ಥೆ ಪರಿಶೀಲಿಸಿದರು. ಓವಲ್ ಮೈದಾನದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಹೆಲಿಪ್ಯಾಡ್ (ಬಲಚಿತ್ರ)

ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್‌ರೊಂದಿಗೆ ಚರ್ಚಿಸಿದ ಎಸ್‌ಪಿಜಿ ಅಧಿಕಾರಿಗಳು, ಪ್ರಧಾನಮಂತ್ರಿಗಳ ಭೇಟಿ ಸಂಬಂಧ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ನಿಗದಿಯಾಗಿದ್ದು, ಪ್ರತೀ ಕ್ಷಣದ ಚಲನೆಯಲ್ಲೂ ನಿಗಾ ಇರಿಸಿ ಸುರಕ್ಷತಾ ಕ್ರಮ ಕೈಗೊಳ್ಳುವುದು ಹಾಗೂ ಬಂದೋಬಸ್ತ್ ಯೋಜನೆಯ ವರದಿ ತಯಾರಿಸಿ ಹಿರಿಯ ಅಧಿಕಾರಿಗಳಿಂದ ಅನುಮೋದನೆ ಪಡೆಯಬೇಕಾಗಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಎದುರಿನ ಓವಲ್ ಮೈದಾನದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಾಣವಾಗಿದ್ದು, ಪ್ರಧಾನಿಗಳು ಏಪ್ರಿಲ್ 8ರಂದು ರಾತ್ರಿ ವಾಸ್ತವ್ಯ ಹೂಡಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾದಲ್ಲೂ ಸೂಕ್ತ ಬಂದೋಬಸ್ತ್ ಮಾಡಿ ಕಟ್ಟೆಚ್ಚರ ವಹಿಸುವ ಸಂಬಂಧ ಇಂದು ಹೋಟೆಲ್‌ಗೂ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವಿಮಾನ ನಿಲ್ದಾಣದಿಂದ ಪ್ರಧಾನಿಗಳು ಕಾರಿನಲ್ಲಿ ಸಾಗುವ ರ್‍ಯಾಡಿಸನ್ ಬ್ಲೂ ಪ್ಲಾಜಾವರೆಗೆ ನಂಜನಗೂಡು ರಸ್ತೆಯಲ್ಲಿ ಯಾವುದೇ ರೋಡ್ ಹಂಪ್‌ಗಳಿಲ್ಲದಂತೆ ಅಂದು ನಂಜನಗೂಡು ರಸ್ತೆ,



ರಿಂಗ್ ರೋಡ್ ಜಂಕ್ಷನ್‌ನಲ್ಲಿ ಸಿಗ್ನಲ್ ಆಫ್ ಮಾಡಿ ಶೂನ್ಯ ಸಂಚಾರ ವ್ಯವಸ್ಥೆ ಮಾಡಬೇಕು, ಮುಕ್ತ ವಿಶ್ವವಿದ್ಯಾ ನಿಲಯದ ಘಟಿಕೋತ್ಸವ ಭವನದವರೆಗೆ ತೆರಳುವ ಹುಣಸೂರು ರಸ್ತೆಯಲ್ಲೂ ಸುಗಮ ಸಂಚಾರ ವ್ಯವಸ್ಥೆ ಮಾಡಬೇಕೆಂದೂ ಎಸ್‌ಪಿಜಿ ಅಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎನ್.ಆರ್. ಉಪವಿಭಾಗದ ಎಸಿಪಿ ಸತ್ಯನಾರಾಯಣ, ಕೆ.ಆರ್.ಉಪವಿಭಾಗದ ಎಸ್.ಇ. ಗಂಗಾಧರ ಸ್ವಾಮಿ, ದೇವರಾಜ ಉಪವಿಭಾಗದ ಶಾಂತಮಲ್ಲಪ್ಪ, ಮೈಸೂರು ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್. ಬಸವರಾಜು ಭದ್ರತಾ ವ್ಯವಸ್ಥೆ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಹಲವು ಮಹಿಳಾ ಮುಖಂಡರು ಬಿಜೆಪಿ ಸೇರ್ಪಡೆ



ಚಾಮರಾಜ ಕ್ಷೇತ್ರದ ವಾರ್ಡ್ ನಂ.3ರ ವ್ಯಾಪ್ತಿಯ ಮಹದೇಶ್ವರ ಬಡಾವಣೆ, ವಿಜಯನಗರ ರೈಲ್ವೆ ಬಡಾವಣೆಯ ಹಲವು ಮಹಿಳಾ ಮುಖಂಡರು ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಮೈಸೂರು,ಏ.5(ಎಂಕೆ)–ಚಾಮರಾಜ ಕ್ಷೇತ್ರದ ವಾರ್ಡ್ ನಂ.3ರ ವ್ಯಾಪ್ತಿಯ ಮಹದೇಶ್ವರ ಬಡಾವಣೆ ಹಾಗೂ ವಿಜಯನಗರ ರೈಲ್ವೆ ಬಡಾವಣೆಯ ಹಲವು ಮಹಿಳಾ ಮುಖಂಡರು ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆಯಲ್ಲಿರುವ ಇನ್ನರ್ ವ್ಹೀಲ್ ರೋಟರಿ ಭವನದಲ್ಲಿ ಆಯೋಜಿಸಿದ್ದ ಪಕ್ಷ ಸೇರ್ಪಡೆ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ಮಹದೇಶ್ವರ ಬಡಾವಣೆ ಹಾಗೂ ವಿಜಯನಗರ ರೈಲ್ವೆ ಬಡಾವಣೆ ಮಹಿಳಾ ಮುಖಂಡರಿಗೆ ಬಿಜೆಪಿ ಬಾವುಟ ನೀಡುವ ಮೂಲಕ ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು.

ಬಳಿಕ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಿಂದಾಗಿ ಭಾರತ ವಿಶ್ವ ಮಟ್ಟದಲ್ಲಿ ಸಾಧನೆ ಮಾಡುತ್ತಿದೆ. ಕೊರೊನಾ ಸಂದರ್ಭದಲ್ಲಿ ಲಸಿಕೆ ನೀಡಿ ಆರೈಕೆ ಮಾಡಿದ್ದರಿಂದಾಗಿ ನಾವೆಲ್ಲರೂ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೇವೆ. ಕಿಟ್ ವಿತರಣೆ ಕರೆ ನೀಡಿದ ಹಿನ್ನೆಲೆ ಚಾಮರಾಜ ಕ್ಷೇತ್ರದಲ್ಲಿ 45 ಸಾವಿರಕ್ಕೂ ಹೆಚ್ಚು ಕಿಟ್‌ಗಳನ್ನು ನೀಡುವ ಮೂಲಕ ಜನರ ಕಷ್ಟಕ್ಕೆ ಸ್ಪಂದಿಸಲಾಯಿತು ಎಂದು ಹೇಳಿದರು.

ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಆದರೆ ಅವರ ಗ್ಯಾರಂಟಿ ಯೋಜನೆಗಳಿಗೆ ಗ್ಯಾರಂಟಿಯೇ ಇಲ್ಲ. ಜನರು ಬಿಜೆಪಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಯಸಿದ್ದಾರೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಮುಖ್ಯ ಧ್ಯೇಯವಾಗಿದ್ದು, ಈ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ ಎಂದು ಹೇಳಿದರು.

ಮೇಯರ್ ಶಿವಕುಮಾರ್ ಮಾತನಾಡಿ, ಕಳೆದ 5 ವರ್ಷಗಳಲ್ಲಿ ಚಾಮರಾಜ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯಾಗಿದೆ. ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಿರುವ ಶಾಸಕ ಎಲ್.ನಾಗೇಂದ್ರ ಅವರನ್ನು ಮತ್ತೊಮ್ಮೆ ಗೆಲ್ಲಿಸಿ, ಮಂತ್ರಿಯನ್ನಾಗಿಸಿ ಕೆಲಸ ಮಾಡಲು ಅವಕಾಶವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯ ಚಿಕ್ಕವೆಂಕಟ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಪ್ರಧಾನ ಕಾರ್ಯದರ್ಶಿ ಪುನೀತ್, ವಾರ್ಡಿನ ಮುಖಂಡರಾದ ಶ್ರೀನಾಥ್, ಶುಭ, ಕೀರ್ತಿ ಕುಮಾರ್, ಶಿವರಾಂ, ಗೋಪಿ ಮಹೇಶ್, ಯೋಗೀಶ್ ಕುಮಾರ್, ಪದ್ಮ, ಶಶಿಕಲಾ, ನಾಗರತ್ನ, ರವಿಚಂದ್ರ, ಸೋಮಶೇಖರ್, ಲಕ್ಷೀ, ಸಿಂಧು, ಪವಿತ್ರ, ಸರೋಜಮ್ಮ, ಮೇಘನಾ, ಮಧು, ರಾಮನಾಯಕ್ ಮತ್ತಿತರರಿದ್ದರು.

ತಮಿಳುನಾಡಲ್ಲಿ ಐವರು ಅರ್ಚಕರು ನೀರು ಪಾಲು

ಮೂವರಸನ್, ಏ.5– ಧಾರ್ಮಿಕ ವಿಧಾನಗಳಲ್ಲಿ ತೊಡಗಿದ್ದ 5 ಅರ್ಚಕರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಮಿಳುನಾಡಿನ ಮೂವರಸನ್ ಪೇಟೆಯಲ್ಲಿ ನಡೆದಿದೆ.

25 ಮಂದಿ ಅರ್ಚಕರ ಪೈಕಿ 5 ಮಂದಿ ಸಾವನ್ನಪ್ಪಿದ್ದಾರೆ. ಇತ್ತೀಚಿನ ಮಾಹಿತಿಯ ಪ್ರಕಾರ 5 ಮೃತರನ್ನು ಸೂರ್ಯ (24) ರಾಘವನ್ (22) ಯೋಗೇಶ್ವರನ್ (23) ವನೀಶ್ (20) ರಾಘವನ್ (18) ಎಂದು



ಗುರುತಿಸಲಾಗಿದೆ. ಈ ಅರ್ಚಕರ ತಂಡ ಮೂವರಸನ್ ಪೇಟ್‌ನಲ್ಲಿನ ಧರ್ಮ ಲಿಂಗೇಶ್ವರ ದೇವಾಲಯದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ವೇಳೆ ಮಂದಿ ಅರ್ಚಕರು ಕೆರೆ/ ನೀರಿರುವ ಪ್ರದೇಶಕ್ಕೆ ತೆರಳಿದ್ದರು. ಈ ವೇಳೆ ಏಕಾಏಕಿ 5 ಮಂದಿ ನೀರಿನಲ್ಲಿ ಮುಳುಗಿದ್ದರು. ಮಾಹಿತಿ ಪಡೆದ ಅಗ್ನಿಶಾಮಕ ದಳ ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ಮೃತದೇಹಗಳನ್ನು ಹೊರತೆಗೆದಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಕಳಿಸಲಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು, ತನಿಖೆ ಆರಂಭಿಸಿದ್ದಾರೆ.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಾರ್ಬಳ್ಳಿ ಗ್ರಾಮದಲ್ಲಿ ಮುಖಂಡರಾದ ಅರಸಿನಕೆರೆ ಲೋಕೇಶ್, ಕೆಂಪನಾಯಕ, ಕಾಳಿಂಗ, ಗೊಜ್ಜನಾಯಕ, ಕರಿನಾಯಕ, ರಮೇಶ್‌ನಾಯಕ, ಮಂಜುನಾಥ್, ನಿಂಗಣ್ಣ, ಲಿಂಗರಾಜು, ಮುತ್ತುನಾಯಕ, ದೇವರಾಜಪ್ಪ, ರಾಮೇಗೌಡ ಸೇರಿದಂತೆ ಹಲವರು ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ ಇದ್ದರು.

ಅಪಘಾತದಲ್ಲಿ ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಅಂಗಾಂಗ ದಾನ



ಪುಟ್ಟಮಾದಯ್ಯ

ಮೈಸೂರು,ಏ.5(ಎಸ್‌ಬಿಡಿ)–ಅಪಘಾತಕ್ಕೀಡಾಗಿ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿಯೊಬ್ಬರ ಅಂಗಾಂಗ ದಾನ ಮಾಡುವ ಮೂಲಕ ಅವರ ಕುಟುಂಬದವರು ದುಃಖದಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಚಾಮರಾಜನಗರ ಜಿಲ್ಲೆ, ಕುದೇರು ಗ್ರಾಮದ ಪುಟ್ಟಮಾದಯ್ಯ (45) ಅವರು ಏ.2ರಂದು ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗಿದ್ದ ಕಾರಣ ಪುಟ್ಟಮಾದಯ್ಯ ಅವರ ಸ್ಥಿತಿ ಚಿಂತಾಜನಕವಾಗಿತ್ತು. ಚಿಕಿತ್ಸೆ ನೀಡಿದ ವೈದ್ಯರು ಪುಟ್ಟಮಾದಯ್ಯ ಅವರ ಮೆದುಳು ನಿಷ್ಕ್ರಿಯವಾಗಿದ್ದನ್ನು ಖಚಿತಪಡಿಸಿಕೊಂಡು ಅವರು ಬದುಕುಳಿಯುವ ಸಾಧ್ಯತೆ ಇಲ್ಲದಿರುವುದನ್ನು ಕುಟುಂಬದವರಿಗೆ ತಿಳಿಸಿದರು. ದುಃಖದ ನಡುವೆಯೂ ಪುಟ್ಟಮಾದಯ್ಯ ಅವರ ಅಂಗಾಂಗ ದಾನಕ್ಕೆ ಕುಟುಂಬದವರು ನಿರ್ಧರಿಸಿ, ಮುಂದಿನ ಕ್ರಮ ಕೈಗೊಳ್ಳಲು ಕೋರಿದರು. ನಂತರ ನಿಮಯಾನುಸಾರ ಆಸ್ಪತ್ರೆ ವೈದ್ಯರು ರೋಗಿಯ ಮೆದುಳು ನಿಷ್ಕ್ರಿಯವಾಗಿದೆ ಎಂದು ಏ.4ರಂದು ಘೋಷಣೆ ಮಾಡಿದರು.

ನಂತರದ ಪ್ರಕ್ರಿಯೆ ನಡೆಸಿದ ವೈದ್ಯರ ತಂಡ, ರೋಗಿಯ ಹೃದಯ, ಎರಡು ಕಿಡ್ನಿ ಹಾಗೂ ಎರಡು ಕಾರ್ನಿಯಾ(ಕಣ್ಣುಗಳು)ಗಳನ್ನು ಕೊಯ್ಲು ಮಾಡಿ ಅವಶ್ಯಕತೆ ಯಿದ್ದ ರೋಗಿಗಳಿಗೆ ಕಸಿ ಮಾಡಲು ಕಳುಹಿಸಿಕೊಟ್ಟಿತು. ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಗ್ರೀನ್ ಕಾರಿಡಾರ್ ಮೂಲಕ ಹೃದಯವನ್ನು ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ರವಾನಿಸಲಾಯಿತು. ಒಂದು ಕಿಡ್ನಿಯನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ಕಳುಹಿಸಿ, 2 ಕಾರ್ನಿಯಾಗಳು, ಮತ್ತೊಂದು ಕಿಡ್ನಿಯನ್ನು ಜೆಎಸ್‌ಎಸ್ ಆಸ್ಪತ್ರೆಯಲ್ಲೇ ಅವಶ್ಯಕತೆ ಇದ್ದವರಿಗೆ ಕಸಿ ಮಾಡಲಾಯಿತು. ದುಃಖದಲ್ಲೂ ಮಿದುಳು ನಿಷ್ಕ್ರಿಯಗೊಂಡಿದ್ದ ಪುಟ್ಟಮಾದಯ್ಯ ಅವರ ಅಂಗಾಂಗ ದಾನ ಮಾಡುವ ಮೂಲಕ ಹಲವರಿಗೆ ಮರುಜನ್ಮ ನೀಡಿದ ಅವರ ಕುಟುಂಬದವರಿಗೆ ಜೆಎಸ್‌ಎಸ್ ಆಸ್ಪತ್ರೆ ಅನಂತ ಧನ್ಯವಾದ ಸಲ್ಲಿಸಿದೆ ಎಂದು ಆಸ್ಪತ್ರೆ ಆಡಳಿತಾಧಿಕಾರಿ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಕೆ.ರಮೇಶ್ ನೇತೃತ್ವದಲ್ಲಿ ಬಾಬು ಜಗಜೀವನ್ ರಾಂ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಬಾಬೂಜಿ ಜಯಂತಿ ಆಚರಿಸಲಾಯಿತು. ಈ ವೇಳೆ ಕೆ.ಎಸ್.ಸಿದ್ದರಾಜು, ರಾಜಶೇಖರ್, ಜಗದೀಶ್, ರವಿ, ಅನಿಲ್, ಮಹಾದೇವ, ರವಿಕುಮಾರ್, ವನಜಾಕ್ಷಿ ಇನ್ನಿತರರಿದ್ದಾರೆ.

ಏ.8, ಹಿರಿಯ ಸಾಹಿತಿ ಡಾ.ಸಿಪಿಕೆ 85ನೇ ಹುಟ್ಟುಹಬ್ಬ ಆಚರಣೆ

ಮೈಸೂರು,ಏ.5–ಮೈಸೂರಿನ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ವತಿಯಿಂದ ಏ.8ರಂದು ಬೆಳಗ್ಗೆ 10.30ಕ್ಕೆ ಹಿರಿಯ ಸಾಹಿತಿ ಡಾ.ಸಿಪಿಕೆಯವರ 85ನೇ ಹುಟ್ಟುಹಬ್ಬವನ್ನು



ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಅರವಿಂದ ಮಾಲಗತ್ತಿ ಉದ್ಘಾಟಿಸುವರು. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಡಾ.ನೀಲಗಿರಿ ತಳವಾರ್, ಡಾ.ಸಿಪಿಕೆ ಅವರಿಗೆ ಶುಭ ಹಾರೈಸುವರು. ಇದೇ ವೇಳೆ ಯಶಸ್ವಿನಿ ಮಹಿಳಾ ಜಾಗೃತಿ ಪರಿಷತ್ ಅನ್ನು ಚುಟುಕು ಸಾಹಿತಿ ಡಾ.ಎಂ.ಜಿ.ಆರ್.ಅರಸ್ ಉದ್ಘಾಟಿಸುವರು.

ಅರಸು ಮಂಡಲಿ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ಡಾ.ರತ್ನ ಹಾಲಪ್ಪಗೌಡ, ಯಶಸ್ವಿನಿ ಮಹಿಳಾ ಸಮಾಜದ ಅಧ್ಯಕ್ಷೆ ಮಮತಾ ಶ್ರೀಧರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ

ಪ್ರಭಾವಕ್ಕೊಳಗಾಗದೆ ಸತ್ಯ ಸಂಗತಿ ತಿಳಿಸುವುದು ಪತ್ರಕರ್ತರ ಜವಾಬ್ದಾರಿ; ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಕಿವಿಮಾತು

ಮೈಸೂರು,ಏ.5(ಪಿಎಂ)– ಹಿರಿಯ ಪತ್ರಕರ್ತ ಎಂ.ಎಸ್.ಕಾಶೀನಾಥ್ ಅವರಿಗೆ ಬುಧವಾರ ಸುತ್ತೂರು ಶ್ರೀ ಮಠದಿಂದ ಕೊಡ ಮಾಡುವ 2022ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ನಿರ್ದೇಶಕ ಎಸ್.ಪುಟ್ಟಸುಬ್ಬಪ್ಪ ಪ್ರಶಸ್ತಿ ಪ್ರದಾನ ಮಾಡಿದರು. ಅಲ್ಲದೆ, ಎಂ.ಎಸ್.ಕಾಶೀನಾಥ್ ಅವರ ಪತ್ನಿ ಪ್ರೇಮಕುಮಾರಿ ಅವರನ್ನೂ ಸನ್ಮಾನಿಸಲಾಯಿತು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಹಿರಿಯ ಪತ್ರಕರ್ತ ಎಂ.ಎಸ್.ಕಾಶೀನಾಥ್ ಅವರಿಗೆ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಜೊತೆಗೆ ಎಂ.ಎಸ್.ಕಾಶೀನಾಥ್ ಅವರ ಪತ್ನಿ ಪ್ರೇಮಕುಮಾರಿ ಅವರನ್ನೂ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಪ್ರೊ.ಎನ್.ಕೆ.ಲೋಕನಾಥ್, ಪತ್ರಿಕೋದ್ಯಮದಲ್ಲಿ ಸಾಧನೆ ಮಾಡಿದ ಹಿರಿಯ ಪತ್ರಕರ್ತರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸುವ ಮಹತ್ಕಾರ್ಯ ಮಾಡುತ್ತಿರುವ ಸುತ್ತೂರು ಶ್ರೀ ಮಠಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಸುತ್ತೂರು ಮಠವು ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಮುಂಚೂಣಿಯಲ್ಲಿದೆ. ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ ಸೇರಿದಂತೆ ಮೊದಲಾದ ಕ್ಷೇತ್ರಗಳಲ್ಲಿ ಶ್ರೀಮಠ ಹಲವು ಸೇವಾಪರ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ಹೇಳಿದರು.

ಪತ್ರಕರ್ತರು ಸುದ್ದಿಗಳನ್ನು ಸಮಾಜಕ್ಕೆ ಮುಟ್ಟಿಸುವ ಹೊಣೆಗಾರಿಕೆ ನಿಭಾಯಿಸುತ್ತಾರೆ. ಪತ್ರಿಕೆಗಳನ್ನು ಸಂಪಾದಿಸುವುದು ಒಂದು ಕಲೆಯೂ ಹೌದು, ವೃತ್ತಿಯೂ ಹೌದು. ಭಾರತೀಯ ಪತ್ರಿಕೋದ್ಯಮಕ್ಕೆ ಎರಡು ಶತಮಾನಗಳಿಗೂ ಮೀರಿದ ಇತಿಹಾಸವಿದೆ. ಭಾರತದಲ್ಲಿ ಒಂದು ಪವಿತ್ರ ಕ್ಷೇತ್ರವೆಂದು ಪರಿಗಣಿಸಿರುವ ಪತ್ರಿಕೋದ್ಯಮವು ಜನಾಭಿಪ್ರಾಯ ರೂಪಿಸುವ ಪ್ರಬಲ ಅಸ್ತ್ರ ಎಂದೇ ಪರಿಗಣಿಸಲಾಗಿದೆ. ಸತ್ಯ ಸಂಗತಿಯನ್ನು ಯಾವ ಪ್ರಭಾವಕ್ಕೂ ಒಳಗಾಗದೆ ವರದಿ ಮಾಡುವುದು ಹಾಗೂ ಸತ್ಯಶೋಧನೆ ಮಾಡುವುದು ಪತ್ರಿಕೆಗಳ ಮತ್ತು ಪತ್ರಕರ್ತರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಎಸ್.ಪುಟ್ಟಸುಬ್ಬಪ್ಪ ಮಾತನಾಡಿ, ಪತ್ರಕರ್ತರ ಜವಾಬ್ದಾರಿ ಮಹತ್ವದ್ದು. ಕಳೆದ 13 ವರ್ಷಗಳಿಂದ ಸುತ್ತೂರು ಶ್ರೀ ಮಠದಿಂದ ಪ್ರತಿವರ್ಷ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಕೊಡಮಾಡಲಾಗುತ್ತಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಪತ್ರಕರ್ತರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಇಂದು ಪ್ರಶಸ್ತಿಗೆ ಭಾಜನರಾದ ಎಂ.ಎಸ್. ಕಾಶೀನಾಥ್ ಅವರಿಗೆ ಇನ್ನಷ್ಟು ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತ ಎಂ.ಎಸ್.ಕಾಶೀನಾಥ್ ಮಾತನಾಡಿ, ನನಗೆ ಪತ್ರಿಕೋದ್ಯಮ ಕುರಿತಂತೆ ಶೈಕ್ಷಣಿಕ ಹಿನ್ನೆಲೆ ಇಲ್ಲ. ನಾನು ಪತ್ರಿಕೋದ್ಯಮಕ್ಕೆ ಬಂದಿದ್ದು ಆಕಸ್ಮಿಕ. ಮೊದಲಿಗೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಬರೆಯಲು ಅವಕಾಶ ದೊರೆಯಿತು. ಬಳಿಕ ಪತ್ರಿ ಕೋದ್ಯಮ ಕ್ಷೇತ್ರದಲ್ಲಿ ವೃತ್ತಿ ಜೀವನ ಮುಂದುವರೆಸಲು ಅವಕಾಶ ಲಭಿಸಿತು ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಕೆಯುಡಬ್ಲ್ಯುಜೆ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ನಗರ ಕಾರ್ಯಕಾರಿ ಸಮಿತಿ ಸದಸ್ಯೆ ಮಾಚಮ್ಮ ಮಲ್ಲಿಗೆ ಇದ್ದರು.

ಅಖಿಲ ಭಾರತ ಅಂತರ ವಿವಿ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ನನ್ನ ಮುಂದಿನ ಜೀವನ ಮೈಸೂರಲ್ಲೇ ನಡೆಸುತ್ತೇನೆ: ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ



ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗೆ ಬಿಸಿಸಿಐ ಅಧ್ಯಕ್ಷ ರೋಜರ್ ಎಂ.ಹೆಚ್.ಬಿನ್ನಿ ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು.

ಮೈಸೂರು, ಏ.5(ಎಂಕೆ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್(ಎಸ್‌ಜೆಸಿಇ) ಕಾಲೇಜು ಆವರಣದಲ್ಲಿರುವ ಕೆಎಸ್‌ಸಿಎ(ಜೆಎಸ್‌ಎಸ್ ಎಸ್‌ಟಿಯು) ಮೈದಾನದಲ್ಲಿ ಏ.11ರವರೆಗೆ ನಡೆಯುವ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಗೆ ಬುಧವಾರ ಚಾಲನೆ ದೊರೆಯಿತು.

ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟದ ಸಹಯೋಗದಲ್ಲಿ ಏರ್ಪಡಿಸಿರುವ ಕ್ರಿಕೆಟ್ ಪಂದ್ಯಾವಳಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ರೋಜರ್ ಎಂ.ಹೆಚ್. ಬಿನ್ನಿ ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು. ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಅಥ್ಲೀಟ್ ಆಗಿ ಕ್ರೀಡೆಗೆ ಪಾದಾರ್ಪಣೆ ಮಾಡಿದ ಮೈಸೂರಿಗೆ ಬರುವುದೆಂದರೆ ನನಗೆ ಸಂತೋಷವಾಗುತ್ತದೆ. ದಸರಾ ಕ್ರೀಡಾಕೂಟದಲ್ಲಿ ಜಾವಲಿನ್, ಗುಂಡು ಎಸೆತದಲ್ಲಿ ಪಾಲ್ಗೊಂಡಿದ್ದೆ. ಮೈಸೂರು ನಗರ ನನ್ನ ಹೃದಯದಲ್ಲಿದೆ. ನನ್ನ ಮುಂದಿನ ಜೀವನವನ್ನು ನಾನು ಮೈಸೂರಿನಲ್ಲಿಯೇ ಕಳೆಯಬೇಕೆಂದು ತೀರ್ಮಾನಿಸಿದ್ದೇನೆ ಎಂದು ಹೇಳಿದರು.

ಮಹಿಳಾ ಕ್ರಿಕೆಟ್‌ಗೆ ಆದ್ಯತೆ: ಬಿಸಿಸಿಐ ಮಹಿಳಾ ಕ್ರಿಕೆಟ್‌ಗೂ ಹೆಚ್ಚಿನ ಆದ್ಯತೆ ನೀಡಲು ನಿರ್ಧರಿಸಿದೆ. ಅದರಂತೆ ಮೊದಲ ಬಾರಿಗೆ ಆಯೋಜಿಸಿದ್ದ ಡಬ್ಲ್ಯೂಪಿಎಲ್ (ವಿಮೆನ್ ಪ್ರೀಮಿಯರ್ ಲೀಗ್)ಅಭೂತಪೂರ್ವ ಯಶಸ್ಸು ಕಂಡಿದೆ. ಮಹಿಳಾ ಕ್ರಿಕೆಟ್ ಆಟಗಾರ್ತಿಯರು ಉತ್ತಮ ಪ್ರದರ್ಶನ ನೀಡಿದ್ದಾರೆ. ಅದರಂತೆ ಇಂತಹ ಪಂದ್ಯಾವಳಿಗಳನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಸಾಧನೆ ಮಾಡಬೇಕು ಎಂದು ಕಿವಿಮಾತು ಹೇಳಿದರು. 2008ರಿಂದ ಆರಂಭವಾದ ಪುರುಷರ ಐಪಿಎಲ್(ಇಂಡಿಯನ್ ಪ್ರೀಮಿಯರ್ ಲೀಗ್)ನಿಂದ ಅಂತರ ರಾಷ್ಟ್ರೀಯ ಮಟ್ಟದ ಕ್ರಿಕೆಟಿಗರು ಸೃಷ್ಟಿಯಾಗಿದ್ದಾರೆ. ಹಾಗೆಯೇ ವಿದೇಶಿ ಆಟಗಾರರೊಂದಿಗೆ ಭಾಗವಹಿಸುವುದರಿಂದ ಕಲಿಕೆ ಹಾಗೂ ಗುರಿತಲು ಪಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಐಪಿಎಲ್ ಹಾಗೂ ಡಬ್ಲೂಪಿಎಲ್ ಮುಂದುವರೆಯಲಿದೆ ಎಂದರಲ್ಲದೆ ಕ್ರಿಕೆಟ್‌ನಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರಿಗೆ ಉತ್ತಮ ಅವಕಾಶಗಳಿವೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು. ಜೆಎಸ್‌ಎಸ್ ಮಹಾವಿದ್ಯಾ ಪಿಠದ ಕಾರ್ಯದರ್ಶಿ ಮಂಜುನಾಥ್, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎ.ಎನ್.ಸಂತೋಷ್‌ಕುಮಾರ್, ಕುಲ ಸಚಿವ ಡಾ.ಎಸ್.ಎ.ಧನರಾಜ್, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಸಿ. ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

16 ತಂಡಗಳು ಭಾಗಿ...

ಏ.5 ರಿಂದ 11 ರವರೆಗೆ ನಡೆಯುವ 'ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ'ಯಲ್ಲಿ 16 ತಂಡಗಳು ಭಾಗವಹಿಸಲಿದ್ದು, ಪಂದ್ಯಗಳು ಎಸ್‌ಜೆಸಿಇ ಕಾಲೇಜು ಆವರಣದಲ್ಲಿರುವ ಕೆಎಸ್‌ಸಿಎ (ಜೆಎಸ್‌ಎಸ್ ಎಸ್‌ಟಿಯು), ಮೈಸೂರು ವಿವಿ ಗ್ಲೇಡ್ಸ್ ಮೈದಾನ, ಜೆಎಸ್‌ಎಸ್ ಎಹೆಚ್‌ಇಆರ್ ಮೈದಾನ ಹಾಗೂ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿವೆ. ಉತ್ತರ ಪ್ರದೇಶದ ವಿಬಿಎಸ್‌ಪಿ ವಿಶ್ವವಿದ್ಯಾನಿಲಯ, ಬಿಹಾರದ ಎಲ್.ಎನ್. ಮಿಥಿಲಾ ವಿಶ್ವವಿದ್ಯಾನಿಲಯ, ಮಧ್ಯಪ್ರದೇಶದ ಅವದೇಶ್ ಪ್ರತಾಪ್ ಸಿಂಗ್ ವಿಶ್ವವಿದ್ಯಾನಿಲಯ, ಛತ್ತೀಸ್‌ಗಡದ ಹೇಮಚಂದ್ರ ಯಾದವ್ ವಿಶ್ವವಿದ್ಯಾ ನಿಲಯ, ಕೇರಳದ ಮಹಾತ್ಮ ಗಾಂಧಿ ವಿವಿ, ಆಂಧ್ರಪ್ರದೇಶದ ಆಂಧ್ರ ವಿವಿ, ಕೇರಳದ ಕ್ಯಾಲಿಕಟ್ ವಿವಿ, ಆಂಧ್ರಪ್ರದೇಶದ ಆದಿಕವಿ ನನ್ನಯ್ಯ ವಿವಿ, ಹರಿಯಾಣದ ಎಂಡಿ ವಿವಿ, ಪಂಜಾಬ್‌ನ ಲವ್‌ಲೀ ಪ್ರೊಫೆಷನಲ್ ವಿವಿ, ಪಂಜಾಬ್‌ನ ಗುರುನಾನಕ್ ದೇವ್ ವಿವಿ ಹಾಗೂ ಚಂಡಿಗಢದ ಪಂಜಾಬ್ ವಿವಿ, ಬೋಪಾಲ್‌ನ ಬರ್ಕತುಲ್ಲಾ ವಿವಿ, ಪುಣೆಯ ಸಾವಿತ್ರಿ ಬಾಯ್ ಪುಲೆ ವಿವಿ, ಕೊಲ್ಲಾಪುರದ ಶಿವಾಜಿ ವಿವಿ ಹಾಗೂ ಜೈಪುರದ ರಾಜಸ್ಥಾನ್ ವಿಶ್ವವಿದ್ಯಾನಿಲಯ ತಂಡಗಳ ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ.

ಮೈಸೂರು ನನ್ನ ಹೃದಯದಲ್ಲಿದೆ; ನನ್ನ ಕ್ರೀಡಾ ಜೀವನ ಆರಂಭವಾಗಿದ್ದೆ ಇಲ್ಲಿಂದ

–ರೋಜರ್ ಬಿನ್ನಿ

■ ಮೋಹನ್ ಕಾಯಕ

1983ರಲ್ಲಿ ವಿಶ್ವಕಪ್ ಗೆದ್ದ ಟೀಮ್ ಇಂಡಿಯಾದ ಸ್ಟಾರ್ ಆಲ್‌ರೌಂಡರ್, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ರೋಜರ್ ಎಂ.ಹೆಚ್ ಬಿನ್ನಿ 'ಮೈಸೂರು ಮಿತ್ರ'ನೊಂದಿಗೆ ಮುಕ್ತ ಮಾತುಕತೆ ನಡೆಸಿದ್ದಾರೆ. ಮಹಿಳಾ ಪ್ರೀಮಿಯರ್ ಲೀಗ್(ಡಬ್ಲ್ಯೂಪಿಎಲ್) ಮೊದಲ ಆವೃತ್ತಿ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದ್ದು, ಐಪಿಎಲ್‌ನಷ್ಟೇ ಜನಪ್ರಿಯತೆ ಪಡೆಯಲಿದೆ. ಈ ಮೂಲಕ ಭಾರತೀಯ ಕ್ರಿಕೆಟ್ ಆಟಗಾರರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವಂತೆ ವೇದಿಕೆ ಸಿದ್ಧಪಡಿಸಲಾಗುತ್ತಿದೆ ಎಂಬ ವಿಶ್ವಾಸದ ಮಾತುಗಳ ಜೊತೆಗೆ ತಮ್ಮ ಮುಂದಿನ ಯೋಜನೆಗಳ ಮಾಹಿತಿಯನ್ನೂ ನೀಡಿದ್ದಾರೆ....

ಮೈಸೂರು ಮಿತ್ರ:* *ಸಾಂಸ್ಕೃತಿಕ ನಗರಿ ಮೈಸೂರಿನ ಬಗ್ಗೆ ತಮ್ಮ ಅಭಿಪ್ರಾಯವೇನು?

ರೋಜರ್ ಬಿನ್ನಿ: ನನ್ನ ಕ್ರೀಡಾ ಜೀವನ ಆರಂಭವಾಗಿದ್ದೆ ಮೈಸೂರಿನಲ್ಲಿ. ನಾಡಹಬ್ಬ ದಸರಾ ಕ್ರೀಡಾಕೂಟದಲ್ಲಿ ಜಾವಲಿನ್ ಹಾಗೂ ಗುಂಡು ಎಸೆತ ಕ್ರೀಡೆಗಳಲ್ಲಿ ಭಾಗವಹಿಸಿದ್ದೆ. ಮೈಸೂರು ಸದಾ ನನ್ನ ಹೃದಯದಲ್ಲಿದ್ದು, ನನ್ನ ಮುಂದಿನ ಜೀವನವನ್ನು ಇಲ್ಲಿಯೇ ಕಳೆಯಲು ಇಚ್ಛಿಸಿದ್ದೇನೆ.

ಮಿತ್ರ:* *ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಿದ್ದ ಉದ್ದೇಶ?


ಬಿನ್ನಿ: ಉದ್ದೇಶವೇನು ಇಲ್ಲ. ಪ್ರಕೃತಿ ನಡುವೆ ವಿಹರಿಸಲು ಯಾರಿಗೆ ತಾನೇ ಇಷ್ಟವಿಲ್ಲ. ಅದರಂತೆ ನನಗೂ ಪರಿಸರದ ನಡುವೆ ಇರಲು ಬಹಳ ಇಷ್ಟ. ಹಾಗೆಯೇ ಪ್ರತಿಯೊಬ್ಬರು ಕಾಡಿನ ಸಂರಕ್ಷಣೆ ಬಗ್ಗೆ ಯೋಚನೆ ಮಾಡಬೇಕು. ಕಾಡು ಸಂರಕ್ಷಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮುಖ್ಯವಾಗಿದೆ.

ಮಿತ್ರ:* *ಪ್ರಾಜೆಕ್ಟ್ ಟೈಗರ್‌ಗೆ 50 ವರ್ಷಗಳಾಯ್ತು. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು?

ಬಿನ್ನಿ: ಇದೊಂದು ಒಳ್ಳೆಯ ಯೋಜನೆಯಾಗಿದೆ. 50 ವರ್ಷಗಳು ಪೂರೈಸಿರುವುದಕ್ಕೆ ವೈಯಕ್ತಿಕವಾಗಿ ಖುಷಿಯಾಗಿದೆ. ಇಂತಹ ಯೋಜನೆಗಳ ಮೂಲಕ ಕಾಡುಗಳನ್ನು, ವನ್ಯಜೀವಿಗಳನ್ನು ಸಂರಕ್ಷಣೆ ಮಾಡುವ ಕಾರ್ಯ ನಿರಂತರವಾಗಿ ನಡೆಯುತ್ತಿರಬೇಕು. ಇದೊಂದು ನಿಜಕ್ಕೂ ಒಳ್ಳೆಯ ಕೆಲಸ.

ಮಿತ್ರ:* *ಮಹಿಳಾ ಕ್ರಿಕೆಟ್ ಆರಂಭವಾಗಿ 50 ವರ್ಷಗಳಾಗಿದ್ದು, ಈ ಹಿನ್ನೆಲೆ ಹೊಸ ಯೋಜನೆಗಳಿವೆಯೇ?

ಬಿನ್ನಿ: ಇಂಗ್ಲೆಂಡಿನಲ್ಲಿ ಮೊದಲು ಮಹಿಳಾ ಕ್ರಿಕೆಟ್ ಆರಂಭವಾಯಿತು. ನಂತರ ಉಳಿದ ದೇಶಗಳಲ್ಲಿಯೂ ಆರಂಭಿಸಲಾಯಿತು. ದೇಶದಲ್ಲಿ ಮಹಿಳಾ ಕ್ರಿಕೆಟ್ ಆರಂಭವಾಗಿ 50 ವರ್ಷಗಳು ಪೂರ್ಣಗೊಂಡಿದೆ. ಹಲವು ಮಹಿಳಾ ಕ್ರಿಕೆಟರ್‌ಗಳು ತಮ್ಮದೆ ಅಮೂಲ್ಯ ಕೊಡುಗೆ ನೀಡಿದ್ದಾರೆ. 50 ವರ್ಷಗಳ ಸಂಭ್ರಮಾಚರಣೆ ಅಂಗವಾಗಿ ಹಲವು ಯೋಜನೆಗಳನ್ನು ರೂಪಿಸಲಾಗುತ್ತಿದೆ.



ಮಿತ್ರ:* *ಭಾರತೀಯ ಕ್ರಿಕೆಟ್‌ನಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಲಾಗುತ್ತಿದೆಯೇ?

ಬಿನ್ನಿ: ಭಾರತೀಯ ಕ್ರಿಕೆಟ್‌ನಲ್ಲಿ ಪುರುಷರಷ್ಟೇ ಮಹಿಳೆಯರಿಗೂ ಅವಕಾಶ ನೀಡುವ ನಿಟ್ಟಿನಲ್ಲಿ ಪಂದ್ಯಾವಳಿಗಳನ್ನು ಆಯೋಜನೆ ಮಾಡಲಾಗುತ್ತಿದೆ. ಇದರ ಮೊದಲ ಹಂತವಾಗಿ ಮಹಿಳಾ ಪ್ರೀಮಿಯರ್ ಲೀಗ್(ಡಬ್ಲ್ಯೂಎಲ್) ಆರಂಭಿಸಿದ್ದೇವೆ. ಹೆಚ್ಚೆಚ್ಚು ಪಂದ್ಯಗಳಲ್ಲಿ ಆಡಲು ಅವಕಾಶ ಮಾಡಿಕೊಡುವ ಪ್ರಯತ್ನ ನಡೆಯುತ್ತಲೇ ಇರುತ್ತದೆ.

ಮಿತ್ರ:* *ಕ್ರಿಕೆಟ್ ಮ್ಯೂಸಿಯಂಗಳ ಸ್ಥಾಪನೆ ಮಾಡುವ ಉದ್ದೇಶವಿದೆಯೇ?

ಬಿನ್ನಿ: ಮೊಟೆರಾ ಕ್ರಿಕೆಟ್ ಸ್ಟೇಡಿಯಂ, ಹೈದರಾಬಾದ್, ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಸೇರಿದಂತೆ ದೇಶದಲ್ಲಿರುವ ಹಲವು ಕ್ರಿಕೆಟ್ ಸ್ಟೇಡಿಯಂಗಳಲ್ಲಿ ಮ್ಯೂಸಿಯಂಗಳಿದ್ದು, ಮುಂದಿನ ದಿನಗಳಲ್ಲಿ ಮ್ಯೂಸಿಯಂ ಸಂಖ್ಯೆ ಹೆಚ್ಚಿಸುವ ಕುರಿತು ಚಿಂತನೆ ನಡೆಸಲಾಗುವುದು. ಭಾರತೀಯ ಕ್ರಿಕೆಟ್ ಇನ್ನಷ್ಟು ಎತ್ತರಕ್ಕೆ ಬೆಳೆಸುವ ನಿಟ್ಟಿನಲ್ಲಿ ಹತ್ತು-ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ನಾಥನ್ ಎಲ್ಲಿಸ್, ಅರ್ಶ್‌ದೀಪ್ ಮಾರಕ ಬೌಲಿಂಗ್; ರಾಜಸ್ಥಾನ ವಿರುದ್ಧ ಪಂಜಾಬ್‌ಗೆ ರೋಚಕ ಗೆಲುವು




ಗುವಾಹಟಿ: ಇಲ್ಲಿನ ಬರ್ಸಾಪರಾ ಸ್ಟೇಡಿಯಂನಲ್ಲಿ ನಡೆದ 2023ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ 8ನೇ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ಪಂಜಾಬ್ ಕಿಂಗ್ಸ್ ರೋಚಕ ಗೆಲುವು ದಾಖಲಿಸಿದೆ. ಪಂಜಾಬ್ ಕಿಂಗ್ಸ್ ತಂಡ ನೀಡಿದ್ದ 198 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡ 7 ವಿಕೆಟ್ ಕಳೆದುಕೊಂಡು 192 ರನ್‌ಗಳನ್ನು ಗಳಿಸಿ ಕೇವಲ 5 ರನ್‌ಗಳಿಂದ ಸೋಲೊಪ್ಪಿಕೊಂಡಿತು.

ರಾಜಸ್ಥಾನ ರಾಯಲ್ಸ್ ತಂಡದ ಪರ ಬ್ಯಾಟಿಂಗ್ ಆರಂಭಿಸಿದ ಯಶಸ್ವಿ ಜೈಸ್ವಾಲ್ ಮತ್ತು ರವಿಚಂದ್ರನ್ ಅಶ್ವಿನ್ ಅಧಿಕ ರನ್ ಜೊತೆಯಾಟ ನೀಡುವಲ್ಲಿ ವಿಫಲರಾದರು. ರವಿಚಂದ್ರನ್ ಅಶ್ವಿನ್ ಸೊನ್ನೆಗೆ ಔಟಾದರೆ, ಯಶಸ್ವಿ ಜೈಸ್ವಾಲ್ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಜೋಸ್ ಬಟ್ಲರ್ 11 ಎಸೆತಗಳಲ್ಲಿ 19 ರನ್ ಗಳಿಸಿದರು. ಇನ್ನು ನಾಯಕ ಸಂಜು ಸ್ಯಾಮ್ಸನ್ ಮಾತ್ರ 25 ಎಸೆತಗಳಲ್ಲಿ 1 ಸಿಕ್ಸರ್ ಮತ್ತು 5 ಬೌಂಡರಿಗಳ ಸಮೇತ 42 ರನ್ ಬಾರಿಸಿ ತಂಡದ ಪರ ಹೆಚ್ಚಿನ ಮೊತ್ತ ಗಳಿಸಿದರು. ದೇವದತ್ ಪಡಿಕ್ಕಲ್ 21 ರನ್, ರಿಯಾನ್ ಪರಾಗ್ 20 ರನ್ ಗಳಿಸಿ ಪೆವಿಲಿಯನ್ ದಾರಿ ಹಿಡಿದರು. ಈ ವೇಳೆ ಜಯದ ಆಸೆ ಕೈಬಿಟ್ಟಿದ್ದ ರಾಜಸ್ಥಾನ ರಾಯಲ್ಸ್ ತಂಡವನ್ನು ಶಿಮ್ರಾನ್ ಹೆಟ್ಮೆಯರ್ ಮತ್ತು ಧ್ರುವ ಜುರೆಲ್ ಜೋಡಿ ಸ್ಫೋಟಕ ಬ್ಯಾಟಿಂಗ್ ಮೂಲಕ ಗೆಲುವಿನ ಸಮೀಪ ತಂದು ನಿಲ್ಲಿಸಿದರು. ಆದರೆ ಕೊನೆಯ ಓವರ್‌ನಲ್ಲಿ 16 ರನ್‌ಗಳು ಬೇಕಿದ್ದಾಗ ಶಿಮ್ರಾನ್ ಹೆಟ್ಮೆಯರ್ ಔಟಾಗುವುದರೊಂದಿಗೆ ನಿರಾಸೆ ಅನುಭವಿಸಿತು.

ಶಿಮ್ರಾನ್ ಹೆಟ್ಮೆಯರ್ 18 ಎಸೆತಗಳಲ್ಲಿ 1 ಬೌಂಡರಿ ಮತ್ತು 3 ಸಿಕ್ಸರ್‌ಗಳ ನೆರವಿನಿಂದ 36 ರನ್ ಬಾರಿಸಿದರೆ, ಧ್ರುವ ಜುರೆಲ್ 15 ಎಸೆತಗಳಲ್ಲಿ 3 ಬೌಂಡರಿ ಮತ್ತು 2 ಸಿಕ್ಸರ್‌ಗಳಿಂದ 32 ರನ್ ಗಳಿಸಿದರು. ಇನ್ನು ಬೌಲಿಂಗ್‌ನಲ್ಲಿ ಪಂಜಾಬ್ ಕಿಂಗ್ಸ್ ಪರ ಮಾರಕ ಬೌಲಿಂಗ್ ಪ್ರದರ್ಶನ ನೀಡಿದ ನಾಥನ್ ಎಲ್ಲಿಸ್ 4 ಓವರ್‌ಗಳಲ್ಲಿ 30 ರನ್ ನೀಡಿ ಪ್ರಮುಖ 4 ವಿಕೆಟ್ ಪಡೆದು ಮಿಂಚಿದರು. ಇನ್ನು ಅರ್ಶ್‌ದೀಪ್ ಸಿಂಗ್ 4 ಓವರ್‌ಗಳಲ್ಲಿ 47 ರನ್ ನೀಡಿ 2 ವಿಕೆಟ್ ಪಡೆದರು.

ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶಿಖರ್ ಧವನ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 197 ರನ್ ಗಳಿಸಿತು.

ಪಂಜಾಬ್ ಕಿಂಗ್ಸ್ ತಂಡದ ಪರ ಬ್ಯಾಟಿಂಗ್ ಆರಂಭಿಸಿದ ನಾಯಕ ಶಿಖರ್ ಧವನ್ ಮತ್ತು ಪ್ರಭ್‌ಸಿಮ್ರಾನ್ ಸಿಂಗ್ ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್‌ಗೆ 9.1 ಓವರ್‌ಗಳಲ್ಲಿ 90 ರನ್‌ಗಳ ಜೊತೆಯಾಟವಾಡಿದರು. ಪ್ರಭ್‌ಸಿಮ್ರಾನ್ ಸಿಂಗ್ 34 ಎಸೆತಗಳಲ್ಲಿ 7 ಬೌಂಡರಿ ಮತ್ತು 3 ಸಿಕ್ಸರ್‌ಗಳ ನೆರವಿನಿಂದ 60 ರನ್ ಬಾರಿಸಿ ಔಟಾದರು. ನಂತರ ಬಂದ ಭಾನುಕ ರಾಜಪಕ್ಸ 1 ರನ್ ಗಳಿಸಿ ಆಡುತ್ತಿದ್ದಾಗ ಗಾಯಗೊಂಡು ನಿವೃತ್ತಿ ಪಡೆದರು. ಬಳಿಕ ಕ್ರೀಸ್‌ಗಿಳಿದ ಜಿತೇಶ್ ಶರ್ಮಾ 16 ಎಸೆತಗಳಲ್ಲಿ 2 ಬೌಂಡರಿ ಮತ್ತು 1 ಸಿಕ್ಸರ್ ಸಮೇತ 27 ರನ್ ಗಳಿಸಿದರು. ಶಾರೂಖ್ ಖಾನ್ 10 ಎಸೆತಗಳಲ್ಲಿ 11 ರನ್ ಗಳಿಸಿ ಕೊನೆಯ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಆರಂಭಿಕ ಬ್ಯಾಟ್ಸ್‌ಮನ್ ಹಾಗೂ ನಾಯಕ ಶಿಖರ್ ಧವನ್ 56 ಎಸೆತಗಳಲ್ಲಿ 9 ಬೌಂಡರಿ ಮತ್ತು 3 ಸಿಕ್ಸರ್ ಸಹಾಯದಿಂದ 86 ರನ್ ಬಾರಿಸಿ ತಂಡದ ಮೊತ್ತವನ್ನು 190ರ ಗಡಿ ದಾಟಿಸುವಲ್ಲಿ ನೆರವಾದರು. ಇನ್ನು ಬೌಲಿಂಗ್‌ನಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಪರ ಜೇಸನ್ ಹೋಲ್ಡರ್ 4 ಓವರ್‌ಗಳಲ್ಲಿ 29 ರನ್ ನೀಡಿ 2 ವಿಕೆಟ್ ಪಡೆದರೆ, ರವಿಚಂದ್ರನ್ ಅಶ್ವಿನ್ 4 ಓವರ್‌ಗಳಲ್ಲಿ 25 ರನ್ ನೀಡಿ 1 ವಿಕೆಟ್ ಪಡೆದರು ಮತ್ತು ಯಜ್ವೇಂದ್ರ ಚಾಹಲ್ 4 ಓವರ್‌ಗಳಲ್ಲಿ 29 ರನ್ ನೀಡಿ 50 ರನ್ ನೀಡಿ 1 ವಿಕೆಟ್ ಪಡೆದರು.



ಮತದಾನದ ಮಹತ್ವ ಸಾರಲು ಸೆಲ್ಫಿ ಪಾಯಿಂಟ್



ಮೈಸೂರು, ಏ.5(ಎಂಟಿವೈ)–ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಯುವಜನ ಸೇರಿದಂತೆ ಎಲ್ಲಾ ವಯೋಮಾನದ ಮತದಾರರಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲು ಸೆಲ್ಫಿ ಪಾಯಿಂಟ್ ಆಕರ್ಷಣೆಯೂ ಉಂಟು. ಮೈಸೂರು ಮಹಾನಗರ ಪಾಲಿಕೆ ಸ್ವೀಪ್ ವತಿಯಿಂದ ಮೈಸೂರಿನ ಹಾರ್ಡಿಂಗ್ ವೃತ್ತದಲ್ಲಿ ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದ್ದು, ಈ ಮೂಲಕ ಮತದಾನದ ಮಹತ್ವ ಸಾರಲಾಗುತ್ತಿದೆ. ಹಾರ್ಡಿಂಗ್ ವೃತ್ತದ ಮೂಲಕ ಸಾವಿರಾರು ಮಂದಿ ಪ್ರತಿದಿನ ಸಂಚರಿಸಲಿದ್ದು, ವಾಹನ ಹಾಗೂ ಜನದಟ್ಟಣೆಯಿರುವ ಸ್ಥಳವನ್ನೇ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಸೆಲ್ಫಿ ಪಾಯಿಂಟ್‌ನಲ್ಲಿ 'ಮತದಾನಕ್ಕಿಂತ ಬೇರೊಂದಿಲ್ಲ', 'ನಾನು ಖಚಿತವಾಗಿ ಮತದಾನ ಮಾಡುವೆ' ಎಂಬ ಘೋಷ ವಾಕ್ಯ ಬರೆಯಲಾಗಿದೆ. ಇದರಿಂದ ಮತದಾನದಿಂದ ದೂರವುಳಿಯಲು ನಿರ್ಧರಿಸಿದ್ದವರು ಚುನಾವಣೆ ದಿನದಂದು ಮತದಾನಕ್ಕೆ ಪ್ರೇರಣೆ ನೀಡಿದಂತಾಗುತ್ತದೆ.


ಇವಿಎಂಗಳ ಸುರಕ್ಷತೆಗೆ ಮೈಸೂರು ಜಿಲ್ಲೆಯಲ್ಲಿ 11 ಸ್ಟ್ರಾಂಗ್ ರೂಂ ರೆಡಿ

ನಾಳೆಯಿಂದ ಚುನಾವಣಾಧಿಕಾರಿಗಳಿಗೆ ಇವಿಎಂಗಳ ಹಸ್ತಾಂತರ

ಮೈಸೂರು, ಏ.5(ಆರ್‌ಕೆ)–ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಹಂಚಿಕೆಯಾಗಿರುವ ವಿದ್ಯುನ್ಮಾನ ಮತಯಂತ್ರ (ಇವಿಎಂ) ಹಾಗೂ ವಿವಿ ಪ್ಯಾಟ್ (Voter Verification Paper Audit Trail)ಗಳನ್ನು ಸುರಕ್ಷಿತವಾಗಿಡಲು ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ 11 ಸ್ಟ್ರಾಂಗ್ ರೂಂಗಳ ವ್ಯವಸ್ಥೆ ಮಾಡಲಾಗಿದೆ.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಿಗೆ ಒಂದೊಂದು ಸ್ಟ್ರಾಂಗ್ ರೂಂ ಅನ್ನು ಸಜ್ಜುಗೊಳಿಸಲಾಗಿದೆ.

ಏ.7ರಿಂದ ಮೈಸೂರಿನ ಸಿದ್ಧಾರ್ಥ ಬಡಾವಣೆಯ ಜಿಲ್ಲಾ ಕಚೇರಿಗಳ ಸಂಕೀರ್ಣದ ಬಳಿಯ ದಾಸ್ತಾನಿನಲ್ಲಿರುವ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಆಯಾ ಕ್ಷೇತ್ರದ ಚುನಾವಣಾಧಿಕಾರಿ (RO)ಗಳಿಗೆ ರಾಜಕೀಯ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಹಸ್ತಾಂತರಿಸಲಾಗುವುದು. ಎಲ್ಲಾ ಸ್ಟ್ರಾಂಗ್ ರೂಂಗಳಿಗೆ ಮತಗಟ್ಟೆ ವಾರು ನಂಬರ್‌ಗಳ ಸ್ಟಿಕ್ಕರ್ ಅಂಟಿಸಲಾಗಿದ್ದು, ಕಿಟಕಿಗಳನ್ನು ಪ್ಲೈವುಡ್ ಶೀಟ್‌ನಿಂದ ಬಂದ್ ಮಾಡಿ ಸಿಸಿ ಕ್ಯಾಮರಾ, ವಿದ್ಯುತ್, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲ ಸೌಕರ್ಯ ಒದಗಿಸಿ ಭಾರೀ ಭದ್ರತೆ ಒದಗಿಸಲಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮೈಸೂರಿನ ಬೇಡನ್ ಪೋವೆಲ್ ಶಾಲೆಯಲ್ಲಿ, ಕೃಷ್ಣರಾಜಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ, ನರಸಿಂಹರಾಜಗೆ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ, ಚಾಮುಂಡೇಶ್ವರಿಗೆ ಜೆಎಲ್‌ಬಿ ರಸ್ತೆಯ ಮಹಾರಾಣಿ ಕಲಾ ಕಾಲೇಜಿನಲ್ಲಿ ಸ್ಟ್ರಾಂಗ್ ರೂಂಗಳನ್ನು ಸಜ್ಜುಗೊಳಿಸಲಾಗಿದೆ. ಪಿರಿಯಾಪಟ್ಟಣ, ಕೆ.ಆರ್.ನಗರ, ನಂಜನಗೂಡು, ಹೆಚ್.ಡಿ. ಕೋಟೆ ಕ್ಷೇತ್ರಗಳಿಗೆ ಆಯಾ ತಾಲೂಕು ಕಚೇರಿಗಳಲ್ಲಿ, ಹುಣಸೂರಿಗೆ ಅಲ್ಲಿನ ಸೆಂಟ್ ಜೋಸೆಫ್ ಶಾಲೆಯಲ್ಲಿ, ತಿ.ನರಸೀಪುರಕ್ಕೆ ವಿದ್ಯೋದಯ ಶಾಲೆಯಲ್ಲಿ ಹಾಗೂ ವರುಣಾ ಕ್ಷೇತ್ರಕ್ಕೆ ನಂಜನಗೂಡು ತಾಲೂಕಿನ ದೇವೀರಮ್ಮನಹಳ್ಳಿಯ ಜೆಎಸ್‌ಎಸ್ ಶಾಲೆಯಲ್ಲಿ ಸ್ಟ್ರಾಂಗ್ ರೂಂ ಸಿದ್ಧಪಡಿಸಲಾಗಿದೆ. ತಮ್ಮ ವಶಕ್ಕೆ ಪಡೆದ ಕ್ಷೇತ್ರದ ಇವಿಎಂ, ವಿವಿ ಪ್ಯಾಟ್‌ಗಳನ್ನು ಸ್ಟ್ರಾಂಗ್ ರೂಂಗಳಲ್ಲಿ ಭದ್ರವಾಗಿರಿಸಿ ಚುನಾವಣಾಧಿಕಾರಿಗಳು, ಮೇ 9ರಂದು ಅಲ್ಲಿಂದಲೇ ಮಸ್ಟರಿಂಗ್ ಪ್ರಕ್ರಿಯೆ ನಡೆಸುವರು. ಮೇ 10ರಂದು ಮತದಾನ ಮುಗಿದ ಬಳಿಕ ಸೀಲ್ ಮಾಡಿದ ಮತಯಂತ್ರ ಹಾಗೂ ವಿವಿ ಪ್ಯಾಟ್‌ಗಳನ್ನು ತಂದು ಸ್ಟ್ರಾಂಗ್ ರೂಂನಲ್ಲಿಟ್ಟು ಅಗತ್ಯ ಮಾಹಿತಿಗಳನ್ನು ಸಿದ್ಧಗೊಳಿಸಿದ ನಂತರ ಅದೇ ದಿನ ರಾತ್ರಿ ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ವಾಣಿಜ್ಯ ವ್ಯವಹಾರ ಕಾಲೇಜಿನ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂಗೆ ತಂದು ಒಪ್ಪಿಸುವರು.ಮೇ 13ರಂದು ಬೆಳಗ್ಗೆ 8 ಗಂಟೆಗೆ ಚುನಾವಣಾ ವೀಕ್ಷಕರು, ಅಭ್ಯರ್ಥಿಗಳ ಸಮ್ಮುಖದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಸ್ಟ್ರಾಂಗ್ ರೂಂ ತೆರೆದು ಮತ ಎಣಿಕೆ ಪ್ರಕ್ರಿಯೆ ಆರಂಭಿಸುವರು. ಮಹಾರಾಣಿ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಸ್ಟ್ರಾಂಗ್ ರೂಂ ಅನ್ನು ಸಿದ್ಧಗೊಳಿಸಲಾಗಿದ್ದು, ದಿನದ 24 ಗಂಟೆಯೂ ಶಸ್ತ್ರಸಜ್ಜಿತ ಪೊಲೀಸರನ್ನು ನಿಯೋಜಿಸಲಾಗಿದೆ.





ಚಾಮರಾಜ ವಿಧಾನಸಭಾ ಕ್ಷೇತ್ರದ ಇವಿಎಂಗಳನ್ನು ಸುರಕ್ಷಿತವಾಗಿರಿಸಲು ಮೈಸೂರಿನ ಬೇಡನ್ ಪೋವೆಲ್ ಶಾಲೆಯಲ್ಲಿ ಸಿದ್ಧಗೊಂಡಿರುವ ಸ್ಟ್ರಾಂಗ್ ರೂಂ (ಎಡಚಿತ್ರ). ಬೂತ್‌ವಾರು ಸಂಖ್ಯೆಗಳ ಸ್ಟಿಕ್ಕರ್ ಅಂಟಿಸುತ್ತಿರುವ ಸಿಬ್ಬಂದಿಯನ್ನು ಬಲಚಿತ್ರದಲ್ಲಿ ಕಾಣಬಹುದು.

ಕೃಷ್ಣರಾಜನಗರದ ಚೆಕ್‌ಪೋಸ್ಟ್, ಆಯ್ದ ಮತಗಟ್ಟೆ ಪರಿಶೀಲನೆ

ಮೈಸೂರು, ಏ.5– ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ. ಗಾಯಿತ್ರಿ ಅವರು, ಸ್ಥಿರ ಕಣ್ಗಾವಲು ತಂಡ (SST) ಹಾಗೂ ಕ್ಷಿಪ್ರ ಕ್ರಿಯಾ ತಂಡ (FST) ಅವರೊಂದಿಗೆ ಸಭೆ ನಡೆಸಿದರು. ಕೆ.ಆರ್. ನಗರ ತಾಲೂಕಿನ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ನೀತಿ ಸಂಹಿತೆಯ ಸದಸ್ಯರು ಹಾಗೂ ಪ್ರಾಚ್ಯ ವಸ್ತು ಸಂಗ್ರಹಾಲಯದ ಆಯುಕ್ತರೂ ಆದ ದೇವರಾಜ್ ಚುನಾವಣಾ ನೀತಿ ಸಂಹಿತೆ ಕುರಿತು ಮಾಹಿತಿ ಹಂಚಿಕೊಂಡರು. ಸಭೆ ಆರಂಭಕ್ಕೂ ಮುನ್ನ ನೀತಿ ಸಂಹಿತೆ ನೋಡಲ್ ಅಧಿಕಾರಿ ಸಿಇಓ ಅವರು ಚೆಕ್‌ಪೋಸ್ಟ್ ಹಾಗೂ ತಾಲೂಕಿನಲ್ಲಿರುವ ಆಯ್ದ ಮತಗಟ್ಟೆಗಳನ್ನು ಪರಿಶೀಲಿಸಿದರು.

ಸಭೆಯಲ್ಲಿ ಎಸ್.ಎಲ್.ಎ ಅಧಿಕಾರಿ ಸುಪ್ರೀಂ ಬನಾಗರ್ ಬಿ., ಕಬಿನಿ ಪ್ರಾಜೆಕ್ಟ್, ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಕೆ ಸತೀಶ್, ಸಹಾಯಕ ಯೋಜನಾಧಿಕಾರಿ ಸುಬ್ರಹ್ಮಣ್ಯ ಶರ್ಮ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ಬಾಬು ಜಗಜೀವನರಾಂ ಜಯಂತಿ ಆಚರಣೆ

ಡಾ. ಬಾಬೂಜಿ ಅವರ ಕೊಡುಗೆ ಕೊಂಡಾಡಿದ ಜನ ನಾಯಕರು



ತಿ.ನರಸೀಪುರ.ಏ.5– ಹಸಿರುಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂರವರ 116 ನೇ ಜಯಂತಿ ಅಂಗವಾಗಿ ಪಟ್ಟಣದ ಪುರಸಭೆ ವ್ಯಾಪ್ತಿಯ ಬೈರಾಪುರ ಗ್ರಾಮದ ಪ್ರವೇಶ ದ್ವಾರದಲ್ಲಿರುವ ಡಾ. ಬಾಬು ಜಗಜೀವನ ರಾಂ ಪುತ್ಥಳಿಗೆ ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶಾಸಕ ಎಂ.ಅಶ್ವಿನ್ ಕುಮಾರ್ ಹಾಗೂ ಕ್ಷೇತ್ರದ ಬಿಜೆಪಿ ಪಕ್ಷದ ಸಂಭಾವ್ಯ ಅಭ್ಯರ್ಥಿ ಡಾ.ರೇವಣ್ಣ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮತ್ತವರ ಕುಟುಂಬ ವರ್ಗದವರು ತಮ್ಮ ಸ್ವಂತ ಹಣದಲ್ಲಿ ಕಳೆದೊಂದು ವರ್ಷದ ಹಿಂದೆ ನಿರ್ಮಿಸಿದ ಬಾಬೂಜಿ ಪುತ್ಥಳಿಗೆ ಜಯಂತಿ ಅಂಗವಾಗಿ ಹೂವಿನ ಅಲಂಕಾರ ಮಾಡಿ ವಿಜೃಂಭಣೆಯಿಂದ ಜಯಂತಿ ಆಚರಿಸಲಾಯಿತು.

ಬಾಬೂಜಿ ಪುತ್ಥಳಿಗೆ ಮಾಲಾರ್ಪಣೆ ಸಲ್ಲಿಸಿ ಮಾತನಾಡಿದ ಶಾಸಕ ಯತೀಂದ್ರ ಸಿದ್ದರಾಮಯ್ಯ, ದೇಶಕ್ಕೆ ಹಸಿರು ಕ್ರಾಂತಿಯ ಮೂಲಕ ಆಹಾರ ಭದ್ರತೆ ಒದಗಿಸಿದ ಮಾಜಿ ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ ಆದರ್ಶ ಹಾಗೂ ಹೋರಾಟದ ಗುಣವನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ದೇಶವು ಬರಗಾಲ ಸ್ಥಿತಿಯಲ್ಲಿದ್ದಾಗ ಹಸಿರು ಕ್ರಾಂತಿಯ ಹಲವು ಯೋಜನೆಗಳನ್ನು ರೂಪಿಸಿ, ಕಷ್ಟಕಾಲದಲ್ಲೂ ಸತತ ಸಾಧನೆ ಮೂಲಕ ಉತ್ತಮ ಕೆಲಸ ಮಾಡಿತೋರಿಸಬಹುದೆಂದು ಸಾಬೀತುಪಡಿಸಿದ ಉತ್ತಮ ಮಾರ್ಗದರ್ಶಿ ಡಾ.ಬಾಬೂಜಿಯವರು ಎಂದು ಬಣ್ಣಿಸಿದರು.

ಮತ್ತೊಬ್ಬ ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಜಗಜೀವನರಾಂರವರು ಈ ದೇಶದ ಶೋಷಿತ ವರ್ಗದ ಜನರ ಪ್ರತಿನಿಧಿಯಾಗಿ ಗುರುತಿಸಿಕೊಂಡಿದ್ದರು, ಕೇಂದ್ರ ಸರ್ಕಾರದಲ್ಲಿ ಇವರು ರಕ್ಷಣಾ ಇಲಾಖೆ, ಕೃಷಿ ಇಲಾಖೆ ಕಾರ್ಮಿಕ ಇಲಾಖೆ ಮಂತ್ರಿಗಳಾಗಿ ಕೆಲಸ ಮಾಡುವ ಮೂಲಕ ಕೈಗಾರಿಕೆಗಳ ಕಾರ್ಮಿಕರು ಹಾಗೂ ಕೃಷಿ ಕಾರ್ಮಿಕರ ಪರವಾಗಿ ಕಾನೂನುಗಳನ್ನು ರೂಪಿಸಿ, ಹಸಿರು ಕ್ರಾಂತಿಯನ್ನು ಮಾಡುವ ಮೂಲಕ ಈ ದೇಶಕ್ಕೆ ಮಾದರಿಯಾಗಿದ್ದರು ಎಂಬುದಾಗಿ ಹೇಳಿದರು. ಹಾಗಾಗಿ ನಾವೆಲ್ಲರೂ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವ ಜೊತೆಗೆ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಶ್ರಮಿಸಬೇಕಿದೆ ಎಂದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಜನಸಂಖ್ಯೆ 35 ಕೋಟಿಯಿತ್ತು. ಆಗ ಜನರಿಗೆ ಆಹಾರ ಸಮಸ್ಯೆ ತೀವ್ರವಾಗಿತ್ತು ಈಗ 138 ಕೋಟಿ ಜನಸಂಖ್ಯೆಯಿದ್ದರೂ ಜಗಜೀವನ ಅವರ ಶ್ರಮದ ಫಲವಾಗಿ ಹಸಿವಿನ ಸಮಸ್ಯೆ ನೀಗಿದೆ. ಜಗ ಜೀವನರಾವ್ ಕೃಷಿ ಸಚಿವರಾಗಿ ವಿದೇಶದಲ್ಲಿನ ಕೃಷಿಯ ಹೊಸ ತಂತ್ರಜ್ಞಾನವನ್ನು ದೇಶದಲ್ಲಿ ತಂದು ಹಸಿರುಕ್ರಾಂತಿ ಸೃಷ್ಟಿಸಿದರು. ಅವರು ಸೃಷ್ಟಿಸಿದ ಹಸಿರುಕ್ರಾಂತಿ ಯಿಂದ ದೇಶದಲ್ಲಿ ಬಡವರಿಗೆ ಆಹಾರದ ಕೊರತೆ ದೂರವಾಯಿತು. ಹಸಿರುಕ್ರಾಂತಿಯ ಹರಿಕಾರ ಬಾಬೂಜಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೀವನಕ್ಕೂ ಆದ್ಯತೆ ಕೊಟ್ಟಿದ್ದರಿಂದ ಇಂದು ಸಮಾಜದಲ್ಲಿ ಆಹಾರ ಪದಾರ್ಥಗಳ ಕೊರತೆಯಿಲ್ಲದಂತಾಗಿದೆ ಎಂದು ತಿಳಿಸಿದರು.

ಟಿ.ನರಸೀಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಡಾ. ರೇವಣ್ಣ ಅವರು ಬಾಬು ಜಗಜೀವನ ರಾಮ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭಾ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಮಾಜಿ ಉಪಾಧ್ಯಕ್ಷೆ ಪ್ರೇಮಾ ಮರಯ್ಯ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಮಾಜಿ ಅಧ್ಯಕ್ಷ ವಜ್ರೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ತಾಪಂ, ಗ್ರಾಪಂ ಅಧ್ಯಕ್ಷ ಆನಂದ್, ಮಾಜಿ ಅಧ್ಯಕ್ಷ ಎ.ಜಿ.ವೆಂಕಟೇಶ್, ಪಿ.ಪುಟ್ಟರಾಜು, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ವೈದ್ಯಕೀಯ ವಿಭಾಗದ ಜಿಲ್ಲಾಧ್ಯಕ್ಷ ಡಾ.ಪ್ರದೀಪ್, ಮುಖಂಡರಾದ ದಿವಾಕರ್, ಮಹೇಂದ್ರ, ಗಣೇಶ್ ಮಿಥುನ್, ನಾಗರತ್ನಮ್ಮ, ಚೌಹಳ್ಳಿ ಮಲ್ಲೇಶ್, ಬಾಬು ಜಗಜೀವನ ರಾಂ ಸಂಘದ ಮಾಜಿ ಅಧ್ಯಕ್ಷ ಶಂಕರ್, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ, ಸಿ.ಬಿ. ಹುಂಡಿ ಚಿನ್ನಸ್ವಾಮಿ, ಎಂ ಕೆ ಅಡುಗೆ ಗ್ರೂಪ್ ಕುಮಾರ್, ರಮೇಶ್ ಮತ್ತಿತರರಿದ್ದರು.

ನನಗೆ ಮತ್ತೊಮ್ಮೆ ಆಶೀರ್ವಾದ ಮಾಡಿ: ಹರ್ಷವರ್ಧನ್



ಮಲ್ಕುಂಡಿ ಏ.5– ನನ್ನ 5 ವರ್ಷ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಕೆಲಸ ನೋಡಿ ನನಗೆ ಅನ್ಯಾಯ ಮಾಡದೆ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಿ ಎಂದು ಬಿಜೆಪಿ ಅಭ್ಯರ್ಥಿ ಬಿ.ಹರ್ಷವರ್ಧನ್ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಕಣೆನೂರು, ಜೆ.ಪಿ. ಹುಂಡಿ, ಚಂದ್ರವಾಡಿ, ನೆಲ್ಲಿತಾಳಪುರ ಗ್ರಾಮಗಳಲ್ಲಿ ಚುನಾವಣೆ ಪ್ರಚಾರ ನಡೆಸಿ ಮಾತನಾಡಿದ ಅವರು, 5 ವರ್ಷ ಆಡಳಿತ ನೀಡಿದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಉತ್ತಮ ಜನಪರ ರೈತಪರ ಯೋಜನೆಗಳನ್ನು ಜಾರಿಗೊಳಿಸಿ ಉತ್ತಮ ಆಡಳಿತ ನೀಡಿದೆ ಅದೇ ರೀತಿ ನಾನು ಕ್ಷೇತ್ರಕ್ಕೆ ಸುಮಾರು 700 ಕೋಟಿ ಅನುದಾನ ತಂದು ಕ್ಷೇತ್ರದ ಪ್ರತಿ ಗ್ರಾಮಗಳಿಗೂ ರಸ್ತೆ, ಚರಂಡಿ, ಸಮುದಾಯ ಭವನ, ಶಾಲೆಗಳ ನಿರ್ಮಾಣ, ಅಂಗನವಾಡಿ, ಶುದ್ಧ ಕುಡಿಯುವ ನೀರು, ಅಭಿವೃದ್ಧಿಪಡಿಸಿದ್ದೇನೆ. ಕ್ಷೇತ್ರ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಬೇಕಾಗಿದೆ. ಆ ದೃಷ್ಟಿಯಿಂದ ಕ್ಷೇತ್ರದ ಅಭಿವೃದ್ಧಿಗೆ ಮತ್ತೊಮ್ಮೆ ನನ್ನನ್ನು ಆಯ್ಕೆ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಗ್ರಾಪಂ ಸದಸ್ಯ ಗಂಗಧಾರ್, ನೆಲ್ಲಿತಾಳಪುರ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಕುರಿಹುಂಡಿ ಗ್ರಾಪಂ ರಮೇಶ್, ಹೆಚ್.ಎಂ. ಕೆಂಡಗಣ್ಣಪ್ಪ, ಬಸವರಾಜ್, ನವೀನ, ಚಂದ್ರು ಸೇರಿದಂತೆ ಪ್ರಮುಖರು ಹಾಜರಿದ್ದರು.

ಹೆಚ್.ಡಿ.ಕೋಟೆ ಪ್ರಗತಿಯೇ ನನಗೆ ಶ್ರೀರಕ್ಷೆ

ಕಾಶಿ ವಿಶ್ವನಾಥ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭ



ಹೆಚ್.ಡಿ.ಕೋಟೆ ಏ.5– ನಮ್ಮ ತಂದೆ ಹಾಗೂ ನನ್ನ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಜನಪರ ಆಡಳಿತ ನೀಡಿದ್ದೇವೆ ಎಂಬ ವಿಶ್ವಾಸವಿದ್ದು, ತಾಲೂಕಿನಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಜೊತೆಗೆ ಪ್ರಗತಿಯತ್ತ ಕೊಂಡೊಯ್ಯುತ್ತಿರುವುದೇ ನನಗೆ ಈ ಚುನಾವಣೆಯಲ್ಲಿ ಶ್ರೀರಕ್ಷೆಯಾಗಲಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಜಿ.ಬಿ.ಸರಗೂರು ಗ್ರಾಮದ ಕಾಶಿ ವಿಶ್ವನಾಥ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಮಾತನಾಡಿದ ಅವರು, ಈ ಹಿಂದೆ ನಮ್ಮ ತಂದೆ ದಿ:ಚಿಕ್ಕಮಾದು ಅವರು ಇದೇ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ಆರಂಭಿಸಿದರು. ನಾನು ಕೂಡ ಕಳೆದ ಚುನಾವಣೆಯಲ್ಲಿ ಪೂಜೆ ಸಲ್ಲಿಸಿ ಪ್ರಚಾರ ಆರಂಭಿಸಿದೆ ಎಂದರು.

ತಾಲೂಕಿನಲ್ಲಿ ಜನರ ನಿರೀಕ್ಷೆಯಂತೆ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇನೆ. ನನ್ನ ಐದು ವರ್ಷಗಳ ಆಡಳಿತ ಅವಧಿಯಲ್ಲಿ ಎಲ್ಲ ಗ್ರಾಮಗಳಿಗೂ ಭೇಟಿ ನೀಡಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂದೆಯೂ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಹೊಸ ಆಲೋಚನೆಗಳೊಂದಿಗೆ ಕನಸನ್ನು ಕಟ್ಟಿಕೊಂಡಿರುವೆ. ಅದಕ್ಕೆ ಜನತೆಯ ಆಶೀರ್ವಾದ ಮತ್ತು ಸಹಕಾರ ಅತ್ಯಮೂಲ್ಯವಾಗಿದೆ ಎಂದರು.

> ಯಾರು ಯಾವುದೇ ಪಕ್ಷದಿಂದ ಸ್ಪರ್ಧಿಸಿದರೂ ನನಗೆ ಯಾವುದೇ ತೊಂದರೆ ಇಲ್ಲ. ತಾಲೂಕು ಕಾಂಗ್ರೆಸ್ಸಿನ ಭದ್ರಕೋಟೆಯಾಗಿದ್ದು, ನನ್ನ ಜನಪರ ಆಡಳಿತ ನಮ್ಮ ತಂದೆಯ ಮತ್ತು ಗುರುಗಳಾದ ಆರ್.ಧ್ರುವನಾರಾಯಣ ಸಾಹೇಬರ ಮಾರ್ಗದರ್ಶನದಲ್ಲಿ ನಾನು ಬೆಳೆದು ಬಂದಿದ್ದು, ಅವರ ಶ್ರೀರಕ್ಷೆ ಹಾಗೂ ತಾಲೂಕಿನ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಹಾಗೂ ಜನರ ಆಶೀರ್ವಾದದಿಂದ ಮುಂದೆಯೂ ನಾನು ಶಾಸಕನಾಗುತ್ತೇನೆ. ಹಾಗೆಯೇ ರಾಜ್ಯದಲ್ಲಿಯು ಕೂಡ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ಸಹ ಅಷ್ಟೇ ಶತಸಿದ್ಧ.
>
> –ಅನಿಲ್ ಚಿಕ್ಕಮಾದು, ಶಾಸಕರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ವರಿಷ್ಠರು ಈಗಾಗಲೇ ತಾಲೂಕಿಗೆ ಬಂದು ನನಗೆ ಬೆಂಬಲ ಕೋರಿದ್ದಾರೆ. ಮುಂದೆಯೂ ಇವರೆಲ್ಲರ ಮಾರ್ಗದರ್ಶನದೊಂದಿಗೆ ಜನಸೇವೆ ಮಾಡಲು ಸಿದ್ದನಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಮೈಮುಲ್ ನಿರ್ದೇಶಕ ಕೆಈರೇಗೌಡ, ಮುಖಂಡರಾದ ಸತೀಶ್ ಗೌಡ, ನಟರಾಜ್, ಕೆಂಡಗಣ್ಣೇಗೌಡ, ಬೈಪಾಸ್ ಮಂಜುನಾಥ್, ಕ್ಯಾತನಹಳ್ಳಿ ನಾಗರಾಜು, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಪ್ರದೀಪ್, ಹೋಂಡಾ ನಯಾಜ್, ಸೌಮ್ಯ ಮಂಜುನಾಥ್, ಆನಂದ್ ಕೃಷ್ಣೇಗೌಡ, ರಾಜು, ಗಣೇಶ್, ಅನುರಾಜ್, ಸಣ್ಣಸ್ವಾಮಿ, ದೇವರಾಜು, ಪುಟ್ಟೇಗೌಡ, ಶಿವರಾಜು, ಪ್ರಸನ್ನ, ಮಂಜು, ಎಂ.ಗಿರೀಶ್, ಸಿದ್ದೇಗೌಡ, ಬಸವೇಗೌಡ, ಬಸವರಾಜ್, ರವಿ, ಮಂಜು, ಮಾನವಿಯಕ್ಕರ್, ಜಯಪ್ರಕಾಶ್, ಚಾಮಲಾಪುರ ಶಿವಯ್ಯ, ಸಿದ್ದನಾಯ್ಕ, ಚಾಮಳ್ಳಿ ಶ್ರೀನಿವಾಸ್, ಯೋಗೇಶ್, ಶಿವಣ್ಣಗೌಡ, ಅಮಾಸೆಗೌಡ, ಕಾಳಪ್ಪ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಖಂಡರು ಮತ್ತು ಗ್ರಾಮಸ್ಥರು ಹಾಜರಿದ್ದರು.

ಕೂಡಗಿಯಲ್ಲಿ ಅದ್ದೂರಿ ಶ್ರೀಮಾರಮ್ಮತಾಯಿ ಜಾತ್ರೆ

ಸರಗೂರು, ಏ.5– ತಾಲೂಕಿನ ಕೂಡಗಿ ಗ್ರಾಮದಲ್ಲಿ ಶ್ರೀಮಾರಮ್ಮ ತಾಯಿ ಜಾತ್ರೆ ಅದ್ದೂರಿಯಾಗಿ ನಡೆಯಿತು.


ಜಾತ್ರೆ ಅಂಗವಾಗಿ ಗ್ರಾಮದ ಹೊರವಲಯದಲ್ಲಿರುವ ಶ್ರೀಮಾರಮ್ಮ ತಾಯಿ ದೇವಾಲಯವನ್ನು ಹಾಗೂ ಗ್ರಾಮವನ್ನು ತಳಿರು ತೋರಣ ಹಾಗೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಧಾರ್ಮಿಕ ಪೂಜಾ ಕೈಕಂರ್ಯಗಳನ್ನು ದೇವಿಗೆ ನೆರವೇರಿಸಲಾಯಿತು. ಬಳಿಕ ಮಾರಮ್ಮ ತಾಯಿ ಉತ್ಸವಮೂರ್ತಿಯನ್ನು ನುಗು ನದಿ ದಡಕ್ಕೆ ತಂದು ಪೂಜೆ ಸಲ್ಲಿಸಿ ಪೂರ್ಣಕುಂಭ ಕಳಸದೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಯಿತು. ಈ ವೇಳೆ ಸತ್ತಿಗೆ ಸೂರಿಪಾನಿಗಳು, ಮಂಗಳವಾದ್ಯ ಸೇರಿದಂತೆ ಇತರೆ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ತಂದವು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ದೇವಸ್ಥಾನ ತಲುಪಿತು.



ಸ್ಪಷ್ಟನೆ: ನಾನು ಜೆಡಿಎಸ್ ಸೇರಿಲ್ಲ. ಜಿ.ಟಿ.ದೇವೇಗೌಡರು ನನ್ನ ಹಿತೈಷಿಗಳಾಗಿದ್ದು, ನನ್ನ ಹುಟ್ಟುಹಬ್ಬವಿದ್ದಿದ್ದರಿಂದ ಅವರ ಆಶೀರ್ವಾದ ಪಡೆಯಲು ಅವರನ್ನು ಭೇಟಿಯಾಗಿದ್ದಾಗಿ ಹುಣಸೂರು ನಗರಸಭಾ ಸದಸ್ಯ ಹರೀಶ್ ಸ್ಪಷ್ಟಪಡಿಸಿದ್ದಾರೆ. ಬುಧವಾರದ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ಇವರು ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆಯಾದರೆಂದು ಚಿತ್ರಸಹಿತ ವಿವರ ಪ್ರಕಟವಾಗಿತ್ತು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ

ಸರಗೂರಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಕಚೇರಿ ಉದ್ಘಾಟನೆ



ಸರಗೂರು, ಏ.5– ಹೆಚ್.ಡಿ.ಕೋಟೆ ಹಾಗೂ ನಂಜನಗೂಡು ಸೇರಿದಂತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಕಚೇರಿಯನ್ನು ಉದ್ಘಾಟಿಸಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಕೆಪಿಸಿಸಿ ಕಾರ್ಯಾಧ್ಯಕ್ಷ ಅರ್.ಧ್ರುವನಾರಾಯಣ್ ಅವರು ಇಲ್ಲದೆ ಇಂದು ಕಾರ್ಯಕ್ರಮ ನಡೆಸುತ್ತಿರುವುದು ತುಂಬಾ ನೋವಿನ ಸಂಗತಿ ಎಂದು ಭಾವುಕರಾದರು.

ಆರ್.ಧ್ರುವನಾರಾಯಣ್ ಅವರನ್ನು ಕಳೆದುಕೊಂಡು ರಾಜಕೀಯವಾಗಿ ನನಗೆ ಹಾಗೂ ರಾಜ್ಯದ ಹಲವು ನಾಯಕರಿಗೆ ತುಂಬಲಾರದ ನಷ್ಟವಾಗಿದೆ. ಅವರಿಗೆ ಹೆಗ್ಗಡದೇವನಕೋಟೆ ಜನತೆ ಬಗ್ಗೆ ಅಪಾರವಾದ ಗೌರವವಿತ್ತು. ತಾಲೂಕಿಗೆ ಮೊದಲ ಆದ್ಯತೆ ನೀಡುತ್ತಿದ್ದರು. ಅನಿಲ್ ಚಿಕ್ಕಮಾದು ಅವರು ಮತ್ತೊಮ್ಮೆ ಶಾಸಕರಾಗಬೇಕೆಂಬುದು ಮಹದಾಸೆಯಾಗಿತ್ತು ಇಂದು ಅವರ ಅನುಪಸ್ಥಿತಿಯಲ್ಲಿ ಚುನಾವಣೆಯನ್ನು ಎದುರಿಸಬೇಕಾಗಿದೆ ಎಂದರು. ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಮ್ಮ ಕ್ಷೇತ್ರದಲ್ಲಿ ಇಂದು ನನ್ನ ರಾಜಕೀಯ ಗುರುಗಳಾದ ತಂದೆ ಸಮಾನರಾದ ಆರ್. ಧ್ರುವನಾರಾಯಣ್ ರವರನ್ನು ಕಳೆದುಕೊಂಡು ಇಡೀ ಕ್ಷೇತ್ರ ತಬ್ಬಲಿಯಾಗಿದೆ. ಅವರ ಆದರ್ಶ ಗಳನ್ನು ಮೈಗೂಡಿಸಿಕೊಂಡು ನಾವೆಲ್ಲರೂ ಅವರ ಕನಸುಗಳನ್ನು ನನಸು ಮಾಡುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಮುಂದಾಗೋಣ ಎಂದರು. ಬೀಜ ನಿಗಮದ ಮಾಜಿ ಅಧ್ಯಕ್ಷ ಡಿ.ಸುಂದರದಾಸ್, ಪುರಸಭೆ ಮಾಜಿ ಅಧ್ಯಕ್ಷ ಎಸ್.ಬಿ.ಸತೀಶ್ ಕುಮಾರ್, ಏಜಾಜ್ ಪಾಷ, ಜಿಪಂ ಮಾಜಿ ಸದಸ್ಯರಾದ ರವಿ ಅವರು ಮಾತನಾಡಿದರು.

ಕೆಪಿಸಿಸಿ ಸದಸ್ಯರಾದ ಎಸ್.ಆರ್.ಜಯಮಂಗಳ, ಮಾದಪ್ಪ ಕೋಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಸರಗೂರು ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಬಿ.ವಿ. ಸೀತಾರಾಂ, ನಯಾಜ್, ಭೀಮರಾಜ್. ಬಾಡಗ ಮಾದಪ್ಪ, ಕೋಟೆ ಟೌನ್ ಅಧ್ಯಕ್ಷ ಪ್ರಕಾಶ್, ಪಪಂ ಸದಸ್ಯರಾದ ಶ್ರೀನಿವಾಸ್, ಚಲುವ ಕೃಷ್ಣ. ಜಿ.ಪಂ.ಮಾಜಿ ಸದಸ್ಯರಾದ ರವಿ, ಚಿಕ್ಕವೀರನಾಯಕ, ಎಂ.ಕೆಂಡಗಣ್ಣಸ್ವಾಮಿ, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ಹಿಂದುಳಿದ ಘಟಕದ ಅಧ್ಯಕ್ಷರಾದ ಬೀರ್ವಾಳು ಚಿಕ್ಕಣ್ಣ, ಬೀರ್ವಾಳು ಬಸವರಾಜು, ಸತೀಶ್ ಗೌಡ, ರಂಗನಾಥ್, ಬೀಮಯ್ಯ, ಇದೀಯಪ್ಪ, ಶಿವಶಂಕರನ್, ಯಶವಂತಪುರ. ಶಿವಲಿಂಗಯ್ಯ ಮಣಿಕಂಠ, ಚಾಮರಾಜು, ವ್ಯಂಟಯ್ಯ ಅಬ್ದುಲ್ ಜಲೀಲ್, ಸುಭಾನ್, ಚಲುವರಾಜು. ಚಿನ್ನಸ್ವಾಮಿ, ಸರಗೂರು ಹೆಚ್.ಡಿ.ಕೋಟೆ ತಾಲೂಕು ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಕಾಂಗ್ರೆಸ್‌ಗೆ ನೇಮಕ



ನಂಜನಗೂಡು, ಏ.5– ನಗರದ ಹಿರಿಯ ರಾಜಕಾರಣಿ, ಕಾಂಗ್ರೆಸ್ ಪಕ್ಷದ ಮುಖಂಡರಾದ ಅಶೋಕಪುರಂನ ಮಹದೇವು (ರ್ಯಾಂಬೋ) ಅವರನ್ನು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಗ್ರಾಮಾಂತರ ಪರಿಶಿಷ್ಟ ವಿಭಾಗದ ಅಧ್ಯಕ್ಷ ಕೆ.ಎಸ್.ಸಿದ್ದರಾಜು ತಿಳಿಸಿದ್ದಾರೆ.

ಶೋಷಿತ ಸಮುದಾಯಗಳ ಆಶಾಕಿರಣವಾಗಿದ್ದ ಬಾಬೂಜಿ

ನಂ.ಗೂಡು ಕಾಂಗ್ರೆಸ್ ಕಚೇರಿಯಲ್ಲಿ ಬಾಬೂಜಿ ಜಯಂತಿ ಆಚರಣೆ



ನಂಜನಗೂಡು, ಏ.5– ಹಸಿರುಕ್ರಾಂತಿಯ ಮೂಲಕ ದೇಶದ ಆಹಾರ ಕೊರತೆಯನ್ನು ನೀಗಿಸಿದ ಕೀರ್ತಿ ಡಾ. ಬಾಬು ಜಗಜೀವನ ರಾಮ್ ಅವರಿಗೆ ಸಲ್ಲುತ್ತದೆ. ಅಲ್ಲದೆ ಅವರು ಶೋಷಿತ ಸಮುದಾಯಗಳ ಆಶಾಕಿರಣವಾಗಿದ್ದರು ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ತಿಳಿಸಿದ್ದಾರೆ.


ನಗರದ ಆರ್.ಪಿ. ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಾಬು ಜಗಜೀವನ ರಾಮ್ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಾಬೂಜಿ ದೇಶ ಕಂಡ ಅಪರೂಪದ ರಾಜಕಾರಣಿ, ಅವರು ಕಾರ್ಮಿಕ ಮಂತ್ರಿಯಾಗಿ, ರಕ್ಷಣಾ ಮಂತ್ರಿಯಾಗಿ, ಅನೇಕ ಖಾತೆಗಳಲ್ಲಿ ಕಾರ್ಯನಿರ್ವಹಿಸಿ ದೇಶದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರು ಕೃಷಿ ಮಂತ್ರಿಯಾಗಿದ್ದ ವೇಳೆ ದೇಶದಲ್ಲಿದ್ದ ಹಸಿವು ಆಹಾರ ಕೊರತೆಯನ್ನು ನೀಗಿಸುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ಹೊಸ ತಳಿಯನ್ನು ಸಂಶೋಧನೆ ನಡೆಸಿ ಆಹಾರ ಅಭಾವ ನೀಗಿಸಿದರು ಎಂದರು. ಅವರ ಪರಿಶ್ರಮದಿಂದಾಗಿ ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಗಳಿಸಿದೆ. ಕಾರ್ಮಿಕ ಸಚಿವರಾಗಿದ್ದ ವೇಳೆ ಕಾರ್ಮಿಕರಿಗಾಗಿ ಅನೇಕ ಯೋಜನೆಗಳನ್ನು ತಂದು ಕಾರ್ಮಿಕರಿಗೆ ಬದ್ಧತೆ ಒದಗಿಸಿದ ಮಹಾನ್ ನಾಯಕರಾಗಿದ್ದಾರೆ. ಅವರ ತತ್ವ ಸಿದ್ಧಾಂತಗಳನ್ನು ನಾವು ಪಾಲಿಸಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಜಿಪಂ ಮಾಜಿ ಸದಸ್ಯೆ ಲತಾ ಸಿದ್ಧಶೆಟ್ಟಿ, ಮುಖಂಡರಾದ ದೊರೆಸ್ವಾಮಿ ನಾಯಕ, ಮಂಜುನಾಥ್, ಶ್ರೀಧರ್, ಪರಶಿವಮೂರ್ತಿ, ದೇವರಾಜು, ಶ್ರೀನಿವಾಸ್ ನಂಜನಹಳ್ಳಿ ಮಾದಪ್ಪ, ಸ್ವಾಮಿ, ಪ್ರದೀಪ್, ಪರ್ವೀಜ್, ಸುಂದರ್ ರಾಜು, ಶಿವಪ್ಪದೇವರು ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ, ಮತ್ತೊಮ್ಮೆ ಸೇವೆಗೆ ಅವಕಾಶ ಕಲ್ಪಿಸಿ

ಕುರುಬೂರು ಗ್ರಾಮದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ಮನವಿ



ತಿ.ನರಸೀಪುರ, ಮಾ.5– ಶಾಸಕನಾಗಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಪಕ್ಷಬೇಧ ಮಾಡದೇ ಎಲ್ಲರನ್ನೂ ಸಮಾನತೆಯಿಂದ ಕಂಡಿದ್ದೇನೆ. ಪ್ರಸಕ್ತ ಚುನಾವಣೆಯಲ್ಲಿ ಮತ್ತೊಮ್ಮೆ ಕ್ಷೇತ್ರದ ಜನತೆಯ ಸೇವೆಗೆ ಮತ್ತೊಂದು ಅವಕಾಶ ಮಾಡಿಕೊಡಿ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಮನವಿ ಮಾಡಿದರು.

ತಾಲೂಕಿನ ಕುರುಬೂರು ಗ್ರಾಮದಲ್ಲಿ ಪಕ್ಷದ ಹಾಗೂ ಗ್ರಾಮದ ಹಲವಾರು ಮುಖಂಡರನ್ನು ಭೇಟಿ ಮಾಡಿ, ಮತಯಾಚಿಸಿ ಅವರು ಮಾತನಾಡಿದರು.

ಕ್ಷೇತ್ರದ ಜನರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ತೋರಿದ್ದ ಪ್ರೀತಿ ವಿಶ್ವಾಸ ಮರೆಯಲಾಗದು. ನೀವು ತೋರಿಸಿದ ವಿಶ್ವಾಸ ಮತ್ತು ಸಹಕಾರ ನನ್ನ ಅಭೂತಪೂರ್ವ ಗೆಲುವಿಗೆ ಸಾಕ್ಷಿಯಾಯಿತು. ನೀವು ನನ್ನ ಮೇಲೆ ತೋರಿದ ಪ್ರೀತಿ ವಿಶ್ವಾಸಕ್ಕೆ ನನ್ನ ಅಧಿಕಾರಾವಧಿಯಲ್ಲಿ ಯಾವುದೇ ಚ್ಯುತಿ ಬರದಂತೆ ನಡೆದುಕೊಂಡಿದ್ದೇನೆ. ಎಲ್ಲರನ್ನೂ ಗೌರವವಾಗಿ ಕಂಡಿದ್ದೇನೆ.ನನ್ನ ಶಾಸಕತ್ವದ ಅವಧಿಯಲ್ಲಿ ಯಾವುದೇ ಕೋಮು ಗಲಭೆಗೆ ಅವಕಾಶ ಮಾಡಿಕೊಡದೇ ಕ್ಷೇತ್ರದಲ್ಲಿ ಶಾಂತಿ ಸೌಹಾರ್ದತೆಗೆ ಹೆಚ್ಚಿನ ಒತ್ತು ನೀಡಿದ್ದೇನೆ ಎಂದರು.

ಈಗ ಮತ್ತೆ ಚುನಾವಣೆ ಬಂದಿದೆ ಜೆಡಿಎಸ್ ಪಕ್ಷದ ಅಭ್ಯರ್ಥಿಯಾಗಿ ಮತ್ತೆ ನಿಮ್ಮ ಆಶೀರ್ವಾದ ಪಡೆಯಲು ಬಂದಿದ್ದೇನೆ. ಶಾಸಕನಾದ 5 ವರ್ಷಗಳ ಅವಧಿಯಲ್ಲಿ ಒಬ್ಬ ಶಾಸಕ ಮಾಡಬಹುದಾದ ಅಭಿವೃದ್ಧಿ ಕೆಲಸಗಳಿಗಿಂತಲೂ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಯತ್ನಿಸಿದ್ದೇನೆ. ರಾಜ್ಯದಲ್ಲಿ ನಮ್ಮ ಸರ್ಕಾರ ಇಲ್ಲದಿದ್ದರೂ ಹೋರಾಟ ಮಾಡಿ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಿ ಕೆಲಸ ಮಾಡಿದ್ದೇನೆ ಎಂದರು.

ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಎಲ್ಲರನ್ನು ಪ್ರತ್ಯೇಕವಾಗಿ ಸಂಪರ್ಕಿಸಲು ಸಾಧ್ಯವಾಗದಿರಬಹುದು. ಅದಕ್ಕೆ ಪಕ್ಷದ ಕಾರ್ಯಕರ್ತರು ಬೇಸರ ಮಾಡಿಕೊಳ್ಳದೆ ನನಗೆ ಸಹಕಾರ ನೀಡಿ ಮತ್ತೊಂದು ಅವಧಿಗೆ ಅವಕಾಶ ಮಾಡಿಕೊಡಬೇಕು. ಕ್ಷೇತ್ರದ ಜನರು ನನ್ನಮೇಲಿಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಬೆಲೆ ಕಟ್ಟಲಾಗದು. ಕಳೆದ ಬಾರಿ ಚುನಾವಣೆಯಲ್ಲಿ ಜಿ.ಪಂ ಸದಸ್ಯನಾಗಿದ್ದ ನನ್ನನ್ನು ಶಾಸಕನನ್ನಾಗಿ ಆಯ್ಕೆ ಮಾಡಿದ ನಿಮಗೆ ಆಭಾರಿಯಾಗಿದ್ದೇನೆ. ಜೆಡಿಎಸ್ ಪಕ್ಷ ರೈತ ಪರವಾದ ಪಕ್ಷವಾಗಿದೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ರಾಜ್ಯದ ಕಲ್ಯಾಣಕ್ಕಾಗಿ ತಮ್ಮದೇ ಆದ ಕನಸು ಕಂಡಿದ್ದಾರೆ ಎಂದರು. ಚುನಾವಣೆ ಸಮೀಪಿಸುತ್ತಿದೆ. ಕಾಲಾವಕಾಶ ಕಡಿಮೆ ಇದೆ ಹಾಗಾಗಿ ಕಾರ್ಯಕರ್ತರು ಮುಖಂಡರು ಪಕ್ಷದ ಗೆಲುವಿಗೆ ಅನುಸರಿಸಬೇಕಾದ ಕಾರ್ಯತಂತ್ರಗಳನ್ನು ಮಾಡುವ ಮೂಲಕ ಕ್ಷೇತ್ರದಲ್ಲಿ ಮತ್ತೊಮ್ಮೆ ಪಕ್ಷದ ಬಾವುಟ ಹಾರಿಸಲು ಹಗಲಿರುಳು ಶ್ರಮಿಸುವಂತೆ ಕರೆ ನೀಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ವೀರೇಶ್, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಸದಸ್ಯ ಜೈಪಾಲ್ ಭರಣಿ, ಎಂ.ಕೆ. ಅಡುಗೆ ಗ್ರೂಪ್ ಮಾಲೀಕ ಉಕ್ಕಲಗೆರೆ ಕುಮಾರ್, ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ, ಮುಖಂಡರಾದ ಗಣೇಶ್, ಮೂಗೂರು ಶಿವಮೂರ್ತಿ, ಸುಂದರ, ಶಂಭು ದೇವನಪುರ ರಮೇಶ್, ರಾಜೇಶ್ ಮತ್ತಿತರರಿದ್ದರು.

ಪ್ರಧಾನಿ ಮೋದಿ ಅವರಿಗೆ ಅಭಿಷೇಕ್ ಅಂಬರೀಶ್ ವಿವಾಹದ ಕರೆಯೋಲೆ....

ಸಾಮಾಜಿಕ ಜಾಲತಾಣದಲ್ಲಿ ಸಂಭ್ರಮ ಹಂಚಿಕೊಂಡ ಸುಮಲತಾ ಅಂಬರೀಶ್



ನವದೆಹಲಿ, ಏ.5– ತಮ್ಮ ಪುತ್ರನೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂಸದೆ ಸುಮಲತಾ ಅಂಬರೀಶ್ ಅವರು ಜೂನ್ ತಿಂಗಳಿನಲ್ಲಿ ನಡೆಯಲಿರುವ ಪುತ್ರ ಅಭಿಷೇಕ್ ವಿವಾಹಕ್ಕೆ ಆಹ್ವಾನ ನೀಡಿದರು.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಛಾಯಾಚಿತ್ರದೊಂದಿಗೆ ಪೋಸ್ಟ್ ಅಪ್‌ಲೋಡ್ ಮಾಡಿರುವ ಸುಮಲತಾ, ವಿಶ್ವದ ಅತ್ಯಂತ ಜನಪ್ರಿಯ ಮತ್ತು ಗೌರವಾನ್ವಿತ ಹಾಗೂ ಪ್ರಗತಿಗಾಗಿ ಸದಾ ಸಮರ್ಪಣಾ ಮನೋಭಾವ ಹೊಂದಿರುವ ನಾಯಕರಿಂದ ಪುತ್ರ ಅಭಿಷೇಕ್ ಅಂಬರೀಶ್ ಅವರು ಆಶೀರ್ವಾದ ಪಡೆಯುವಂತಹ ಸೌಭಾಗ್ಯವನ್ನು ಬುಧವಾರ ಪಡೆದರು. ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವದಲ್ಲಿ ಭಾರತವು ಭವಿಷ್ಯದಲ್ಲಿ ಇನ್ನೂ ಮಹತ್ತರವಾದ ಹೆಜ್ಜೆಗಳನ್ನು ಇಡಲಿದೆ ಎನ್ನುವ ವಿಶ್ವಾಸ ನನ್ನದು. ಭಾರತಕ್ಕೆ ಮತ್ತು ಕರ್ನಾಟಕಕ್ಕೆ ಇಂತಹ ಭರವಸೆಯ ನಾಯಕರು ಮತ್ತು ನಾಯಕತ್ವದ ಅಗತ್ಯ ಇದೆ ಎನ್ನುವ ದೃಢ ನಂಬಿಕೆ ನನ್ನದು. ಅಭಿಷೇಕ್ ಅಂಬರೀಶ್ ಅವರ ಮದುವೆಗೆ ಆಗಮಿಸುವಂತೆ ಅವರನ್ನು ಭೇಟಿ ಮಾಡಿ, ಆಮಂತ್ರಣ ಪತ್ರಿಕೆ ನೀಡಿ ಆಶೀರ್ವಾದ ಪಡೆಯಲಾಯಿತು.

ಇದೇ ಸಂದರ್ಭದಲ್ಲಿ ರಾಜ್ಯದ ಮತ್ತು ನನ್ನ ಮಂಡ್ಯ ಕ್ಷೇತ್ರದ ಬಗ್ಗೆ ಹಲವು ವಿಚಾರಗಳನ್ನು ಚರ್ಚಿಸಲಾಯಿತು. ಪ್ರಧಾನಿಗಳು ಮಂಡ್ಯಕ್ಕೆ ಬಂದಾಗ ನನ್ನ ಸ್ವಾಭಿಮಾನಿ ಜನತೆ ಅವರನ್ನು ಬರಮಾಡಿಕೊಂಡ ರೀತಿಯನ್ನು ನೆನಪಿಸಿಕೊಂಡು ಶ್ಲಾಘಿಸಿದರು. ಮಂಡ್ಯ ಹಾಗೂ ಕರ್ನಾಟಕದ ಬಗ್ಗೆ ಅವರಿಗಿರುವ ಅಪಾರವಾದ ಅಭಿಮಾನಕ್ಕೆ ನನ್ನ ತುಂಬು ಹೃದಯದ ಧನ್ಯವಾದಗಳು ಎಂದು ಸುಮಲತಾ ಅಂಬರೀಷ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

ನಟ ಸುದೀಪ್ ನಿಂದಿಸಿ ಪತ್ರ

ಪ್ರಕರಣ ದಾಖಲಿಸಿದ ಪೊಲೀಸರು



ಬೆಂಗೂರು, ಏ. 5– ರಾಸಲೀಲೆ ವಿಡಿಯೋಗಳನ್ನು ಲೀಕ್ ಮಾಡುವುದಾಗಿ ಚಿತ್ರನಟ ಕಿಚ್ಚಾ ಸುದೀಪ್ ಅವರಿಗೆ ದುಷ್ಕರ್ಮಿಗಳು ಎರಡು ಪತ್ರಗಳನ್ನು ರವಾನಿಸಿರುವ ಬಗ್ಗೆ ತಡವಾಗಿ ವರದಿಯಾಗಿದೆ.

ಸುದೀಪ್ ಅವರ ಬೆಂಗಳೂರಿನ ಜೆಪಿ ನಗರ 6ನೇ ಹಂತದಲ್ಲಿರುವ ನಿವಾಸಕ್ಕೆ ಮಾರ್ಚ್ 10ರಂದು ಎರಡು ಪತ್ರಗಳು ಬಂದಿದ್ದು, ಸುದೀಪ್ ಅವರ ತಂದೆ ಸಂಜೀವ್ ಮತ್ತು ತಾಯಿ ಸರೋಜಮ್ಮ ಅವರ ಕುಟುಂಬದ ಕೇರ್‌ಟೇಕರ್ ಆಗಿರುವ ಚಿತ್ರ ನಿರ್ಮಾಪಕರೂ ಆದ ಮಂಜುನಾಥ್ ಅಲಿಯಾಸ್ ಜಾಕ್ ಮಂಜ ನೀಡಿದ ದೂರನ್ನು ನ್ಯಾಯಾಲಯದ ಆದೇಶ ಪಡೆದು ಮಾರ್ಚ್ 29ರಂದು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಭಾರತೀಯ ದಂಡಸಂಹಿತೆ 120ಬಿ, 506, 504ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿಯವರು ಸಿಸಿಬಿ ತನಿಖೆಗೆ ಒಪ್ಪಿಸಿದ್ದಾರೆ. ಇಂದು ಸುದೀಪ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಡಗೂಡಿ ಸುದ್ದಿಗೋಷ್ಠಿ ನಡೆಸಿದ ಬೆನ್ನಲ್ಲೇ ಈ ಬೆದರಿಕೆ ಪತ್ರಗಳ ಬಗ್ಗೆ ಹಲವಾರು ಊಹಾಪೋಹಗಳು ಎದ್ದಿವೆ.

ಮಕ್ಕಳ ಬೇಸಿಗೆ ಶಿಬಿರ

ಮೈಸೂರು, ಏ.5– ಮೈಸೂರಿನ ಯವನಿಕ ಹಾಗೂ ನೇಪಥ್ಯ ರಂಗ ತಂಡದಿಂದ ಏ.5 ರಿಂದ 30 ರವರೆಗೆ ಚಿಣ್ಣರ ಚಿಲಿಪಿಲಿ ಮಕ್ಕಳ ಬೇಸಿಗೆ ಶಿಬಿರವನ್ನು ಕೃಷ್ಣರಾಜ ಬೂಲೇವಾರ್ಡ್ ರಸ್ತೆಯ ಶ್ರೀ ಜಯಚಾಮರಾಜ ಅರಸು ಎಜುಕೇಷನಲ್ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಮಂಜುನಾಥ್ ನೇಪಥ್ಯ, ಮೊ. 98808 17153 ಸಂಪರ್ಕಿಸಬಹುದು.

ಕಲಾಭೂಮಿ ಪ್ರತಿಷ್ಠಾನ : ಕಲಾಭೂಮಿ ಪ್ರತಿಷ್ಠಾನವು ಮೇ 12 ರಿಂದ ಕುಣಿಯೋಣು ಬಾರ ಮಕ್ಕಳ ಬೇಸಿಗೆ ಶಿಬಿರ ಏರ್ಪಡಿಸಿದ್ದು, ಆಸಕ್ತರು ಮೊ. 89510 28418 ಸಂಪರ್ಕಿಸಬಹುದು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರಾದ . ಶ್ರೀ.ಎ.ಸಲೀಂ ಅಹ್ಮದ್ ಅಲಿಯಾಸ್ ಅಹ್ಮದ್ ಸಲೀಂ ಅಹ್ಮದ್.ಬಿನ್.ಲೇಟ್.ಅಲ್ಲಾ ಬಕಾಷ್ ಮತ್ತು ಅವರ ಕುಟುಂಬದವರು, ಇವರ ವಾಸ : 2354/1, 1ನೇ ಮುಖ್ಯ ರಸ್ತೆ, ಕೈಲಾಶಪುರಂ, ಮಂಡಿ ಮೊಹಲ್ಲಾ, ಮೈಸೂರು ಸಿಟಿ–570001 ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿ ರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು ಆಸಕ್ತಿ, ಬಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು. ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ ಟಿ ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದಲ್ಲಿರುವ ವ್ಯವಸಾಯದ ಜಮೀನುಗಳಾದ ಸರ್ವೆ ನಂಬರುಗಳು (1) 131 ರ ವಿಸ್ತೀರ್ಣ 01 ಎಕರೆ, (2) 140/3ರ ವಿಸ್ತೀರ್ಣ 08 ಗುಂಟೆ, (3) 140ರ ವಿಸ್ತೀರ್ಣ 04 ಎಕರೆ 29 ಗುಂಟೆ, 10 ಗುಂಟೆ ಖರಾಬು ಸೇರಿ, (4) 143/1ರ ವಿಸ್ತೀರ್ಣ 02 ಎಕರೆ 13 ಗುಂಟೆ, 01 ಗುಂಟೆ ಖರಾಬು ಸೇರಿ, (5) 143/2ರ ವಿಸ್ತೀರ್ಣ 02 ಎಕರೆ 30 ಗುಂಟೆ (6) 143/3 (ಹಳೆ ನಂಬರ್ 143/1)ರ ವಿಸ್ತೀರ್ಣ 02 ಎಕರೆ 12 ಗುಂಟೆ, (7) 144ರ ವಿಸ್ತೀರ್ಣ 02 ಎಕರೆ 31 ಗುಂಟೆ ಮತ್ತು (8) 145 ರ ವಿಸ್ತೀರ್ಣ 03 ಎಕರೆ 20ಗುಂಟೆ 2 ಗುಂಟೆ ಖರಾಬು ಸೇರಿ– ಒಟ್ಟು 19 ಎಕರೆ 23 ಗುಂಟೆ, 13 ಗುಂಟೆ ಖರಾಬು ಸೇರಿ.

ಸಹಿ/–ಡಿ.ಜಿ.ನಾಗೇಂದ್ರ ಪ್ರಸಾದ್, ವಕೀಲರು,
ಕೆಎಆರ್ 1609/2005, ನಂ.405, 4ನೇ ಮುಖ್ಯರಸ್ತೆ, ಎಸ್.ವಿ.ಪಿ ನಗರ, ಟಿ.ನರಸೀಪುರ ರಸ್ತೆ, ಮೈಸೂರು–570028,
ಮೊನಂ: 9916139244
email: nagendraprasad.dg@gmail.com
ಸ್ಥಳ: ಮೈಸೂರು

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು



ಶ್ರೀ.ಬಿ.ಬೋರೇಗೌಡ್ರು (ಗಂಡೈದ)

(ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಗ, ಕೆ.ಜಿ.ಕೊಪ್ಪಲ್, ಮೈಸೂರು)

ಮಾಲೀಕರು: ಶ್ರೀ ಕಾಲಭೈರವೇಶ್ವರ ಕನ್ವೆನ್ಷನ್ ಹಾಲ್

ನಿಮ್ಮ ಅಗಲಿಕೆಯ ನೋವಿನ ಛಾಯೆ ನಮ್ಮಲ್ಲಿ ಶಾಶ್ವತ ನೋವನ್ನು ತಂದಿದೆ.
ನಿಮ್ಮ ನೆನಪಿನಲ್ಲೇ ಜೀವನವಿಡಿ ಇರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ.

ದುಃಖತಪ್ತರು:

ಮೃತರ ತಾಯಿ ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಕ್ಕಳು, ಮೃತರ ಪತ್ನಿ ಶ್ರೀಮತಿ ಹೆಚ್.ಎಸ್. ಪುಷ್ಪಲತಾ ಮತ್ತು ಮಕ್ಕಳಾದ ಬಿ.ಚಂದನ, ಬಿ.ಶರತ್‌ಗೌಡ, ಅರವಿಂದನಗರ ಹಾಗೂ ಬಂಧು–ಮಿತ್ರರು

